Editor: NITYANANDASWAMI Publisher: U. BASAVARAJA

RNI No. KARKAN/2006/17926


ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–47 | ನವೆಂಬರ್ 20–26, 2023 | ಪುಟ 16 | ರೂ. 10/–

Volume-17 | Issue-47 | November 20-26, 2023 | Pages:16 | Price: 10/-

ಹೆಚ್ಚುತ್ತಿರುವ ನಿರುದ್ಯೋಗ ಸರಕಾರದ ಅಸಂಬದ್ಧತೆ ಬಯಲು







ಅಗಲಿದ ಶ್ರಮಜೀವಿಗಳ ಉನ್ನತ ನಾಯಕರು :

ಹಿರಿಯ ಸ್ವಾತಂತ್ರ್ಯ ಹೋರಾಟಗಾರ
ಕಾಮ್ರೇಡ್ ಎನ್.ಶಂಕರಯ್ಯ

ಖ್ಯಾತ ಸಂಸದೀಯ ನಾಯಕ
ಕಾಮ್ರೇಡ್ ಬಸುದೇವ ಆಚಾರ್ಯ

ಎರಡು 'ಭಾರತ'ಗಳು





ದಲಿತ ಸಮುದಾಯದ ದಿಕ್ಕು ದೆಸೆ : ಅನುಸಂಧಾನದ ಶೃಂಗಸಭೆ

ಸ್ವಾತಂತ್ರ್ಯ ಹೋರಾಟಗಾರ–ಭಾರತದ ಕಮ್ಯುನಿಸ್ಟ್ ಚಳವಳಿಯ ಹಿರಿಯ ನಾಯಕ ಶ್ರಮಜೀವಿಗಳ ಸಂಗಾತಿ ಎನ್. ಶಂಕರಯ್ಯ ನಿಧನ

ಮಾರ್ಕಿಸ್ಟ್ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಮತ್ತು ದೇಶದ ಹಿರಿಯ ಕಮ್ಯುನಿಸ್ಟ್ ನಾಯಕರಲ್ಲಿ ಒಬ್ಬರಾದ, ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವನ್ನು ಸ್ಥಾಪಿಸಿದ 32 ನಾಯಕರಲ್ಲಿ ಒಬ್ಬರಾದ, ತಮಿಳುನಾಡಿನ ಕಾಮ್ರೇಡ್ ಎನ್. ಶಂಕರಯ್ಯ ಅವರು ನವೆಂಬರ್ 15, 2023 ರಂದು ನಿಧನರಾದರು. ಅವರಿಗೆ 102 ವರ್ಷಗಳಾಗಿತ್ತು.

ಕಾಮ್ರೇಡ್ ಶಂಕರಯ್ಯನವರ ಪೂರ್ವಜರು ತೂತುಕುಡಿ ಜಿಲ್ಲೆಯ ತಿರುಚೆಂದೂರು ತಾಲೂಕಿನ ಆತೂರು ಗ್ರಾಮದವರು. ಅವರ ಪೂರ್ವಜರು ಆನುವಂಶಿಕ ಗ್ರಾಮಾಧಿಕಾರಿಗಳು. ಅವರ ತಂದೆ ನರಸಿಮ್ಮಲು ಎಂಜಿನಿಯರ್ ಆಗಿದ್ದರು, ಅವರಿಗೆ ಗ್ರಾಮಾಧಿಕಾರಿಯಾಗಿ ಕೆಲಸ ಮಾಡಲು ಇಷ್ಟವಿರಲಿಲ್ಲ. ಕೋವಿಲ್ಪಟ್ಟಿಯಲ್ಲಿ ಜಪಾನ್ ಕಂಪನಿಯಲ್ಲಿ ನರಸಿಮ್ಮಲು ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಕೆಲಸ ಮಾಡುವಾಗ ಕಾಂ. ಶಂಕರಯ್ಯ ಕೋವಿಲ್ಪಟ್ಟಿಯಲ್ಲಿ ಜುಲೈ 15, 1921 ರಲ್ಲಿ ಜನಿಸಿದರು.

ನರಸಿಮ್ಮಲು ತಮ್ಮ ಮಗನಿಗೆ ಪ್ರತಾಪ ಚಂದ್ರನ್ ಎಂದು ಹೆಸರಿಟ್ಟರು. ಆದರೆ ನರಸಿಂಹಲು ಅವರ ತಂದೆ ಎಲ್.ಶಂಕರಯ್ಯ ಮೊಮ್ಮಗನಿಗೆ ತನ್ನ ಹೆಸರನ್ನೇ ಇಡಬೇಕು ಎಂದು ಹಠ ಹಿಡಿದಿದ್ದರಿಂದ ಪ್ರತಾಪ ಚಂದ್ರನ್ ಎಂಬ ಅವರ ಹೆಸರನ್ನು ಶಂಕರಯ್ಯ ಎಂದು ಬದಲಾಯಿಸಲಾಯಿತು.

ಶಂಕರಯ್ಯನವರ ಒಡಹುಟ್ಟಿದವರು 9 ಜನ, ಹಿರಿಯವರು ರಾಜಮಾಣಿಕಂ, ಸಹೋದರರು ರಾಮಸಾಮಿ, ರಾಮಕೃಷ್ಣನ್ ಮತ್ತು ರಾಜೇಂದ್ರನ್, ಸಹೋದರಿಯರಾದ ಲಕ್ಷ್ಮೀಕಾಂತಮ್ಮಾಳ್, ಜ್ಞಾನಾಂಬಾಳ್, ಮೀನಾಕ್ಷಿ, ಅಂಗಮಾಳ್.

ವಿದ್ಯಾಭ್ಯಾಸ

ಶಂಕರಯ್ಯ ತೂತುಕುಡಿಯ ವೇಲೂರು ಶಾಲೆಯಲ್ಲಿ ಎಂಟನೇ ತರಗತಿವರೆಗೆ ಓದಿದರು. ತಂದೆ ನರಸಿಮ್ಮಲು ಬಾಂಬೆಗೆ ಹೋಗಿ ಬಾಯ್ಲರ್ ಇಂಜಿನಿಯರಿಂಗ್ ಓದಿ ಮಧುರೈ ಮುನ್ಸಿಪಲ್ ಕಾರ್ಪೊರೇಷನ್ ನಲ್ಲಿ ವಾಟರ್ ಪಂಪ್ ಸೂಪರಿಂಟೆಂಡೆಂಟ್ ಆಗಿ ಉದ್ಯೋಗ ಪಡೆದರು. ಅವರ ಕುಟುಂಬವೂ ಮಧುರೈಗೆ ಸ್ಥಳಾಂತರಗೊಂಡಿತು. ಮಧುರೈ ಸೇಂಟ್ ಮೇರಿ ಶಾಲೆಯಲ್ಲಿ 9 ನೇ ತರಗತಿ ಮತ್ತು ಮಧುರೈ ಯೂನಿಯನ್ ಕ್ರಿಶ್ಚಿಯನ್ ಶಾಲೆಯಲ್ಲಿ 10 ನೇ ಮತ್ತು 11 ನೇ ತರಗತಿಯನ್ನು ಓದಿದರು ಮತ್ತು 1937 ರಲ್ಲಿ ಉತ್ತೀರ್ಣರಾದರು.

ಮಧುರೈನ ಅಮೇರಿಕನ್ ಕಾಲೇಜಿನಲ್ಲಿ ಇತಿಹಾಸವನ್ನು ಆರಿಸಿಕೊಂಡು, 1939 ರಲ್ಲಿ ಇಂಟರ್ಮೀಡಿಯೇಟ್ ಉತ್ತೀರ್ಣರಾದರು. ಅದೇ ಕಾಲೇಜಿನಲ್ಲಿ ಬಿ.ಎ. ಅಂತಿಮ ವರ್ಷದವರೆಗೆ ಓದಿದರು.

ವಿದ್ಯಾರ್ಥಿ ಚಳುವಳಿಯಿಂದ ಸ್ವಾತಂತ್ರ್ಯ ಚಳುವಳಿಯತ್ತ

ಶಂಕರಯ್ಯನವರು ಮಧುರೈನ ಅಮೆರಿಕನ್ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸ್ವಾತಂತ್ರ ಚಳವಳಿಯ ಬಗ್ಗೆ ಅವರಿಗೆ ಅಪಾರ ಗೌರವವಿತ್ತು. 1938 ರಲ್ಲಿ, ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯಗಳ ವೈವಿಧ್ಯತೆಯಿಂದ ಕೂಡಿರುವ ಇಡೀ ಭಾರತದ ಮೇಲೆ ಹಿಂದಿ ಎಂಬ ಒಂದೇ ಭಾಷೆಯನ್ನು ಹೇರಲು ಪ್ರಯತ್ನಿಸಲಾಯಿತು. 1938ರಲ್ಲಿ ಶಂಕರಯ್ಯ ಅವರು ತಮಿಳುನಾಡಿನಲ್ಲಿ ಹಿಂದಿ ಹೇರಿಕೆಯನ್ನು ವಿರೋಧಿಸಿ ವಿದ್ಯಾರ್ಥಿಗಳ ಜೊತೆಗೂಡಿ ಪ್ರತಿಭಟನೆ ನಡೆಸಿದರು. ಮತ್ತು ರಾಜಾಜಿಗೆ ಕಪ್ಪು ಬಾವುಟವನ್ನು ಪ್ರದರ್ಶಿಸಿದರು.

ಪರಿಶಿಷ್ಟರಿಗೆ ದೇವಸ್ಥಾನ ಪ್ರವೇಶ ಹೋರಾಟ

ಭಾರತದಲ್ಲಿ ಹಲವು ಶತಮಾನಗಳಿಂದ ಬೇರೂರಿದ್ದ ಸನಾತನವಾದಿಗಳು, ಪರಿಶಿಷ್ಟ ಪಂಗಡದವರಿಗೆ ದೇವಸ್ಥಾನ ಪ್ರವೇಶ ಮಾಡುವ ಹಕ್ಕನ್ನು ಕಸಿದುಕೊಂಡಿದ್ದು, 1939ರಲ್ಲಿ ಮಧುರೈ ಮೀನಾಕ್ಷಿ ಅಮ್ಮನ ದೇವಸ್ಥಾನ ಪ್ರವೇಶಿಸುವಂತೆ ಪ್ರತಿಭಟನೆ ನಡೆಸಿದ ಶಂಕರಯ್ಯನವರು, ಪರಿಶಿಷ್ಟ ಪಂಗಡದವರ ಪರ ದನಿ ಎತ್ತಿದ್ದರು. ಈ ಹೋರಾಟವು ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿತು.

17 ನೇ ವಯಸ್ಸಿನಲ್ಲಿ ಪಕ್ಷ ಸೇರ್ಪಡೆ

ಶಂಕರಯ್ಯ ಅವರು 17 ನೇ ವಯಸ್ಸಿನಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾಕ್ಕೆ ಸೇರಿದರು ಮತ್ತು ಮಧುರೈ ಕಮ್ಯುನಿಸ್ಟ್ ಪಕ್ಷದ ಮೊದಲ ಶಾಖೆಯನ್ನು ಜನವರಿ 1940 ರಲ್ಲಿ ರಚಿಸಿದಾಗ ಅದರ ಒಂಬತ್ತು ಸದಸ್ಯರಲ್ಲಿ ಒಬ್ಬರಾಗಿದ್ದರು.

1940 ರಲ್ಲಿ, ಅಮೇರಿಕನ್ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಕಾಮ್ರೇಡ್ ಎ.ಕೆ.ಗೋಪಾಲನ್ ಅವರೊಂದಿಗೆ ಸಂಪರ್ಕ ಸಾಧಿಸಿದರು. ಆಗ ಅವರು ಮಧುರೈ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದರು.

ಬ್ರಿಟಿಷರ ವಿರುದ್ಧ ಹೋರಾಟ, ಬಂಧನ, ಜೈಲು


ಶಂಕರಯ್ಯ ಅವರು ಮಾರ್ಚ್ 1941 ರಲ್ಲಿ ಬಿ.ಎ. ಅಂತಿಮ ಪರೀಕ್ಷೆ ಬರೆಯಲು 15 ದಿನಗಳಿದ್ದವು. ಆಗ ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ಭಾಗವಹಿಸಿದಾಗ ಭಾರತೀಯ ಭದ್ರತಾ ಕಾಯಿದೆಯಡಿಯಲ್ಲಿ ಅವರನ್ನು ಬಂಧಿಸಲಾಯಿತು. ಅಲ್ಲಿಗೆ ಅವರ ಓದು ನಿಂತಿತು. ಮಗನನ್ನು ವಕೀಲನನ್ನಾಗಿ ಮಾಡಬೇಕೆಂಬ ತಂದೆಯ ಆಸೆಯೂ ಹುಸಿಯಾಯಿತು. ಬ್ರಿಟಿಷರು ಅವರನ್ನು ವೆಲ್ಲೂರು ಜೈಲಿನಲ್ಲಿ ಇರಿಸಿದರು.

ವೆಲ್ಲೂರು ಜೈಲಿನಲ್ಲಿ ಇದ್ದಾಗ ಕಾಮರಾಜರ್, ಕೆ. ಬಾಲದಂಡಾಯುದಂ, ಪಟ್ಟಾಭಿ ಸೀತಾರಾಮಯ್ಯ ಮತ್ತು ಅಬ್ದುಲ್ ರೆಹಮಾನ್ ಸಾಹಿಬ್ ಅವರ ಸಂಪರ್ಕಕ್ಕೆ ಬಂದರು. ಜೈಲಿನ ಚಿತ್ರಹಿಂಸೆ ವಿರೋಧಿಸಿ 19 ದಿನಗಳ ಕಾಲ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದರು. ಪರಿಣಾಮವಾಗಿ, ಅವರನ್ನು ಜುಲೈ 1941 ರಲ್ಲಿ ರಾಜಮಹೇಂದ್ರಪುರಂ ಜೈಲಿಗೆ ವರ್ಗಾಯಿಸಲಾಯಿತು ಮತ್ತು ಏಕಾಂತ ಸೆರೆಮನೆಗೆ ಹಾಕಲಾಯಿತು. ಇತರರು ಬಿಡುಗಡೆಯಾಗಿದ್ದರು. ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದ ನಂತರ ಕಾಮರಾಜ್ ಅವರನ್ನು ಮತ್ತೆ ವೆಲ್ಲೂರು ಜೈಲಿಗೆ ವರ್ಗಾಯಿಸಲಾಯಿತು. ಅವರು ಜೂನ್ 1942 ರವರೆಗೆ ಜೈಲಿನಲ್ಲಿದ್ದರು. ನಂತರ ಬಿಡುಗಡೆಯಾದರು.

ಜೈಲಿನಿಂದ ಬಿಡುಗಡೆಯಾದ ನಂತರ ಸೇಲಂನಲ್ಲಿ ನಡೆದ ಮದ್ರಾಸ್ ಪ್ರಾಂತೀಯ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಗವಹಿಸಿದರು. ಈ ಸಮ್ಮೇಳನದಲ್ಲಿ ಪ್ರಾಂತೀಯ ಕಾರ್ಯದರ್ಶಿಯನ್ನಾಗಿ ಆಯ್ಕೆಯಾದರು.

1942 ರಲ್ಲಿ, ಕ್ವಿಟ್ ಇಂಡಿಯಾ ಚಳುವಳಿ ಮೂಲಕ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ತೀವ್ರವಾದ ಹೋರಾಟಗಳು ಮುಂದುವರೆದವು. ಈ ಸಂದರ್ಭದಲ್ಲಿ ಶಂಕರಯ್ಯನವರು ತಿರುನಲ್ವೇಲಿಯಲ್ಲಿ ನಡೆದ ವಿದ್ಯಾರ್ಥಿಗಳ ಮೆರವಣಿಗೆಗೆ ಚಾಲನೆ ನೀಡಿದರು. ಪೊಲೀಸರು ಬೀಸಿದ ಲಾಠಿ ಏಟಿಗೆ ಶಂಕರಯ್ಯ ಗಾಯಗೊಂಡರು. ಶಂಕರಯ್ಯ ಅವರನ್ನು ಬಂಧಿಸಿ ಜೈಲಿನಲ್ಲಿರಿಸಲಾಯಿತು.

ವಿದ್ಯಾರ್ಥಿ ಚಳುವಳಿಯ ಕೆಲಸವನ್ನು ಯೋಜಿಸಲು ವಿರುದುನಗರ ಜಿಲ್ಲೆಯ ಸತುರ್ ಬಳಿಯ ಸಿರುಕುಲಂ ಗ್ರಾಮದಲ್ಲಿ ಪ್ರಾಂತೀಯ



ವಿದ್ಯಾರ್ಥಿ ತರಬೇತಿ ಶಿಬಿರವನ್ನು ನಡೆಸಿತು. ಪೊಲೀಸರು ಶಿಬಿರವನ್ನು ಸುತ್ತುವರೆದು, ವಿದ್ಯಾರ್ಥಿಗಳನ್ನು ಹೋರಾಟಕ್ಕೆ ಪ್ರಚೋದಿಸಿದ್ದಾರೆ ಎಂಬ ಆರೋಪಹೊರಿಸಿ ಅಕ್ಟೋಬರ್ 1942 ರಲ್ಲಿ ಶಂಕರಯ್ಯನವರನ್ನು ಬಂಧಿಸಿದರು.

ಜೈಲಿನಿಂದ ಜೈಲಿಗೆ ಸ್ಥಳಾಂತರ

ಅವರು ವೆಲ್ಲೂರು ಜೈಲಿನಲ್ಲಿ ಮತ್ತೆ ಬಂಧಿಸಲ್ಪಡುತ್ತಾರೆ. ಅವರ ಬಿಡುಗಡೆಗೆ ಹಲವೆಡೆ ಪ್ರತಿಭಟನೆಗಳು ನಡೆಯುತ್ತವೆ. ಇದರಿಂದ ಬ್ರಿಟಿಷರ ಸರ್ಕಾರ ಅವರನ್ನು ಕೇರಳದ ಕಣ್ಣಾನೂರು ಜೈಲಿಗೆ ಸ್ಥಳಾಂತರಿಸುತ್ತದೆ.

ಕಣ್ಣಾನೂರು ಜೈಲಿನಲ್ಲಿದ್ದಾಗಲೇ ಕೈಯೂರು ಸಹಚರರನ್ನು ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಇದರ ನಂತರ, ಅವರು ಜೈಲಿನಲ್ಲಿ ತಮ್ಮ ಸಹಚರರೊಂದಿಗೆ ಉಪವಾಸ ಮಾಡುತ್ತಾರೆ. ಅವರನ್ನು ಕಣ್ಣಾನೂರಿನಿಂದ ತಂಜಾವೂರು ಜೈಲಿಗೆ ವರ್ಗಾಯಿಸಲಾಗುತ್ತದೆ. ಶಂಕರಯ್ಯನವರು ಒಮಂತೂರ್ ರಾಮಸಾಮಿ ರೆಡ್ಡಿಯರ್, ಆರ್. ವೆಂಕಟರಾಮನ್, ಮಧುರೈ ವೈದ್ಯನಾಥಿಯಾರ್ ಅವರೊಂದಿಗೆ ತಂಜಾವೂರು ಜೈಲಿನಲ್ಲಿದ್ದರು. 1944 ರಲ್ಲಿ ಬಿಡುಗಡೆಯಾದರು.

ತಂದೆ ನಿಧನ

1944 ರಲ್ಲಿ ಅವರ ತಂದೆ ನರಸಿಂಹಲು ನಿಧನರಾದಾಗ ಶಂಕರಯ್ಯನವರ ವಯಸ್ಸು 22 ವರ್ಷ. ಅವರು ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊರಲು ಒತ್ತಾಯಿಸಲಾಗುತ್ತದೆ. 1944 ರಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ, ಅವರು ವಿದ್ಯಾರ್ಥಿ ಸಂಘಟನೆಯ ಜವಾಬ್ದಾರಿಗೆ ರಾಜೀನಾಮೆ ನೀಡಿದರು ಮತ್ತು ತಮ್ಮ 21ನೇ ವಯಸ್ಸಿನಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಮಧುರೈ ಜಿಲ್ಲಾ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಂಡರು.

ಸುಭಾಶ್ ಚಂದ್ರ ಬೋಸ್ ಅವರ INA ಪಡೆಗಳನ್ನು ಬಂಧಿಸಿದ ಬ್ರಿಟೀಷ್ ಸರ್ಕಾರದ ವಿರುದ್ಧ ಮತ್ತು ಜವಾಹರಲಾಲ್ ನೆಹರು ಕಾಶ್ಮೀರಕ್ಕೆ ಪ್ರವೇಶಿಸುವುದಕ್ಕೆ ನಿಷೇಧದ ವಿರುದ್ಧ ಪ್ರಮುಖ ಪ್ರತಿಭಟನೆಗಳು ನಡೆದವು.

ನೌಕಾ ದಂಗೆಯಾದಾಗ

1946 ರಲ್ಲಿ ಭಾರತವನ್ನು ಬೆಚ್ಚಿಬೀಳಿಸಿದ ನೌಕಾ ದಂಗೆಯು ಬಾಂಬೆಯಲ್ಲಿ ಪ್ರಾರಂಭವಾಯಿತು ಮತ್ತು ಕಲ್ಕತ್ತಾ ಮತ್ತು ಚೆನ್ನೈನಂತಹ ಎಲ್ಲಾ ಭಾಗಗಳಿಗೆ ಹರಡಿತು. ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟರ ವಿರುದ್ಧ ಮಧುರೈ ಪಿತೂರಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಮತ್ತೆ ಜೈಲು ಪಾಲಾದ ಸಂಗಾತಿಗಳಾದ ಎನ್.ಶಂಕರಯ್ಯ, ಪಿ.ರಾಮ ಮೂರ್ತಿ, ಕೆ.ಟಿ.ಕೆ. ನಾಯಕ ತಂಗಮಣಿ 1947ರ ಆಗಸ್ಟ್ 14ರ ರಾತ್ರಿ ಬಿಡುಗಡೆಯಾದರು.

ಆಗಸ್ಟ್ 14, 1947 ರಂದು ಸಂಜೆ 6 ಗಂಟೆಗೆ ವಿಶೇಷ ನ್ಯಾಯಾಧೀಶ ಹಸಿನ್ ಅವರು ಅದನ್ನು ಕಟ್ಟುಕಥೆ ಎಂದು ಘೋಷಿಸಿದ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಜೈಲಿನ ದ್ವಾರದಲ್ಲಿ ಅದ್ದೂರಿ ಸ್ವಾಗತ ಏರ್ಪಡಿಸಲಾಗಿತ್ತು. ಮರುದಿನ ಭಾರತ ಸ್ವತಂತ್ರವಾಯಿತು.

ಶಂಕರಯ್ಯ ಕಮ್ಯುನಿಸ್ಟ್ ಪಕ್ಷದ ಸಂಗಾತಿ ಪೊನ್ನುಚಾಮಿಯವರ ಮಗಳು ನವಮಣಿಯನ್ನು 18 ಸೆಪ್ಟೆಂಬರ್ 1947 ರಂದು ಅವರು ವಿವಾಹವಾದರು. ನವಮಣಿಯವರ ಸಹೋದರ ಮತ್ತು ಸಹೋದರಿ ಕಮ್ಯುನಿಸ್ಟ್ ನಿರ್ದೇಶನದ ನಾಟಕದಲ್ಲಿ ನಟಿಸಿದ್ದವರು. ನವಮಣಿಯವರು ಕ್ರಿಶ್ಚಿಯನ್ ಆಗಿದ್ದರಿಂದ ಕುಟುಂಬದ ಕೆಲವರ ವಿರೋಧದ ನಡುವೆಯೂ ನವಮಣಿ ಗಟ್ಟಿಯಾಗಿ ನಿಂತಿದ್ದರು.

8 ವರ್ಷ ಜೈಲುವಾಸ ಮತ್ತು 4 ವರ್ಷ ಭೂಗತರಾಗಿದ್ದರು

ಮಾರ್ಚ್ 1948 ರಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದರು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಯಿತು. ಆ ಸಮಾವೇಶದಲ್ಲಿ ಭಾಗವಹಿಸಿದ್ದ ಶಂಕರಯ್ಯ ಗುಟ್ಟಾಗಿ ತಮಿಳುನಾಡಿಗೆ ಮರಳಿದರು. 1948 ರಿಂದ 1951 ರವರೆಗೆ ಶಂಕರಯ್ಯ ತಲೆಮರೆಸಿಕೊಂಡು ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿದ್ದರು.

ಬಟ್ಟೆ ಒಗೆಯುವ ಸಂಗಾತಿಯೊಬ್ಬರ ಮನೆಯಲ್ಲಿ, ಕೊಳೆಯ ಬಟ್ಟೆಗಳ ಕಟ್ಟುಗಳ ನಡುವೆ ತಿಂಗಳುಗಟ್ಟಲೆ ಅವಿತುಕೊಂಡಿದ್ದರು. ಚರ್ಮ ರೋಗಗಳು ಬಂದರೂ ವೈದ್ಯರ ಬಳಿ ಹೋಗಲು ಸಾಧ್ಯವಾಗಿರಲಿಲ್ಲ.

ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ತೆಗೆದುಹಾಕಿದ ನಂತರ ಅವರು 1952 ರಲ್ಲಿ ತಂಜಾವೂರಿನ ವಳ್ಳುವಕುಡಿಯಲ್ಲಿ ನಡೆದ ರಾಜ್ಯ ವಿಶೇಷ ಸಮ್ಮೇಳನದಲ್ಲಿ ರಾಜ್ಯ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದರು.

ಪುಟ 04 ಕ್ಕೆ

ಗೌರವ ಡಾಕ್ಟರೇಟ್ ಕಡತಕ್ಕೆ ಸಹಿ ಹಾಕದ ರಾಜ್ಯಪಾಲರು

ತಮ್ಮ ಇಡೀ ಬದುಕನ್ನು ಜನರಿಗಾಗಿ ಮುಡಿಪಾಗಿಟ್ಟ ಜನನಾಯಕ ಕಾಮ್ರೇಡ್ ಎನ್.ಶಂಕರಯ್ಯನವರನ್ನು 2021 ರಲ್ಲಿ, ತಮಿಳುನಾಡಿನ ಡಿಎಂಕೆ ಸರ್ಕಾರವು ತಗೈಸಲ್ ತಮಿಳರ್ (Thagaisal Tamizhar) ಎಂಬ ಬಿರುದು ನೀಡಿ ಗೌರವಿಸಿದೆ. ಆದರೆ, ಶಂಕರಯ್ಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸುವ ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯದ ಕ್ರಮವನ್ನು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಸರ್ಕಾರವೂ ಬೆಂಬಲಿಸಿತು. ಆದರೆ ಈ ಪ್ರಯತ್ನವನ್ನು ರಾಜಭವನ ಸ್ಥಗಿತಗೊಳಿಸಿತು. 2023ರ ನವೆಂಬರ್ 2 ರಂದು ವಿಶ್ವವಿದ್ಯಾನಿಲಯದ ಘಟಿಕೋತ್ಸವದ ವೇಳೆಗೆ ಕಡತಕ್ಕೆ ಸಹಿ ಹಾಕದ ರಾಜ್ಯಪಾಲ ಆರ್.ಎನ್. ರವಿ ಅವರ ನಿರ್ಧಾರವನ್ನು ವಿರೋಧಿಸಿ ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಅವರು ಎರಡು ವಿಶ್ವವಿದ್ಯಾಲಯದ ಘಟಿಕೋತ್ಸವಗಳನ್ನು ಬಹಿಷ್ಕರಿಸಿದ್ದಾರೆ.

ಸಂಪಾದಕೀಯ

ರಾಜಕೀಯ ದುರ್ಲಾಭಕ್ಕೆ ಕೈಜೋಡಿಸುತ್ತಿರುವ ರಾಜ್ಯಪಾಲರು

ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ಅಲ್ಲಿನ ಚುನಾಯಿತ ಸರ್ಕಾರಗಳ ವಿರುದ್ಧ ಕಡು ಹಗೆತನ ಸಾಧಿಸುತ್ತಿರುವ ರಾಜ್ಯಪಾಲರ ನಡೆಗಳ ಕುರಿತು ರಾಜಕೀಯ ವಲಯ ಹಾಗೂ ನ್ಯಾಯಾಂಗದ ಅತ್ಯುನ್ನತ ಅಂಗವಾದ ಸರ್ವೋಚ್ಚ ನ್ಯಾಯಾಲಯಗಳು ತೀವ್ರ ವಿಮರ್ಶೆ ನಡೆಸಿವೆ. ಹಾಗೆ ನೋಡಿದರೆ ಕರ್ನಾಟಕದಲ್ಲಿ ರಾಜ್ಯಪಾಲರ ವರ್ತನೆಗಳು ಅಂತಹ ತಾರಕ ಸ್ವರೂಪಕ್ಕೆ ಇನ್ನೂ ಎಳಸಿಲ್ಲ ಎನ್ನುವ ಅಂಶವನ್ನು ಗಮನಿಸುವಾಗಲೇ ಭಾರತ ಒಕ್ಕೂಟ ಸರ್ಕಾರ ಮತ್ತು ಬಿಜೆಪಿ ಪಕ್ಷ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಂಡು ತನ್ನ 'ಯೋಜನೆ'ಗಳ ಪ್ರಚಾರವನ್ನು ಮಾಡಿಕೊಳ್ಳಲು ಬಯಸುತ್ತಿದೆ. ಅಂದರೆ ಚುನಾಯಿತ ರಾಜ್ಯ ಸರ್ಕಾರಕ್ಕೆ ಒಕ್ಕೂಟ ಸರ್ಕಾರ ಕೊಡ ಬೇಕಾದ ಶಿಷ್ಟಾಚಾರದ ಸ್ಥಾನವನ್ನಾಗಲೀ, ಪಾತ್ರವನ್ನಾಗಲೀ ಕೊಡದೇ ಮೂಲೆಗುಂಪು ಮಾಡಲು ಯತ್ನಿಸುತ್ತಿದೆ. ಈ 2023 ನವೆಂಬರ್ 15 ರಂದು ಮೈಸೂರಿನಲ್ಲಿ 'ವಿಕ್ಷಿತ್ ಭಾರತ್ ಸಂಕಲ್ಪ ಯಾತ್ರಾ' ಉದ್ಘಾಟನೆಯ ಸಂದರ್ಭದಲ್ಲಿ ಅಂತಹ ಪ್ರಯತ್ನ ಜರುಗಿದೆ. ಇಂತಹ ಪ್ರಸಂಗಗಳು ಕರ್ನಾಟಕದಲ್ಲಿ ಮರು ಕಳಿಸುತ್ತಿರುವುದು ಅತ್ಯಂತ ವಿಷಾದನೀಯ.

ಇದೇ ನವೆಂಬರ್ 15 ರಂದು ಮಾನ್ಯ ಪ್ರಧಾನಮಂತ್ರಿಗಳು 'ಆದಿವಾಸಿಗಳ ಸಬಲೀಕರಣ' ಕ್ಕೆಂದು ಬಿರ್ಸಾಮುಂಡಾ ಜನಿಸಿದ ಅಂದಿನ ಬಂಗಾಳ ಪ್ರಾಂತ್ಯಕ್ಕೆ ಸೇರಿದ್ದ ಉಲಿಹತು ಹಳ್ಳಿಯಲ್ಲಿ 'ಜನ ಜಾತಿ ಗೌರವ್ ದಿವಸ್' ಉದ್ಘಾಟಿಸಿ ಆದಿವಾಸಿಗಳ ಸಬಲೀಕರಣಕ್ಕೆಂದು ಸುಮಾರು 24 ಸಾವಿರ ಕೋಟಿ ರೂಪಾಯಿಗಳ ಯೋಜನೆಗಳನ್ನು ಘೋಷಿಸಿದ್ದಾರೆ. ಮಾತ್ರವಲ್ಲ, ಆದಿವಾಸಿಗಳ ಅಭಿವೃದ್ಧಿಗಾಗಿ ಸರ್ಕಾರ ಈವರೆಗೂ ಕೈಗೊಂಡಿರುವ ಎಲ್ಲ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಅದರ 'ಯಶಸ್ಸಿ'ನ ಬಗ್ಗೆ ದೇಶದಾದ್ಯಂತ ಸುಮಾರು ಎರಡು ನೂರು ಕಡೆಗಳಲ್ಲಿ ಜಾತಗಳನ್ನು ನಡೆಸುವುದಾಗಿ ಘೋಷಿಸಿದ್ದಾರೆ. ಅದರ ಭಾಗವಾಗಿ ಅತಿ ಹೆಚ್ಚು ಆದಿವಾಸಿ ಸಮುದಾಯಗಳಿರುವ ಆದಿಮ ಸೂಕ್ಷ್ಮ ಬುಡಕಟ್ಟು ಗುಂಪು (ಪಿ.ವಿ.ಟಿ.ಜಿ) ಗಳಲ್ಲೊಂದಾದ ಜೇನು ಕುರುಬರು ವಾಸವಿರುವ ಮೈಸೂರು, ಚಾಮರಾಜನಗರ ಪ್ರದೇಶದಲ್ಲಿ ಅಂತಹ ಒಂದು ಪ್ರಚಾರ ಕಾರ್ಯಕ್ರಮದ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದು 2024ರ ಜನವರಿ 25ರವರೆಗೆ ನಡೆಯುವುದು ಎಂದು ಘೋಷಿಸಲಾಗಿದೆ. ಆದಿವಾಸಿಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಸತತವಾಗಿ ಸರ್ಕಾರಗಳು ಪ್ರಕಟಿಸುತ್ತಲೇ ಬಂದಿವೆ. ಈ ಯೋಜನೆ ನಿಜಕ್ಕೂ ಆದಿವಾಸಿಗಳನ್ನು ತಲುಪಿದಲ್ಲಿ ಅದು ಸ್ವಾಗತಾರ್ಹ. ಆದರೆ ಇದನ್ನು ಆದಿವಾಸಿಗಳ ಸಬಲೀಕರಣದ ಹೆಸರಿನಲ್ಲಿ ಸರ್ಕಾರ ಮಾಡಿರುವ ಪ್ರಚಾರ ಯೋಜನೆಗಳ ಘೋಷಣೆ ಮತ್ತು ಯೋಜನೆಗಳನ್ನು ಜಾರಿಗೊಳಿಸಲು ಮಾಡುತ್ತಿರುವ ವಿಧಾನಗಳು, ಪ್ರಯತ್ನಗಳು ಪ್ರಶ್ನಾರ್ಹವಾಗಿವೆ. ಯಾಕೆಂದರೆ ಯೋಜನೆಗಳ ಜಾರಿ ಮತ್ತು ಸಬಲೀಕರಣದ ಪ್ರಯತ್ನಗಳ ಆಚೆಗೆ ಇದನ್ನು ತಮ್ಮ ರಾಜಕೀಯ ಹಿತಾಸಕ್ತಿಗೆ ಬಿಜೆಪಿ ಬಳಸಿಕೊಳ್ಳುತ್ತಿರುವುದು ಸ್ಪಷ್ಟವಿದೆ.

ಆದಿವಾಸಿಗಳ ಅಭಿವೃದ್ಧಿಯ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಮನ್ವಯದಿಂದಲೇ ಕಾರ್ಯವೆಸಬೇಕಾಗಿರುವುದು ಸಂವಿಧಾನಾತ್ಮಕವಾಗಿಯೂ ಮತ್ತು ಕಾನೂನು ಬದ್ಧವಾಗಿಯೂ ಸೂಕ್ತವಾದದ್ದು. ಆದರೆ ಇಲ್ಲಿ ಚುನಾಯಿತ ರಾಜ್ಯ ಸರ್ಕಾರವನ್ನು ಅದರ ಚುನಾಯಿತ ಪ್ರತಿನಿಧಿಗಳನ್ನು ದೂರ ವಿಟ್ಟು ಕೇವಲ ಕೇಂದ್ರ ಸರ್ಕಾರದಿಂದ ನೇಮಿತವಾಗಿರುವ ರಾಜ್ಯಪಾಲರನ್ನು ಮತ್ತು ಆ ರಾಜ್ಯಪಾಲರ ಅಧಿಕಾರವನ್ನು ಮಾತ್ರವೇ ಬಳಸಿ ರಾಜ್ಯದಲ್ಲಿಯ ಅಧಿಕಾರಿಗಳನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಂಡಿರುವುದು ಒಪ್ಪತಕ್ಕ ನಡೆಯಲ್ಲ. ಇದು ಒಕ್ಕೂಟ ಸರ್ಕಾರದ ಮತ್ತು ರಾಜ್ಯ ಸರ್ಕಾರಗಳ ನಡುವಿನ ಪ್ರಜಾಸತ್ತಾತ್ಮಕ ಸಂಬಂಧಗಳ ಕುರಿತ ಮೂಲ ತತ್ವಕ್ಕೆ ಅಪಚಾರ. ಆದಿವಾಸಿಗಳ ಅಭಿವೃದ್ಧಿ ಅಥವಾ ಅವರ ಸಬಲೀಕರಣವಾಗಬೇಕಾದಲ್ಲಿ ರಾಜ್ಯ ಸರ್ಕಾರಗಳಿಗೂ ಮತ್ತು ಅದರ ಆಡಳಿತಕ್ಕೂ ಅತ್ಯಂತ ಪ್ರಮುಖವಾದ ಪಾತ್ರವಿದೆ. ಆದರೆ ಚುನಾವಣೆಯ ಲಾಭದ ಮೇಲೆ ಕಣ್ಣಿರಿಸಿರುವ ಕೇಂದ್ರ ಸರ್ಕಾರ, ತನ್ನ ಅಧಿಕಾರವನ್ನು ರಾಜಕೀಯ ಸಂಕುಚಿತ ಹಿತಾಸಕ್ತಿಗೆ ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿರುವುದು ಖಂಡನೀಯ. ಇದು ಕೇವಲ ಸಂಕುಚಿತ ರಾಜಕೀಯ ಮಾತ್ರವಲ್ಲ ಸಂವಿಧಾನಾತ್ಮಕವಾದ ಕನಿಷ್ಠ ನಿಯಮಗಳು ಮತ್ತು ಪರಂಪರೆಯ ಸ್ಪಷ್ಟ ನಿರಾಕರಣೆಯಾಗಿದೆ. ಹೀಗೆ ಬಿಜೆಪಿ ರಾಜ್ಯಪಾಲರ ಅಧಿಕಾರವನ್ನು ಅತ್ಯಂತ ನಗ್ನವಾಗಿಯೇ ದುರುಪಯೋಗಪಡಿಸಿಕೊಂಡಿದೆ. ಇಂತಹ ಕ್ರಮಗಳನ್ನು ಕಳೆದ ಇತ್ತೀಚಿನ ಒಂದೆರಡು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಯು ನಡೆಸಿತ್ತು. ಸರ್ಕಾರದ ಆಡಳಿತ, ಹಣವನ್ನೇ ಬಳಸಿಕೊಂಡು ರಾಜ್ಯದ ಎಲ್ಲಾ ಕಡೆಗಳಲ್ಲಿ ಬಿಜೆಪಿಯ ಪ್ರಚಾರ ಯಾತ್ರೆಗಳನ್ನು, ಜಾತ್ರೆಗಳನ್ನು ಸಂಘಟಿಸಿದ್ದು ಜನ ಮರೆತಿಲ್ಲ. ಮತ್ತು ಚುನಾವಣೆಯಲ್ಲಿ ಅಂತಹ ವಂಚನೆಯ ಪ್ರಯತ್ನಗಳನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

ವಿಚಿತ್ರ ಎಂದರೆ ಇಡೀ ದೇಶದಲ್ಲಿ ಆದಿವಾಸಿ ಸಮುದಾಯಗಳಿಗೆ ಸಂವಿಧಾನ ಕೊಡ ಮಾಡಿರುವ ಮೂಲಭೂತ ಹಕ್ಕುಗಳನ್ನು ಅವಕಾಶಗಳನ್ನು ನಗ್ನವಾಗಿ ಉಲ್ಲಂಘಿಸುತ್ತಾ ಆದಿವಾಸಿ ಸಮುದಾಯಗಳನ್ನು ಅವರ ನೆಲೆಗಳಿಂದಲೇ ಎತ್ತಂಗಡಿ ಮಾಡುತ್ತಿರುವ ಕೇಂದ್ರ ಸರ್ಕಾರ ದಿಢೀರನೇ ಈಗ ಆದಿವಾಸಿಗಳ ಸಬಲೀಕರಣಕ್ಕೆ ಪುಂಖಾನುಪುಂಖ ಪ್ರಮುಖ ಯೋಜನೆಗಳನ್ನು ಪ್ರಕಟಿಸುತ್ತಾ ಆ ಸಮುದಾಯಗಳನ್ನು ಸೆಳೆಯಲು ಯತ್ನಿಸುತ್ತಿರುವುದು ದುರಂತ. ಇಲ್ಲಿಯವರೆಗೂ ಆದಿವಾಸಿ ಸಮುದಾಯಗಳಿಗೆ ಬಲವನ್ನು ತಂದು ಕೊಡುವ ಅರಣ್ಯ ಹಕ್ಕುಗಳ ಕಾಯ್ದೆ 2006ರ ಜಾರಿಗೆ ಎಳ್ಳಷ್ಟೂ ಮುತುವರ್ಜಿ ವಹಿಸದೆ ಕಾಯ್ದೆಯ ಜಾರಿಯನ್ನೇ ರದ್ದುಗೊಳಿಸಬೇಕಾದ ಸ್ಥಿತಿಯನ್ನು ಅತ್ಯಂತ ಚಾಣಾಕ್ಷತನದಿಂದ ಕೇಂದ್ರ ಸರ್ಕಾರ ಮಾಡುತ್ತಿದೆ. ಆದಿವಾಸಿಗಳು ವಾಸಿಸುತ್ತಿರುವ ಅರಣ್ಯ ಪ್ರದೇಶ ನೆರೆಗಳನ್ನು ಪರಭಾರೆ ಮಾಡಲು ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವ ನೀತಿಗಳನ್ನು ತರುತ್ತಿದೆ. ಅವರ ನೆಲೆ, ಸಂಸ್ಕೃತಿ, ಬದುಕನ್ನು ರಕ್ಷಿಸುತ್ತಿದ್ದ ಪೇಸಾ ಕಾಯ್ದೆ, ಪುನರ್ವಸತಿ ಕಾಯ್ದೆ, ಅರಣ್ಯ ಸಂರಕ್ಷಣಾ ಕಾಯ್ದೆ, ಗಣಿ ಮತ್ತು ಖನಿಜ ಕಾಯ್ದೆ ಮುಂತಾದವುಗಳಿಗೆ ತಿದ್ದುಪಡಿಗಳನ್ನು ತಂದು ದುರ್ಬಲಗೊಳಿಸಲಾಗುತ್ತಿದೆ. ಬೃಹತ್ ಅಭಿವೃದ್ಧಿ ಯೋಜನೆಗಳು, ಸ್ಮಾರ್ಟ್ ಸಿಟಿ ಗಳು, ಮುಂತಾದವುಗಳ ಹೆಸರಿನಲ್ಲಿ ಲಕ್ಷಾಂತರ ಆದಿವಾಸಿಗಳನ್ನು ನೆಲೆ ಗಳಿಂದಲೇ ನಿರ್ಮೂಲನಗೊಳಿಸಲಾಗುತ್ತಿದೆ. ಆ ಸಮುದಾಯಗಳ ಮೇಲೆ ಎಗ್ಗಿಲ್ಲದೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ಆದಿವಾಸಿ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಇದುವರೆಗೂ ಒಕ್ಕೂಟ ಸರ್ಕಾರದ ಬಜೆಟ್ಟಿನಲ್ಲಿ ಹಣವನ್ನು ಮೀಸಲಿಟ್ಟಿಲ್ಲ. ಟಿಎಸ್ಪಿ ಯೋಜನೆಯ ಹಣ ಏನಾಗುತ್ತಿದೆ ಎನ್ನುವುದರ ಮೌಲ್ಯಮಾಪನವೇ ಇಲ್ಲ. ಈ ಸಮುದಾಯಗಳ ಭಾಷೆ, ಸಂಸ್ಕೃತಿ ರಕ್ಷಣೆಯಾಗುತ್ತಿಲ್ಲ. ಅವರ ಆರೋಗ್ಯ, ಆಹಾರದ ಪರಿಸ್ಥಿತಿ ಚಿಂತಾ ಜನಕವಾಗಿದೆ. ಭೂಮಿ ಇಲ್ಲದೆ, ವಾಸಿಸಲು ಮನೆಯೂ ಇಲ್ಲದೆ ಇಂದಿಗೂ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿ ಸಮುದಾಯಗಳು ಬದುಕಿ ಬಾಳುತ್ತಿವೆ. ಹೀಗಿರುವಾಗ, ಆದಿವಾಸಿಗಳನ್ನು ಸಬಲೀಕರಣ ಗೊಳಿಸುವ ಒಕ್ಕೂಟ ಸರ್ಕಾರದ ಯೋಜನೆಗಳು ಮತ್ತು ಅದರ ಪ್ರಯತ್ನಗಳು ಅತ್ಯಂತ ಬೂಟಾಟಿಕೆ ಮಾತ್ರವಲ್ಲ, ಈ ಸಮುದಾಯಗಳನ್ನು ವಂಚಿಸುವುದಾಗಿದೆ. ಬ್ರಿಟಿಷರ ದುರಾಕ್ರಮಣ, ವಂಚನೆಗಳ ವಿರುದ್ಧ ಆದಿವಾಸಿಗಳ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟು ಹುತಾತ್ಮನಾದ ಬಿರ್ಸಾಮುಂಡಾ ಮತ್ತು ಸಂತಾಲರು, ಓರಾಯಿನ್ ಸಮುದಾಯಗಳು ನಡೆಸಿದ ಹೋರಾಟಕ್ಕೆ ಮಸಿ ಬಳಿಯುವ ಕೃತ್ಯ ಇವಾಗಿವೆ.

ಕರ್ನಾಟಕದಲ್ಲಿ ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ಇಂತಹ ಚುನಾವಣಾ ರಾಜಕೀಯ ದುರ್ಲಾಭದ ಕುತಂತ್ರಗಳನ್ನು ಜಾರಿಗೊಳಿಸಲು ರಾಜ್ಯಪಾಲರೇ ಮುಂದಾಗಿರುವುದು ಅತ್ಯಂತ ಖಂಡನೀಯ. ಈ ಬಗ್ಗೆ ರಾಜ್ಯದ ಸಚಿವರು ಎತ್ತಿರುವ ಆಕ್ಷೇಪ ಸೂಕ್ತವಾಗಿದ್ದು ಉತ್ತರ ನೀಡಬೇಕಾದ್ದು ರಾಜ್ಯಪಾಲರ ಮೇಲಿರುವ ಹೊಣೆಗಾರಿಕೆಯಾಗಿದೆ. ಇಂತಹ ಸಂವಿಧಾನಾತ್ಮಕ ವಿರೋಧವಾಗಿರುವ ನಡೆಗಳನ್ನು ರಾಜ್ಯದ ಜನತೆ ಖಂಡಿತಕ್ಕೂ ಒಪ್ಪಬಾರದು ಮತ್ತು ಪ್ರತಿರೋಧಿಸಬೇಕಿದೆ.

ರಂಜಾನ್ ಸಾಬ್ ಕರ್ನಾಟಕ ಏಕೀಕರಣದ ಏಕೈಕ ಹುತಾತ್ಮ

ನಿತ್ಯಾನಂದಸ್ವಾಮಿ

ಕನ್ನಡ ನಾಡಿಗೆ ಕರ್ನಾಟಕ ಎಂದು ನಾಮಕರಣವಾಗಿ ಐವತ್ತು ವರ್ಷಗಳು ಸಂದಿವೆ. 1973 ರ ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣವಾಯಿತು. ಕನ್ನಡ ನಾಡು, ನುಡಿಗಾಗಿ ಹಲವಾರು ಮಹಾನುಭಾವರು ತಮ್ಮ ಅಮೂಲ್ಯ ಸಮಯವನ್ನು ವಿನಿಯೋಗಿಸಿದ್ದಾರೆ. ಆದರೆ, ಕನ್ನಡ ನಾಡಿನ ನೆಲಕ್ಕಾಗಿ ಪ್ರಾಣತೆತ್ತ ಏಕೈಕ ವ್ಯಕ್ತಿ ಎಂದರೆ ಅದು ಬಳ್ಳಾರಿಯ ಪೈಲ್ವಾನ್ ರಂಜಾನ್ ಸಾಬ್.

ಟಿಪ್ಪು ಸುಲ್ತಾನ್ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಸೋತು ಮಡಿದ ನಂತರ ಮತ್ತೆ ಕರ್ನಾಟಕವು ಬ್ರಿಟಿಷರ ಅನುಕೂಲಕ್ಕೆ ತಕ್ಕಂತೆ ಹಲವು ಭಾಗಗಳಾಗಿ ಒಡೆಯಿತು. ಮೈಸೂರು ಅರಸರು ಆಳುತ್ತಿದ್ದ ಮೈಸೂರು ಸಂಸ್ಥಾನ, ಮುಂಬೈ ಆಡಳಿತಕ್ಕೆ ಸೇರಿದ್ದ ಹಲವು ಜಿಲ್ಲೆಗಳು, ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಸೇರಿದ ಪ್ರದೇಶಗಳು, ಮದ್ರಾಸ್ ನಿಂದ ಬ್ರಿಟಿಷರು ಆಳುತ್ತಿದ್ದ ಕೆಲವು ಪ್ರಾಂತಗಳು ಮತ್ತು ಕೊಡಗು ರಾಜ್ಯ, ಹೀಗೆ ಕರ್ನಾಟಕವು ಸುಮಾರು ಇಪ್ಪತ್ತು ಆಡಳಿತ ಘಟಕಗಳಾಗಿ ಹರಿದು ಹಂಚಿ ಹೋಗಿತ್ತು.

ಹೀಗೆ ಹರಿದು ಹಂಚಿ ಹೋಗಿದ್ದ ಕರ್ನಾಟಕವನ್ನು ಏಕೀಕರಣಗೊಳಿಸುವ ಪ್ರಯತ್ನವು 1913ರ ಹೊತ್ತಿಗೆ ಒಂದು ಪ್ರಬಲ ಆಂದೋಲನವಾಗಿ ಬೆಳೆದು ಬಂತು. ಆಗ ಕನ್ನಡಿಗರ ಕೊನೆಯ ಸಾಮ್ರಾಜ್ಯ ವಿಜಯನಗರ ಪತನವಾಗಿತ್ತು. ಒಡೆದು ಹೋದ ಕನ್ನಡ ನಾಡಿನ ಮುಂಬೈ ಪ್ರಾಂತ್ಯದಲ್ಲಿ ಮರಾಠಿ ಆಡಳಿತ ಭಾಷೆಯಾಗಿತ್ತು. ನಿಜಾಮರ ಆಡಳಿತದಲ್ಲಿ ಉರ್ದು ಭಾಷೆ ಆಡಳಿತ ಭಾಷೆಯಾಗಿತ್ತು. ಮೂರರಲ್ಲಿ ಎರಡು ಭಾಗದಷ್ಟು ಕನ್ನಡಿಗರು ಮೈಸೂರು ಪ್ರಾಂತ್ಯದಿಂದ ಹೊರಗಿದ್ದರು.



ರಾಮದುರ್ಗ, ಸಾಂಗ್ಲಿ, ಸಂಡೂರು, ಸವಣೂರು, ಮಿರಜ್, ಜಮಖಂಡಿ, ಮುಧೋಳ್, ಜತ್, ಅಕ್ಕಲಕೋಟೆ ಮುಂತಾದ ಸಣ್ಣ ಸಣ್ಣ ಕನ್ನಡ ಸಂಸ್ಥಾನಗಳು ಅಸ್ತಿತ್ವದಲ್ಲಿದ್ದವು. ಕನ್ನಡಿಗರು ತಮ್ಮ ಸ್ವಂತ ನೆಲದಲ್ಲಿ ಪರಕೀಯರಂತೆ ಬಾಳುತ್ತಿದ್ದರು. ತಮ್ಮ ಮೇಲೆ ಅನ್ಯ ಭಾಷೆಯನ್ನು ಹೇರಲಾಗುತ್ತದೆ ಎಂಬ ಭಾವನೆ ಕನ್ನಡಿಗರಲ್ಲಿ ಜಾಗೃತವಾಗತೊಡಗಿತು. ಇದುವೇ ಅಖಂಡಕರ್ನಾಟಕದ ಏಕೀಕರಣದ ಹೋರಾಟಕ್ಕೆ ನಾಂದಿಯಾಯಿತು. ನಾಡಿನ ಹಿರಿಯ ಸಾಹಿತಿಗಳು, ಪತ್ರಕರ್ತರು, ಕಮ್ಯೂನಿಸ್ಟರು ಹಾಗೂ ಕನ್ನಡದ ಕಟ್ಟಾಳುಗಳು ಈ ಚಳುವಳಿಗೆ ಹೆಗಲು ಕೊಟ್ಟರು.

ಕನ್ನಡಿಗರಿಗೆ ತಮ್ಮದೆ ಆದ ಒಂದು ರಾಜ್ಯವಿರಬೇಕು, ಅಲ್ಲಿ ಎಲ್ಲಾ ಕನ್ನಡಿಗರಿಗೆ ಎಲ್ಲಾ ಹಕ್ಕುಗಳಿರಬೇಕು ಎಂಬ ಚರ್ಚೆ ಜೋರಾಗಿಯೇ ನಡೆಯುತ್ತಿತ್ತು. ಕನ್ನಡ ನಾಡು ಎಲ್ಲರ ಒಳಗೊಳ್ಳುವಿಕೆಯನ್ನು ಪ್ರತಿಪಾದಿಸುವ, ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ಶಾಂತಿಯ ತೋಟ. ಆದರೆ, ಪ್ರಜಾಪ್ರಭುತ್ವದ ಯಶಸ್ಸಿಗಾಗಿ, ಮಾತೃಭಾಷೆಯಲ್ಲಿ ಆಡಳಿತವಿರಬೇಕೆಂದು ಆಗ್ರಹಿಸುತ್ತಾ ಬಂದ ನಾಡು. ಕನ್ನಡಿಗರು ಯಾವ ಅನ್ಯ ಭಾಷೆಯ ವಿರೋಧಿಯಲ್ಲ, ಎಲ್ಲಾ ಭಾಷೆಗಳ ಸಮಾನತೆಯನ್ನು ಅದು ದೃಢವಾಗಿ ಪ್ರತಿಪಾದಿಸುತ್ತಾ ಬಂದಿದೆ. ಆದರೆ, ಕನ್ನಡ ಭಾಷಿಕರಲ್ಲೂ ಒಂದು ರಾಜ್ಯವಾಗಿ ಒಂದುಗೂಡುವುದು ಪ್ರಜಾಪ್ರಭುತ್ವದ ಅಗತ್ಯತೆಯಾಗಿದೆ. ಆದರೆ ಅಂದಿನ ಪರಿಸ್ಥಿತಿ ಭಿನ್ನವಾಗಿತ್ತು. ಕನ್ನಡ ಭಾಷಿಕರು ಕನ್ನಡದ ನೆಲಕ್ಕಾಗಿ ಹೋರಾಡಬೇಕಾಯಿತು. ತಮ್ಮ ಬಿಸಿ ನೆತ್ತರನ್ನು ಹರಿಸಬೇಕಾಯಿತು. ನಮ್ಮ ನಾಡು ನೆಲಕ್ಕಾಗಿ ತ್ಯಾಗ ಬಲಿದಾನ ಮಾಡಿದವರಲ್ಲಿ ಬಳ್ಳಾರಿಯ ಪಿಂಜಾರ್ ಪೈಲ್ವಾನ್ ರಂಜಾನ್ ಸಾಬ್ ಒಬ್ಬರೇ. ಕನ್ನಡಿಗರ ಹೃದಯದಲ್ಲಿ ಅವರು ಅಮರರಾಗಿ ನಿಂತಿದ್ದಾರೆ.

ರಂಜಾನ್ ಸಾಬ್ ಒಬ್ಬ ಕಟ್ಟಾ ಕನ್ನಡ ಪ್ರೇಮಿ. ಬಳ್ಳಾರಿಯಲ್ಲಿ ನಡೆಯುತ್ತಿದ್ದ ಕನ್ನಡ ಕ್ರಿಯಾ ಸಮಿತಿಯ ಸಕ್ರಿಯ ಸದಸ್ಯ. ಏಕೀಕರಣದ ಚಳುವಳಿಯಲ್ಲಿ ಅವರು ಸದಾ ಮುಂದಿರುತ್ತಿದ್ದರು. ಭಾಷಾವಾರು ರಾಜ್ಯಗಳು ರಚನೆಯಾಗುತ್ತಿದ್ದ ಕಾಲ ಅದಾಗಿತ್ತು. ಬಳ್ಳಾರಿ ಜಿಲ್ಲೆಯು ಪುಟ 7 ಕ್ಕೆ

ಪ್ರಕಟನೆ

ಜನಶಕ್ತಿ ಚಂದಾ ಅವಧಿ ಮುಗಿದವರು ಕೂಡಲೇ ನವೀಕರಿಸದಿದ್ದಲ್ಲಿ ಮುಂದಿನ ಸಂಚಿಕೆಯಿಂದ ಪತ್ರಿಕೆಯನ್ನು ಕಳಿಸಲಾಗುವುದಿಲ್ಲ.
ಆದ್ದರಿಂದ ಕೂಡಲೇ ಚಂದಾ ನವೀಕರಿಸಬೇಕಾಗಿ ವಿನಂತಿ.
–ವ್ಯವಸ್ಥಾಪಕರು

ತೆಲಂಗಾಣ ಚುನಾವಣೆಯಲ್ಲಿ ಎಡಪಕ್ಷಗಳು

ತೆಲಂಗಾಣ ವಿಧಾನಸಭೆಗೆ ನವೆಂಬರ್ 30 ರಂದು ಮತದಾನ ನಡೆಯಲಿದೆ. ರಾಜಕೀಯ ಪಕ್ಷಗಳು ಪ್ರಚಾರದಲ್ಲಿ ನಿರತವಾಗಿವೆ. ವಿಕಸನಗೊಳ್ಳುತ್ತಿರುವ ಪ್ರಚಾರ ವಿಧಾನಗಳು, ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ಸಾಧನಗಳು, ನಾಯಕರ ಪ್ರವಾಸಗಳು ಎಲ್ಲವೂ ಅದೇ ದಿಕ್ಕಿನಲ್ಲಿವೆ. ಸಾರ್ವಜನಿಕರ ತೀರ್ಪು ಹೇಗಿದೆ ಎಂಬುದಕ್ಕೆ ಹಲವು ರೀತಿಯ ಸಮೀಕ್ಷೆಗಳು ಬರುತ್ತಿವೆ. ಕೆಲವು ಸಮೀಕ್ಷೆಗಳು ಆಡಳಿತ ಪಕ್ಷ ಬಿಆರ್‌ಎಸ್ ಗೆಲ್ಲುತ್ತದೆ ಎಂದು ಹೇಳಿದರೆ, ಇನ್ನು ಕೆಲವು ಸಮೀಕ್ಷೆಗಳು ಕಾಂಗ್ರೆಸ್ ಗೆಲ್ಲುವುದು ಖಚಿತ ಎನ್ನುತ್ತಿವೆ. ಆದರೆ, ಸಮೀಕ್ಷೆಗಳ ವಿಶ್ವಾಸಾರ್ಹತೆ ಬಹಳ ಕಡಿಮೆಯಾಗಿದೆ. ಟಿವಿ ಚರ್ಚೆಗಳಲ್ಲಿ ಆಯಾ ಪಕ್ಷಗಳ ನಾಯಕರು ತಮ್ಮ ಸೋಲನ್ನು ಸೂಚಿಸುವ ಸಮೀಕ್ಷೆಗಳನ್ನು ತಳ್ಳಿಹಾಕುವುದಲ್ಲದೆ ಪ್ರತಿದಾಳಿಯನ್ನೂ ಮಾಡುತ್ತಿದ್ದಾರೆ. ಏಕಾಏಕಿ ಹುಟ್ಟಿಕೊಂಡ ಪ್ರಾಯೋಜಿತ ಸಮೀಕ್ಷಾ ಸಂಸ್ಥೆಗಳ ಮಾತಿಗೆ ಬೆಲೆಯೇ ಇರುವುದಿಲ್ಲ ಎಂಬುದು ತೆಲಂಗಾಣದ ಪರಿಸ್ಥಿತಿಯಿಂದ ಸ್ಪಷ್ಟವಾಗುತ್ತದೆ. ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆಯೇ ಪ್ರಮುಖ ಸ್ಪರ್ಧೆ ಇದೆ ಎಂಬುದರಲ್ಲಿ ಒಮ್ಮತವಿದೆ.

ಕಾಂಗ್ರೆಸ್‌ನಿಂದ ಚರ್ಚೆಯ ಪ್ರಹಸನ

ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆಯುತ್ತದೆ ಎಂಬ ವರದಿಗಳಿಂದ ಅತಿಯಾದ ಆತ್ಮವಿಶ್ವಾಸದಿಂದ ಕಾಂಗ್ರೆಸ್ ಪಕ್ಷವು ಎರಡೂ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಕೊನೆಯವರೆಗೂ ಚರ್ಚೆಯ ಪ್ರಹಸನವಾಡಿತು ಮತ್ತು ತಾನು ಬಯಸಿದಂತೆ ಸಾಧಿಸಲು ದಾಳ ಎಸೆಯಿತು. ಕಾಂಗ್ರೆಸ್‌ಗೆ ಸಾಕಷ್ಟು ಸಮಯ ನೀಡಿದರೂ ಕಾಂಗ್ರೆಸ್ ಬಗ್ಗಲಿಲ್ಲ. ನಂತರ, ಸಿಪಿಎಂ ದೃಢವಾದ ನಿಲುವನ್ನು ತೆಗೆದುಕೊಂಡಿತು. ಸಿಪಿಐಗೆ ಒಂದು ಸ್ಥಾನ ನೀಡಿದ್ದರೂ ಆ ಪಕ್ಷಕ್ಕೆ ಕಾಗ್ರೆಸ್ ಎಷ್ಟರ ಮಟ್ಟಿಗೆ ಸಹಕಾರ ನೀಡಲಿದೆ ಎಂಬುದು ಯಾರ ವಿಶ್ವಾಸಕ್ಕೂ ಬಾರದ ವಿಚಾರ. ಏಕೆಂದರೆ ನಿಮಗೆ ಸೀಟು ಕೊಟ್ಟರೂ ಮತ ಹಾಕುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ಕಮ್ಯುನಿಸ್ಟ್ ನಾಯಕರಿಗೆ ಬಹಿರಂಗವಾಗಿಯೇ ಹೇಳಿದರು. ನಾಯಕರಾದವರೇ ಹೀಗೆ ಹೇಳಿದರೆ, ಇತರರು ಅದನ್ನು ಹೇಗೆ ಬೆಂಬಲಿಸುತ್ತಾರೆ?

ನೀತಿ ಬದ್ಧತೆಯ ಕೊರತೆ

ಕಾಂಗ್ರೆಸ್, ಬಿಆರ್‌ಎಸ್ (ಭಾರತ್ ರಾಷ್ಟ್ರ ಸಮಿತಿ) ಮತ್ತು ಬಿಜೆಪಿಯಲ್ಲಿ ನಿಜವಾಗಿ ಯಾರಿದ್ದಾರೆ ಮತ್ತು ಯಾವ ಕ್ಷಣದಲ್ಲಿ ಮತ್ತೊಂದು ಸ್ಥಳಕ್ಕೆ ಜಿಗಿಯುತ್ತಾರೆ ಎಂಬುದು ಗೊಂದಲವಾಗಿದೆ. ತೆಲಂಗಾಣದಲ್ಲಿ ರಾಜಕೀಯ ಬದಲಾವಣೆಯ ಪ್ರತೀಕವಾಗಿ ನಿಂತಿದ್ದ ಮುನುಗೋಡಿನಲ್ಲಿ ಕಾಂಗ್ರೆಸ್‌ನಿಂದ ಜಿಗಿದು, ಬಿಜೆಪಿ ಪರವಾಗಿ ಸ್ಪರ್ಧಿಸಿದ್ದ ಕೋಮಟಿ ರೆಡ್ಡಿ ರಾಜಗೋಪಾಲ್ ರೆಡ್ಡಿ ಈಗ ಮತ್ತೆ ಹಳೆ ಪಕ್ಷಕ್ಕೆ ಜಿಗಿದು ಇಲ್ಲಿಂದ ಸ್ಪರ್ಧೆ ಮಾಡುತ್ತಿದ್ದಾರೆ. ಟಿಕೆಟ್ ಸಿಗದ ಬಿಆರ್‌ಎಸ್‌ನ ಹಾಲಿ ಶಾಸಕರೆಲ್ಲಾ ಪಕ್ಷದಿಂದ ಹೊರಗೆ ಜಿಗಿಯುತ್ತಿದ್ದಾರೆ. ಹೊಸ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿಲ್ಲದ ಬಿಆರ್‌ಎಸ್ ಕೂಡ ಕೊನೆ ಕ್ಷಣದಲ್ಲಿ ಬೇರೆ ಪಕ್ಷಗಳಿಂದ ಅತೃಪ್ತ ನಾಯಕರನ್ನು ಕಣಕ್ಕಿಳಿಸುವುದು ವಾಡಿಕೆಯಾಗಿದೆ. ಚುನಾವಣೆಯ ವೇಳೆಗೆ ಇದೆಲ್ಲವೂ ಹಿಂದೆ ನಡೆಯುತ್ತಿದ್ದರೂ ಈಗ ಇಂತಹ ಚಟುವಟಿಕೆ ತುಂಬಾ ಹೆಚ್ಚಾಗಿದೆ. ಪ್ರಜಾಸತ್ತಾತ್ಮಕ ಜಾತ್ಯತೀತ ಮೌಲ್ಯಗಳಿಗೆ ನೀತಿ ಬದ್ಧತೆಯ ಕೊರತೆ ಮತ್ತು ರಾಜಕೀಯ ಮೌಲ್ಯಗಳ ಕೊರತೆಯು ಚುನಾವಣಾ ಹೋರಾಟವನ್ನು ಸ್ವಲ್ಪ ಅಧಿಕಾರದ ಲಾಲಸೆಯನ್ನಾಗಿ ಮಾಡಿದೆ.

ಪ್ರಶ್ನಾರ್ಹ ರಾಜಕೀಯ

ಬಿಜೆಪಿ ಕೋಮುವಾದಿ ರಾಜಕಾರಣದ ವಿರುದ್ಧವಾಗಿ ನಡೆದ ರಾಷ್ಟ್ರೀಯ ಹೋರಾಟದಲ್ಲಿ ಬಿಆರ್‌ಎಸ್ ಪ್ರಮುಖ ಪಾಲುದಾರನಾಗಲಿದೆ ಎಂಬ ನಂಬಿಕೆಯನ್ನು ಹುಟ್ಟುಹಾಕಿತು. ಆ ಸಮಯದಲ್ಲಿ ಆಪರೇಷನ್ ಫಾರ್ಮ್ ಹೌಸ್ ಮತ್ತು ಲಿಕ್ಕರ್ ಹಗರಣ ಪ್ರಕರಣಗಳು ಮುನ್ನೆಲೆಗೆ ಬಂದವು. ಮುಖ್ಯಮಂತ್ರಿ ಕೆಸಿಆರ್ ಕುಟುಂಬದ ಮೇಲೂ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದಾರೆ. ಅವರ ಬೆದರಿಸುವಿಕೆ ಮತ್ತು ಮತಾಂಧ ಭಾಷಣಗಳು ಪರಾಕಾಷ್ಠೆ ತಲುಪಿದವು. ನಂತರ ಈ ವಾತಾವರಣವು ವಿಭಿನ್ನ ಕಥೆಗಳ ನಡುವೆ ಬದಲಾಯಿತು. ಕೆಸಿಆರ್ ಸೇರಿದಂತೆ ಆ ಪಕ್ಷದ ನಾಯಕರು 'ಇಂಡಿಯಾ' ಮತ್ತು ಬಿಜೆಪಿ ನಡುವೆ ಸಮಾನ ಸಿದ್ಧಾಂತವಿದೆ ಎಂದು ಆರೋಪಿಸಿದ್ದರು. ಕಾಂಗ್ರೆಸ್ ನಮ್ಮ ಪ್ರಮುಖ ಎದುರಾಳಿ ಎಂಬ ಕಾರಣಕ್ಕೆ ಹೀಗೆ ಹೇಳುತ್ತಿದ್ದರೂ ಸಹ, ಮೋದಿಯವರ ನಿರಂಕುಶ ಧೋರಣೆಗಳ ಟೀಕೆ ಏಕೆ ಕಡಿಮೆಯಾಗಿದೆ ಎಂಬುದು ಪ್ರಶ್ನೆಯಾಗಿದೆ. ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಬಂಧನದ ನಂತರ, ಆ ಮೂಲಗಳಿಂದ ಬಂದವರ ಮತಗಳ ಪರಿಣಾಮ, ಜಾತಿ ಲೆಕ್ಕಾಚಾರಗಳು ಮುಂದೆ ಬಂದಿವೆ. ಈ ಕ್ರಮದಲ್ಲಿಯೂ ಬಿಆರ್‌ಎಸ್‌ನ ಮತಗಳನ್ನು ಭದ್ರಪಡಿಸಿಕೊಳ್ಳಲು ವಿವಿಧ ತಂತ್ರಗಳು, ಮಾತುಗಳನ್ನು ಬದಲಾಯಿಸಲು ಕಷ್ಟಪಡುತ್ತಿದೆ. ಕೆಸಿಆರ್ ಬಿಜೆಪಿಯನ್ನು ಅಷ್ಟೇನೂ ಉಲ್ಲೇಖಿಸುವುದಿಲ್ಲ.

> ಪ್ರಜಾಸತ್ತಾತ್ಮಕ ಜಾತ್ಯತೀತ ಮೌಲ್ಯಗಳಿಗೆ ನೀತಿ ಬದ್ಧತೆಯ ಕೊರತೆ ಮತ್ತು ರಾಜಕೀಯ ಮೌಲ್ಯಗಳ ಕೊರತೆಯು ಚುನಾವಣಾ ಹೋರಾಟವನ್ನು ಸ್ವಲ್ಪ ಅಧಿಕಾರದ ಲಾಲಸೆಯನ್ನಾಗಿ ಮಾಡಿದೆ.

ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ನಾಯಕರು ಮಾತ್ರ ಆಡಳಿತಾರೂಢ ಪಕ್ಷದ ವಿರುದ್ಧ ಆಕ್ರಮಣಕಾರಿಯಾಗಿ ವಾಗ್ದಾಳಿ ನಡೆಸುತ್ತ ಕಾಂಗ್ರೆಸ್ ಗೆ ಅಂತಹ ಅವಕಾಶ ಇಲ್ಲದಂತೆ ಮಾಡುವುದು ಅವರಿಗೆ ಮುಖ್ಯವಾಗಿದೆ ಎಂಬುದನ್ನು ವಿಶ್ಲೇಷಕರು ಸರಿಯಾಗಿ ಗುರುತಿಸುತ್ತಾರೆ. ಮತ್ತೊಬ್ಬ ಎಐಎಮ್‌ಐಎಮ್ ನಾಯಕ ಓವೈಸಿ ಯವರು ಬಿಆರ್‌ಎಸ್ ಗೆ ಬೆಂಬಲ ಘೋಷಿಸುತ್ತಿದ್ದಾರೆ. ಅತಂತ್ರ ಸ್ಥಿತಿ ಮಾತುಗಳೂ ಕೇಳಿಬರುತ್ತಿದ್ದು, ಅಂತಹ ಸನ್ನಿವೇಶದಲ್ಲಿ ಓವೈಸಿ ಬೆಂಬಲ ಬೇಕಾಗಬಹುದು ಎಂಬ ಅಭಿಪ್ರಾಯ ಬಲವಾಗಿ ಕೇಳಿಬರುತ್ತಿದೆ. ಆದರೆ, ಅಂತಹ ಸಂದರ್ಭ ಬಂದರೆ ಅಂದಿನ ಅವಕಾಶಗಳಿಗೆ ತಕ್ಕಂತೆ ಆಯಾ ಪಕ್ಷಗಳು ನಡೆದುಕೊಳ್ಳುತ್ತವೆ ವಿನಃ ಹೇಳಿಕೆಗೆ ಕಟಿಬದ್ಧರಾಗಿ ಇರುತ್ತವೆ ಎಂದು ಭಾವಿಸುವುದು ತಪ್ಪು. ಬಿಜೆಪಿ ಜತೆ ಕೈಜೋಡಿಸಿರುವ ಜನಸೇನೆಯ ಪವನ್ ಕಲ್ಯಾಣ್ ಕೂಡ ಎಂಟು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದರೂ, ಬಿಜೆಪಿ ತೆಲುಗು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳನ್ನು ತನ್ನತ್ತ ತಿರುಗಿಸುತ್ತಿರುವುದು ಇಲ್ಲಿ ನಿರ್ಲಕ್ಷಿಸಲಾಗದ ಸಂಗತಿ. ಬಿಆರ್‌ಎಸ್ ಎಂದು ಹೆಸರು ಬದಲಿಸಿ ರಾಷ್ಟ್ರೀಯ ಪಾತ್ರ ವಹಿಸಲು ಆತುರ ತೋರಿಸಿದ ಕೆಸಿಆರ್, ಇತ್ತೀಚೆಗೆ ಪ್ರಾದೇಶಿಕ ಪಕ್ಷಗಳೇ ಪ್ರಮುಖ ಎಂದು ಹೇಳಿರುವುದು ಕೂಡಾ ಬಿಜೆಪಿಗೆ ರಾಜಕೀಯ ಸಂಕೇತಕ್ಕಾಗಿಯೇ ಎಂಬ ಪ್ರಶ್ನೆಗಳು ಎದ್ದಿವೆ. ಕಾಂಗ್ರೆಸ್ ಅನ್ನು ಬಲಪಡಿಸುತ್ತಿರುವ ಶರ್ಮಿಳಾ ವೈಎಸ್‌ಆರ್‌ಟಿಪಿ ಹಾಗೂ ಪ್ರೊ. ಕೋದಂಡರಾಮ್ ಟಿಜೆಎಸ್ ಕೂಡ ಸ್ಪರ್ಧೆಯಿಂದ ಹಿಂದೆ ಸರಿದಿದ್ದು, ಈ ಹಿಂದೆ ಆಡಳಿತ ಪಕ್ಷವಾಗಿದ್ದ ತೆಲುಗು ದೇಶಂ ಕೂಡ ಈಗ ಸ್ಪರ್ಧೆಯಿಂದ ಹಿಂದೆ ಸರಿಯುತ್ತಿರುವುದು ಈ ರಾಜಕೀಯ ತಂತ್ರಗಾರಿಕೆಯ ಭಾಗವಾಗಿದೆ.

ಸಿಪಿಎಂ ಸ್ಪಷ್ಟ ನಿಲುವು ಹೊಂದಿದೆ

ಇಂತಹ ಸಡಿಲ ರಾಜಕೀಯ ವಾತಾವರಣದಲ್ಲಿ ಬಿಜೆಪಿಯನ್ನು ಸೋಲಿಸಲು ಮತ್ತು ಬಿಆರ್‌ಎಸ್ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಸಿಪಿಎಂ ಸ್ವತಂತ್ರವಾಗಿ ಸ್ಪರ್ಧಿಸುತ್ತಿದೆ. ಖಮ್ಮಂ ಜಿಲ್ಲೆಯ ಎಲ್ಲಾ ಸ್ಥಾನಗಳಲ್ಲಿ ಹಾಗೂ ಇತರೆಡೆ ಎಲ್ಲ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿರುವ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳು ಪ್ರಚಾರ ಆರಂಭಿಸಿದ್ದಾರೆ. ಪ್ರಮುಖ ನಾಯಕರು ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಮೊದಲು ಬಿಆರ್‌ಎಸ್ ನಂತರ ಕಾಂಗ್ರೆಸ್ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಸೂಚನೆ ನೀಡಿ ನಂತರ ನಿಲುವು ಬದಲಾಯಿಸಿ, ಬಿಜೆಪಿ ಕೋಮುವಾದದ ವಿರುದ್ಧ ಹೋರಾಟಕ್ಕೆ ಹಾನಿ ಮಾಡಿದ ರೀತಿಯನ್ನು ಅವರು ಮತದಾರರಿಗೆ ವಿವರವಾಗಿ ಹೇಳತೊಡಗಿದ್ದಾರೆ.

ಒಂದು ರೀತಿಯಲ್ಲಿ ಮೂರು ಪಾಳಯಗಳ ನಡುವೆ ಸ್ವತಂತ್ರ ಪಾತ್ರವನ್ನು ಕಾಪಾಡಿಕೊಂಡು ಸ್ವಾಭಿಮಾನ ನೀತಿಗಳ ಸ್ಪಷ್ಟತೆಯೊಂದಿಗೆ ಮುನ್ನಡೆಯಲು, ಸಿಪಿಐ ಸ್ಪರ್ಧಿಸುತ್ತಿರುವ ಕೊತಗುಡೆಂನಲ್ಲಿ ಆ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಸಿಪಿಎಂ ಹೇಳಿದೆ.

ಈ ಪರಿಸ್ಥಿತಿಗೆ ಕಾರಣರಾದ ಬಿಆರ್‌ಎಸ್ ಮತ್ತು ಕಾಂಗ್ರೆಸ್ ಮತ ವಿಭಜನೆಯ ಪರಿಣಾಮಗಳಿಗೆ ಬೆಲೆ ತೆರಬೇಕಾಗಬಹುದು. ಚುನಾವಣೆ ನಡೆಯುವ ಇತರ ರಾಜ್ಯಗಳಲ್ಲಿ ಇದೇ ರೀತಿಯ ಪರಿಸ್ಥಿತಿಗೆ ಕಾಂಗ್ರೆಸ್ ಕಾರಣ ಎಂಬುದು ಗಮನಿಸಬೇಕಾದ ಸಂಗತಿ. ಬಿಆರ್‌ಎಸ್ ಮತ್ತು ಬಿಜೆಪಿ ನಡುವಿನ ಸಂಬಂಧ ಹೇಗಿರುತ್ತದೆ ಎಂಬುದನ್ನು ಭವಿಷ್ಯವೇ ಹೇಳುತ್ತದೆ, ಆದರೆ ಇದುವರೆಗೆ ಬಿಜೆಪಿ ಮೇಲಿನ ಟೀಕೆ ಕಡಿಮೆಯಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಎಂಎಲ್‌ಸಿ ಕವಿತಾ ಅವರನ್ನು ಬಂಧಿಸದಿರಲು ಇದೇ ಕಾರಣ ಎಂದು ಕಾಂಗ್ರೆಸ್ ಆರೋಪಿಸಿದ್ದು ಮಾತ್ರವಲ್ಲದೆ, ಕೆಸಿಆರ್ ಸರ್ಕಾರದ ವಿರುದ್ಧ ಸಿಬಿಐ ತನಿಖೆ ನಡೆಸಬೇಕು ಎಂದು ಹೇಳುತ್ತಿದೆ. ಬಿಆರ್‌ಎಸ್‌ಗೆ ಸಹಾಯ ಮಾಡುವುದಕ್ಕಾಗಿ ಸ್ವತಂತ್ರವಾಗಿ ಸ್ಪರ್ಧೆ ಮಾಡುತ್ತಿದೆಯೆಂಬ ಆರೋಪವನ್ನು ಸಿಪಿಎಂ ಬಲವಾಗಿ ನಿರಾಕರಿಸಿದೆ. ಬಿಜೆಪಿಯನ್ನು ಸೋಲಿಸುವುದರ ಜೊತೆಗೆ ಸ್ವಂತ ನೆಲೆಯನ್ನು ರಕ್ಷಿಸಿಕೊಳ್ಳುವುದು ಪ್ರಮುಖ ಕೆಲಸವಾಗಿದೆ ಎಂದು ಅದು ಹೇಳಿದೆ. ಪೊಲಿಟ್‌ಬ್ಯೂರೋ ಸದಸ್ಯರಾದ ಬಿ.ವಿ. ರಾಘವುಲು ಸೇರಿದಂತೆ ಸಿಪಿಎಂ ನಾಯಕರು ಪ್ರಚಾರದಲ್ಲಿ ವ್ಯಾಪಕವಾಗಿ ಭಾಗವಹಿಸಿ ತಮ್ಮ ಸ್ಪರ್ಧೆಯ ಆದ್ಯತೆಯನ್ನು ಜನತೆಗೆ ವಿವರಿಸುತ್ತಿದ್ದಾರೆ.

ಕೃಪೆ– ಪ್ರಜಾಶಕ್ತಿ

ಸ್ವಾತಂತ್ರ್ಯ ಹೋರಾಟಗಾರ........ ಪುಟ 2 ರಿಂದ

ಎನ್.ಶಂಕರಯ್ಯ ಅವರು ವಿಮೋಚನಾ ಹೋರಾಟದ ಸಮಯದಲ್ಲಿ ಮತ್ತು ನಂತರ ಎಂಟು ವರ್ಷ ಜೈಲುವಾಸ ಮತ್ತು ನಾಲ್ಕು ವರ್ಷ ಭೂಗತರಾಗಿದ್ದರು.

ಸಿಪಿಐ(ಎಂ) ರಚನೆಯಲ್ಲಿ ಪ್ರಮುಖ ಪಾತ್ರ

ಅವರು ತಮಿಳುನಾಡಿನಲ್ಲಿ ಭಾರತೀಯ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರು. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯಿಂದ ಹೊರನಡೆದ 32 ನಾಯಕರಲ್ಲಿ ಎನ್.ಶಂಕರಯ್ಯ ಕೂಡ ಒಬ್ಬರು. 1964ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ರಚನೆಯಾದಾಗ ಕಾಮ್ರೇಡ್ ಎನ್.ಶಂಕರಯ್ಯ ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿ ಮತ್ತು ಅಖಿಲ ಭಾರತ ನಿಯಂತ್ರಣ ಸಮಿತಿಯ ಅಧ್ಯಕ್ಷರಾಗಿಯೂ ಅವರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದರು. 1995 ರಿಂದ 2002 ರವರೆಗೆ ಅವರು ತಮಿಳುನಾಡು ರಾಜ್ಯ ಮಂಡಳಿಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

ಅವರು 1967, 1977 ಮತ್ತು 1980 ರ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದರು ಮತ್ತು ಮಧುರೈ ಪಶ್ಚಿಮ ಹಾಗೂ ಮಧುರೈ ಪೂರ್ವ ಕ್ಷೇತ್ರಗಳಿಂದ ಆಯ್ಕೆಯಾದರು. ತಮಿಳು ಆಡಳಿತ ಭಾಷೆಯಾಗಬೇಕು ಎಂದು ಘರ್ಜಿಸಿದ ಸಿಂಹಧ್ವನಿ ಅವರದು. ಅವರು ವಿಧಾನಸಭೆಯಲ್ಲಿ ಶ್ರಮಜೀವಿಗಳ ಧ್ವನಿಯಾಗಿದ್ದರು. 1977 ಮತ್ತು 1980ರಲ್ಲಿ ಪಕ್ಷದ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಅವರು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಕಾರ್ಯಕ್ರಮದ ವೈಶಿಷ್ಟ್ಯಗಳನ್ನು ಅನುಸರಿಸಲು ನಿರ್ಧರಿಸಿದರು. ದುಡಿಯುವ ವರ್ಗದ ವಿಚಾರಗಳನ್ನು ತಮ್ಮ ಭಾಷಣಗಳಲ್ಲಿ ಸರಳವಾಗಿ ಮತ್ತು ಬಲವಾಗಿ ವ್ಯಕ್ತಪಡಿಸಿದ ಪ್ರಬಲ ವಾಗ್ಮಿ.

ರೈತ ಸಂಘವನ್ನು ಬೆಳೆಸಿದ ನಾಯಕರಲ್ಲೊಬ್ಬರು

ಅಖಿಲ ಭಾರತ ರೈತ ಸಂಘವನ್ನು ಬೆಳೆಸಿದ ನಾಯಕರಲ್ಲಿ ಒಬ್ಬರಾದ ಎನ್.ಶಂಕರಯ್ಯನವರು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮತ್ತು ಅಖಿಲ ಭಾರತ ಅಧ್ಯಕ್ಷ ಸ್ಥಾನಗಳನ್ನು ಅಲಂಕರಿಸಿದರು. ತಮಿಳುನಾಡು ವ್ಯವಸಾಯ ಸಂಘದ ಅಧ್ಯಕ್ಷರಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದರು.

1962 ರ ಭಾರತ–ಚೀನಾ ಯುದ್ಧದ ಸಮಯದಲ್ಲಿ ಅವರು ಬಂಧಿಸಲ್ಪಟ್ಟರು. ಸೇಲಂ ಜೈಲಿನಲ್ಲಿ ಒಂದು ವರ್ಷವನ್ನು ಕಳೆದರು. ಅಲ್ಲಿಂದ ಅವರನ್ನು ವೆಲ್ಲೂರು ಜೈಲಿಗೆ ವರ್ಗಾಯಿಸಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ ಅವರನ್ನು ಖುಲಾಸೆಗೊಳಿಸಲಾಯಿತು.

'ತೀಕದಿರ್' ಪತ್ರಿಕೆಯ ಸಂಪಾದಕರಾದರು

ಕಮ್ಯೂನಿಸ್ಟ್ ಪಕ್ಷದ ವಿಭಜನೆಗೂ ಮುನ್ನ ಭಾರತ ಕಮ್ಯುನಿಸ್ಟ್ ಪಕ್ಷದಲ್ಲಿದ್ದಾಗ 'ಜನಶಕ್ತಿ' ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದರು. 1963ರಲ್ಲಿ ಮಾರ್ಕ್ಸ್‌ವಾದಿ ಪಕ್ಷದಿಂದ 'ತೀಕದಿರ್' ಆರಂಭವಾದಾಗ ಅದರಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. 1966ರಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಅಧಿಕೃತ ನಿಯತಕಾಲಿಕೆ ಎಂದು ಘೋಷಿಸಿದಾಗ 'ತೀಕದಿರ್' ಪತ್ರಿಕೆಯ ಸಂಪಾದಕರಾದರು.

ಕೋಮು ಸೌಹಾರ್ದಕ್ಕಾಗಿ

ಜಾತಿ ಸಂಘರ್ಷ ಮತ್ತು ಕೋಮುಗಲಭೆಗಳ ಸಂದರ್ಭದಲ್ಲಿ ಶಾಂತಿ ಸ್ಥಾಪಿಸಲು ಕ್ಷೇತ್ರದಲ್ಲಿ ಕೆಲಸ ಮಾಡಿದರು. 1998 ರಲ್ಲಿ ಅವರು ಕೊಯಮತ್ತೂರಿನಲ್ಲಿ ಕೋಮು ಸೌಹಾರ್ದ ರ‍್ಯಾಲಿಯನ್ನು ಆಯೋಜಿಸಿದರು. ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಕಮ್ಯುನಿಸ್ಟರು ಮತ್ತು ದೇಶಭಕ್ತರಿಗೆ ಕರೆನೀಡಿದರು. 1997ರಲ್ಲಿ ಮಧುರೈಯಲ್ಲಿ ಮುಖ್ಯಮಂತ್ರಿ ಕರುಣಾನಿಧಿಯವರ ನೇತೃತ್ವದಲ್ಲಿ ನಡೆದ ಅಸ್ಪೃಶ್ಯತೆ ನಿವಾರಣೆಯ ಸಮಾವೇಶದಲ್ಲಿ 'ಆಮೂಲಾಗ್ರ ಭೂಸುಧಾರಣೆಯೇ ಇದಕ್ಕೆ ಪರಿಹಾರ' ಎಂದು ಘೋಷಣೆ ಕೂಗಿದರು.

ಕೃಪೆ: ತೀಕ್ಕದಿರ್ – ಅನು: ಸಿಚಿ

ಕರ್ನಾಟಕದ ಸೌಹಾರ್ದತಾ ಪರಂಪರೆಯ ಕುರಿತ ಹಲವು ಕಾರ್ಯಕ್ರಮಗಳ ಸರಣಿ ಯೋಜನೆ

ಜನವರಿ 30 2024 ರಂದು ರಾಜ್ಯದಾದ್ಯಂತ ಮಾನವ ಸರಪಳಿ

ಹಲವು ದಶಕಗಳಿಂದಲೂ ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಹೆಮ್ಮೆಯಿಂದ ಕರೆಯುತ್ತಾ ಬಂದ ಹಿರಿಮೆಗೆ ಈಗಾಗಲೇ ಗಂಭೀರ ಧಕ್ಕೆ ಬಂದೊದಗಿರುವುದು ನಮಗೆಲ್ಲಾ ತಿಳಿದೇ ಇದೆ. ಜನರನ್ನು ಮತದರ್ಮಗಳ ಹೆಸರಿನಲ್ಲಿ ವಿಭಜಿಸುವ ಶಕ್ತಿಗಳಿಂದ ನಮ್ಮ ಸಾಮಾಜಿಕ ಸೌಹಾರ್ದತೆಗೆ ತೀವ್ರವಾದ ಹಾನಿಯಾಗಿದೆ. ಮತೀಯ ದ್ವೇಷ–ಹಗೆತನದ ಭಾವನೆಗಳು ಸಾಮಾನ್ಯ ಜನರ ಮನಸ್ಸನ್ನು ಆವರಿಸಿಕೊಳ್ಳುತ್ತಿರುವ ವಿಷಮ ಗಳಿಗೆಯಲ್ಲಿ ನಾವು ಹಾದು ಹೋಗುತ್ತಿದ್ದೇವೆ.

ದಿನ ನಿತ್ಯದ ದ್ವೇಷ ಭಾಷೆಯಿಂದ ನಮ್ಮ ಸಾಮಾಜಿಕ, ಮತೀಯ ದ್ವೇಷದ ಜೊತೆಗೆ ಅಸ್ಪೃಶ್ಯತೆ, ಜಾತೀಯ ದಮನ, ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಅಸಮಾನತೆಗಳ ತೀವ್ರತೆಯೂ ಸೌಹಾರ್ದದ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸುತ್ತಿದೆ.

ಇಂತಹ ಸಂದರ್ಭದಲ್ಲಿ ಶತ ಶತಮಾನಗಳ ಇತಿಹಾಸವುಳ್ಳ ಕರ್ನಾಟಕದ ಸೌಹಾರ್ದ ಪರಪಂರೆಯನ್ನು ಹಾಗೂ ಜನ ಸಂಸ್ಕೃತಿಯನ್ನು ಗುರುತಿಸಿ ಅದನ್ನು ಮುನ್ನೆಲೆಗೆ ತರುವ ಐತಿಹಾಸಿಕ ಅವಶ್ಯಕತೆ ಉಂಟಾಗಿದೆ.

ಪ್ರಸ್ತುತ ಸಮಾಜದಲ್ಲಿ ಸ್ನೇಹಪರತೆ, ಸೌಹಾರ್ದತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕಾಳಜಿಯುಳ್ಳವರೆಲ್ಲಾ ಒಂದೆಡೆ ಕಲೆತು, ಕುಳಿತು ಕಾರ್ಯಯೋಜನೆ ರೂಪಿಸಿ, ಸೌಹಾರ್ದತೆಯ ಸಂದೇಶವನ್ನು ಜನರ ನಡುವೆ ಕೊಂಡೊಯ್ಯಬೇಕಾಗಿದೆ.

ಈ ನಿಟ್ಟಿನಲ್ಲಿ ಜನಪರ ಕಾಳಜಿಯ ಸಮಾನ ಮನಸ್ಕರ ಸಮಾಲೋಚನಾ ಸಭೆಯೊಂದು ನವೆಂಬರ್ 12, 2023 ರಂದು ಬೆಂಗಳೂರಿನ ಗಾಂಧಿಭವನದ ಮಹಾದೇವಿ ಕಿರು ಸಭಾಂಗಣದಲ್ಲಿ ನಡೆಯಿತು.

ರಾಜ್ಯದಲ್ಲಿ ಈಗ ಹಿಂದಿನ ವರ್ಷಕ್ಕೆ ಹೋಲಿಸಿದರೆ ಉಸಿರು ಗಟ್ಟಿಸುವ ವಾತಾವರಣದಲ್ಲಿ ಒಂದಷ್ಟು ಬದಲಾವಣೆ ಕಾಣುತ್ತಿದೆ. ಆದರೆ ಸಾಮಾಜಿಕ ಶಾಂತಿ, ಸಾಮರಸ್ಯ ಕದಡುವ, ಭಂಗ ತರುವ ಪ್ರಯತ್ನಗಳು ನಿಂತಿಲ್ಲ. ಇಂತಹ ಸಂದರ್ಭದಲ್ಲಿ ನಾಗರೀಕ ಜಾಗೃತಿ, ಮುತುವರ್ಜಿ ಅತ್ಯಗತ್ಯ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ನಮ್ಮ ನಾಡಿನ ಹಲವು ಜನಪರ ಸಾಹಿತಿಗಳು, ಚಿಂತಕರು, ನಾನಾ ಕ್ಷೇತ್ರಗಳ ಗಣ್ಯರು ಪಾಲ್ಗೊಂಡಿದರು. ನಾಡೋಜ ಬರಗೂರು ರಾಮಚಂದ್ರಪ್ಪ, ಡಾ.ಜಿ. ರಾಮಕೃಷ್ಣ, ಮೂಡ್ನಕೂಡು ಚಿನ್ನಸ್ವಾಮಿ, ಅರವಿಂದ ಮಾಲಗತ್ತಿ, ಕೆ. ಷರೀಫ, ಸುಕನ್ಯಾ ಮಾರುತಿ, ಬಿ. ಸುರೇಶ್, ಜಿ.ಎನ್. ನಾಗರಾಜ್, ದಲಿತ ಚಳುವಳಿಯ ಮುಖಂಡರಾದ ಮಾವಳ್ಳಿ ಶಂಕರ್, ಆರ್.ಮೋಹನ್ ರಾಜ್, ಗೋಪಾಲಕೃಷ್ಣ ಹರಳಹಳ್ಳಿ, ಪತ್ರಕರ್ತೆ ಕಾತ್ಯಾಯಿನಿ ಚಾಮರಾಜ್, ನಿವೃತ್ತ ಅಧಿಕಾರಿ ವಿಶುಕುಮಾರ್ ಮುಂತಾದವರು ಮಾತಾಡಿದರು. ಜನವರಿ 30, 2024 ರಂದು ಮಹಾತ್ಮ ಗಾಂಧೀಜಿಯವರು ಹುತಾತ್ಮರಾದ ದಿನದಂದು ಸೌಹಾರ್ದ ಮಾನವ ಸರಪಳಿಯನ್ನು ವ್ಯಾಪಕವಾಗಿ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು.

ಸಾಹಿತಿ ಚಿಂತಕರಾದ ಪ್ರೊ. ಕೆ. ಮರುಳು ಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ರಾಜಪ್ಪ ದಳವಾಯಿ, ನ್ಯಾಯ ಮೂರ್ತಿಗಳಾದ ಹೆಚ್.ಎನ್. ನಾಗಮೋಹನ್ ದಾಸ್, ನ್ಯಾ.ವಿ. ಗೋಪಾಲಗೌಡ, ಪ್ರೊ. ರವಿವರ್ಮಕುಮಾರ್, ಇಂದಿರಾ ಕೃಷ್ಣಪ್ಪ, ಡಾ. ವೂಡೆ ಕೃಷ್ಣ, ಎನ್.ಎಲ್. ಮುಕುಂದರಾಜ್ ಮುಂತಾದ ನಾನಾ ಕ್ಷೇತ್ರಗಳ ಗಣ್ಯರು ಈ ಸರಣಿ ಸೌಹಾರ್ದ ಕಾರ್ಯಕ್ರಮಗಳನ್ನು ಬೆಂಬಲಿಸಿದ್ದಾರೆ.

ಕಾರಣಾಂತರಗಳಿಂದ ಈ ಸಭೆಗೆ ಹಲವು ಗಣ್ಯರು ನೇರವಾಗಿ ಭಾಗವಹಿಸುವುದು ಸಾಧ್ಯವಾಗದಿದ್ದರೂ, ಸೌಹಾರ್ದ ಕರ್ನಾಟಕದ ಈ ಸರಣಿ ಕಾರ್ಯಕ್ರಮಗಳಿಗೆ ತಮ್ಮ ಬೆಂಬಲವಿದೆಯೆಂದೂ, ಹಾಗೂ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದಾಗಿ ನಾನಾ ಕ್ಷೇತ್ರಗಳ ಗಣ್ಯರು ತಿಳಿಸಿದ್ದಾರೆ.

ಸೌಹಾರ್ದ ಕರ್ನಾಟಕ ದಿಂದ ಸರಣಿ ಉಪನ್ಯಾಸ ಕಾರ್ಯಕ್ರಮಗಳು. ಇದನ್ನು ನವೆಂಬರ್ 24 ರಂದು ಬೆಂಗಳೂರಿನಲ್ಲಿ ಆಯೋಜಿಸುವುದು. ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿಶಾಲವಾಗಿ ಎಲ್ಲರನ್ನು ತೊಡಗಿಸುವುದು.

ಎಲ್ಲಾ ವ್ಯಕ್ತಿಗಳನ್ನು, ಸಂಘಟನೆಗಳನ್ನು ಒಳಗೊಳಿಸಿಕೊಳ್ಳಲು ಸಮಾಲೋಚನಾ ಸಭೆಗಳನ್ನು ನಡೆಸುವುದು. ಜಿಲ್ಲಾ ಮಟ್ಟದಲ್ಲೂ ಸಭೆಗಳನ್ನು ಸಂಘಟಿಸಿ ಇಲ್ಲಿಯ ತೀರ್ಮಾನಗಳನ್ನು ಜಾರಿಗೊಳಿಸುವುದು.

ಮುಖ್ಯವಾಗಿ ಹೊಸ ಹೊಸ ವಿಭಾಗದ, ಅದರಲ್ಲೂ ವಿದ್ಯಾರ್ಥಿ–ಯುವಜನ ರನ್ನು ಆಕರ್ಷಿಸುವಂತಹ ರೀತಿಯಲ್ಲಿರಬೇಕು.

ಅದರಲ್ಲೂ ಹಾಸ್ಟೆಲ್ ವಿದ್ಯಾರ್ಥಿ ಗಳನ್ನು ಭೇಟಿ ಮಾಡಿ ಪಾಲ್ಗೊಳಿಸಬೇಕು ಮುಂತಾದ ಸಲಹೆಗಳು ಬಂದವು.

ಸೌಹಾರ್ದ ಪರ ಸಂದೇಶವಿರುವ ಕನಿಷ್ಟ 100 ಪೋಸ್ಟರ್‌ಗಳನ್ನು ರೂಪಿಸಿ ಜನರ ನಡುವೆ ವ್ಯಾಪಕವಾಗಿ ಹಂಚುವುದು. ಹೀಗೆ ರಾಜ್ಯದಾದ್ಯಂತ ಎಲ್ಲರನ್ನು ಒಳಗೊಳಿಸಿಕೊಂಡು ವಿಶಾಲವಾಗಿ ಸಂಘಟಿಸಿ ಜನವರಿ 30 ಮಾನವ ಸರಪಳಿ ಮತ್ತು ನಂತರವೂ ಚಟುವಟಿಕೆಗಳನ್ನು ಮುಂದುವರಿಸಬೇಕೆಂದು ತೀರ್ಮಾನಿಸಲಾಗಿದೆ.

ರಾಜ್ಯದಾದ್ಯಂತ ಜಿಲ್ಲೆ, ತಾಲ್ಲೂಕು, ಪ್ರದೇಶ, ಶಾಲಾ–ಕಾಲೇಜುಗಳ ಮಟ್ಟದಲ್ಲಿ ನಮ್ಮ ನಾಡಿನ ಶ್ರೀಮಂತವಾದ ಸೌಹಾರ್ದಪರ ಸಾಹಿತ್ಯವನ್ನು ಸಾಮೂಹಿಕವಾಗಿ ಓದಿ ಚರ್ಚಿಸುವುದು, ಪ್ರತಿ ಜಿಲ್ಲೆ ಮತ್ತು ತಾಲ್ಲುಕುಗಳಲ್ಲಿ ಹಾಸು ಹೊಕ್ಕಾಗಿರುವ ಸೌಹಾರ್ದ ಸಂಸ್ಕೃತಿಯನ್ನು ಹಾಗೂ ಸೌಹಾರ್ದ ತಾಣಗಳನ್ನು ಗುರುತಿಸಿ ಜಿಲ್ಲಾವಾರು ಪುಸ್ತಕ ರೂಪದಲ್ಲಿ ಹೊರತರುವುದು ಹಾಗೂ ಸೌಹಾರ್ದ ತಾಣಗಳಿಗೆ ತಂಡಗಳಾಗಿ ಭೇಟಿ ನೀಡಿ, ಆಯಾ ಸ್ಥಳಗಳ ಮಹತ್ವ ಮತ್ತು ಸೌಹಾರ್ದತೆಯ ವಿಶಿಷ್ಟತೆಗಳ ಬಗೆಗೆ ಚರ್ಚಿಸಿ ಸಮಾಜದ ನಡುವೆ ಪಸರಿಸುವುದು. ಮುಂತಾದ ತೀರ್ಮಾನಗಳನ್ನು ಸಭೆಯು ಕೈಗೊಂಡಿತ್ತು.

ಈ ಸೌಹಾರ್ದ ಕರ್ನಾಟಕದ ಸಮಾಲೋಚನಾ ಸಭೆಯಲ್ಲಿ ಮೊದಲಿಗೆ ಬಿ.ರಾಜಶೇಖರಮೂರ್ತಿ ಸ್ವಾಗತಿಸಿದರು. ನಂತರ ಎಸ್.ವೈ. ಗುರುಶಾಂತ್ ರವರು ಸಭೆಯ ಉದ್ದೇಶವನ್ನಾ ಪ್ರಸ್ತಾಸಿದರು. ಆರ್. ರಾಮಕೃಷ್ಣ ವಂದಿಸಿದರು.



ಗಾಜಾ ವಿರುದ್ಧ ಇಸ್ರೇಲ್‌ನ ನರಮೇಧ ನಿಲ್ಲಿಸಿ! ಶಾಂತಿ ಸ್ಥಾಪಿಸಿ!! ಪ್ಯಾಲೇಸ್ಥೇನಿಯರ ಮೇಲಿನ ಇಸ್ರೇಲ್ ಧಾಳಿಗೆ ಹಣ ಹಾಗೂ ಶಸ್ತ್ರಾಸ್ತ್ರಗಳ ಒದಗಿಸುವ ಅಮೇರಿಕಾ ನೀತಿಗೆ ಎಡಪಕ್ಷಗಳ ಖಂಡನೆ!

ಇಸ್ರೇಲಿ ನೆಲದಲ್ಲಿ ಹಮಾಸ್ ನ ಅಕ್ಟೋಬರ್ 7 ರ ಆಶ್ಚರ್ಯಕರ ಮಿಲಿಟರಿ ದಾಳಿಯ ನೆಪದಲ್ಲಿ ಗಾಜಾಪಟ್ಟಿಯಲ್ಲಿರುವ ಪ್ಯಾಲೇಸ್ಥೇನಿಯ ನಾಗರೀಕರು ಹಾಗೂ ಮಕ್ಕಳ ಮೇಲೆ ಧಾಳಿ ನಡೆಸಿ ಸಾಮೂಹಿಕ ಹತ್ಯೆಯಲ್ಲಿ ತೊಡಗಿರುವ ಯುದ್ಧಕೋರ ಇಸ್ರೇಲ್ ದೇಶಕ್ಕೆ ಹಣಕಾಸು ಹಾಗೂ ಶಸ್ತ್ರಾಸ್ತ್ರ ಗಳನ್ನು ಒದಗಿಸುತ್ತಿರುವ ಅಮೇರಿಕದ ಯುದ್ಧಕೋರ ನೀತಿಯನ್ನು ನಮ್ಮ ನಾಲ್ಕು ಎಡ ಪಕ್ಷಗಳ ರಾಜ್ಯ ಘಟಕಗಳು ಬಲವಾಗಿ ಖಂಡಿಸಿವೆ.

ಇಸ್ರೇಲ್ ದೇಶದ ಧಾಳಿಯು ಈಗಾಗಲೇ ಪ್ಯಾಲೇಸ್ಥೇನಿಯ ದೇಶದ ಸುಮಾರು 10,000 ದಷ್ಟು ಮಕ್ಕಳು ಹಾಗೂ ನಾಗರೀಕರ ಧಾರುಣ ಸಾವುಗಳಿಗೆ, ಇನ್ನು ಹಲವು ದಶಸಾವಿರದಷ್ಟು ಜನರ ಅಂಗ ವೈಕಲ್ಯತೆಗೆ ಕಾರಣವಾಗಿದೆ. ದೊಡ್ಡ ಸಂಖ್ಯೆಯ ಜನ ನಿರಾಶ್ರಿತರಾಗುತ್ತಿದ್ದಾರೆ. ನಿರಂತರ ಕಾರ್ಪೆಟ್ ಬಾಂಬ್ ದಾಳಿ ಮತ್ತು ಆಹಾರ, ನೀರು, ಇಂಧನ, ವಿದ್ಯುತ್ ಮತ್ತು ಔಷಧಿಗಳು ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಮೇಲೆ ಸಂಪೂರ್ಣ ನಿರ್ಬಂಧದ ಈ ಸಂಯೋಜನೆಯು ಪ್ರತಿ ಗಂಟೆಗೆ ಸಾವಿನ ಸಂಖ್ಯೆಯನ್ನು ಹೆಚ್ಚಿಸುತ್ತಿದೆ. ಈ ರೀತಿಯ ಕ್ರಮಗಳ ಮೂಲಕ ಪ್ಯಾಲೆಸ್ಥೇನಿಯರನ್ನು ಅವರ ತಾಯ್ನಾಡಿನಿಂದ ಹೊರ ದೂಡುವ ಮತ್ತು ವಿಶ್ವ ಸಂಸ್ಥೆಯ ನಿರ್ಣಯವನ್ನು ತಿರಸ್ಕರಿಸುವ ಕೆಲಸದಲ್ಲಿ ಇಸ್ರೇಲ್ ತೊಡಗಿದೆ.

ಇಂತಹ ಮಾನವ ಹತ್ಯೆಗೆ ಹಾಗೂ ಪ್ಯಾಲೆಸ್ಟೈನಿಯರ ನ್ನು ಅವರ ತಾಯ್ನಾಡಿನಿಂದ ಹೊರದೂಡಿ ನಿರಾಶ್ರಿತರನ್ನಾಗಿಸುವ ಕುಕೃತ್ಯಕ್ಕೆ ಕಾರಣವಾಗುತ್ತಿರುವ ಇಸ್ರೇಲ್ ಗೆ ನೆರವು ನೀಡುತ್ತಿರುವುದು ಅಕ್ಷಮ್ಯವಾಗಿದೆ. ಈ ಕೂಡಲೇ ಹಣಕಾಸು ಹಾಗೂ ಶಸ್ತ್ರಾಸ್ತ್ರ ಗಳ ನೆರವು ನೀಡುವುದನ್ನು ನಿಲ್ಲಿಸುವಂತೆ ಮತ್ತು ಗಾಜಾಪಟ್ಟಿಯಲ್ಲಿ ಶಾಂತಿ ನೆಲೆಸಲು ಅಗತ್ಯ ಕ್ರಮಕ್ಕೆ ಮುಂದಾಗುವಂತೆ ಎಡಪಕ್ಷಗಳು ಒತ್ತಾಯಿಸಿವೆ.

ನೇಜಾರು ಕೊಲೆ ಪ್ರಕರಣ–ಆರೋಪಿಯ ಹಿನ್ನೆಲೆ ಬಗ್ಗೆ ಕೂಲಂಕಷ ತನಿಖೆಯಾಗಲಿ–ಸಿಪಿಐ(ಎಂ)

ಜಿಲ್ಲೆಯ ಜನತೆಯನ್ನು ಬೆಚ್ಚಿ ಬೀಳಿಸಿದ, ಒಂದೇ ಕುಟುಂಬದ ಮೂವರು ಮಹಿಳೆಯರು ಹಾಗೂ ಬಾಲಕನ ಹತ್ಯೆ ಪ್ರಕರಣದ ಆರೋಪಿಯನ್ನು ಶೀಘ್ರ ಪತ್ತೆ ಹಚ್ಚಿದ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆಯ ಎಲ್ಲರನ್ನೂ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿನಂದಿಸಿದೆ.

ಅದೇ ಸಂದರ್ಭದಲ್ಲಿ ಏರ್ ಇಂಡಿಯಾ ಸಿಬ್ಬಂದಿಯೂ ಆಗಿರುವ ಆರೋಪಿಯು, ಸಹಪಾಠಿ ಆಗಿರುವ ಐನಾಝ್ ಮೇಲಿನ ಅಸೂಯೆ ಮತ್ತು ದ್ವೇಷವೇ ಕಾರಣವೆಂದು ವಿಚಾರಣೆಯಿಂದ ತಿಳಿದು ಬರುತ್ತದೆ ಎಂದು ಪೊಲೀಸ್ ಅಧೀಕ್ಷರು ಹೇಳಿರುವುದಾಗಿ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ವಿಚಾರಣೆಯನ್ನು ಅಷ್ಟಕ್ಕೇ ಸೀಮಿತಗೊಳಿಸಿದಲ್ಲಿ ಭಗ್ನಪ್ರೇಮಿಯ ಮಾನಸಿಕ ಅಸ್ವಸ್ಥತೆ ಕಾರಣ ಎಂದು ತೀರಾ ಸರಳ ನಿರ್ಧಾರಕ್ಕೆ ಬಂದಂತೆ ಆಗುತ್ತದೆ. ಆದ್ದರಿಂದ ಆರೋಪಿಯ ಸಂಪೂರ್ಣ ಹಿನ್ನೆಲೆಯನ್ನು ವಿಚಾರಣೆಗೆ ಒಳಪಡಿಸುವ ಅಗತ್ಯ ಇದೆ.


ಪೊಲೀಸ್ ಇಲಾಖೆಯ ಕರ್ತವ್ಯದಲ್ಲಿ ಮೂಗು ತೂರಿಸುವುದು ಸಿಪಿಐ(ಎಂ)ನ ಉದ್ದೇಶವಲ್ಲ. ಆದರೆ ವಿವಾಹಿತನೂ ಆಗಿರುವ ಆರೋಪಿ ಇಷ್ಟೊಂದು ಹೀನಾಯ ಭಗ್ನಪ್ರೇಮಿಯಾಗಿ ನಾಲ್ವರ ಹತ್ಯೆಗೆ ಕಾರಣನಾಗುತ್ತಾನೆಯೇ ಎಂಬ ಸಂಶಯ ಸಹಜವಾಗಿಯೇ ಜನರ ಮನಸ್ಸಿನಲ್ಲಿ ಬರುತ್ತದೆ.

ಹತ್ಯೆಯ ವಿರುದ್ದ ಜಿಲ್ಲೆಯ ಜನತೆ ಒಕ್ಕೊರಲಿನಿಂದ ಖಂಡಿಸುತ್ತಿರುವಾಗ, ಇದೊಂದು 'ವಿಶ್ವ ದಾಖಲೆ' ಎಂದು ವಿಜೃಂಭಿಸುವ ಮನಸ್ಸುಗಳು ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಂತಹ ವ್ಯಕ್ತಿಗಳ ಮೇಲೂ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಈ ಸಂದಿಗ್ದ ಪರಿಸ್ಥಿತಿಯಲ್ಲಿ ಐಕ್ಯತೆಯನ್ನು ಕಾಪಾಡುತ್ತಾ ಕಿಡಿಗೇಡಿಗಳ ವಿರುದ್ದ ಕಠಿಣ ಕ್ರಮಕ್ಕೆ ಆಗ್ರಹಿಸಬೇಕೆಂದು ಜಿಲ್ಲೆಯ ಜನತೆಯಲ್ಲಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಮನವಿ ಮಾಡಿದೆ.

ಕಾಮ್ರೇಡ್ ಎನ್. ಶಂಕರಯ್ಯ

ಸಾರ್ವಜನಿಕ ಜೀವನದಲ್ಲಿ ಉನ್ನತ ಆದರ್ಶವನ್ನು ಹಾಕಿಕೊಟ್ಟವರು–ಪೊಲಿಟ್ ಬ್ಯೂರೋ



ಸಿಪಿಐ(ಎಂ) ನ ಹಿರಿಯ ನಾಯಕ ಮತ್ತು ದೇಶದ ಹಿರಿಯ ಕಮ್ಯುನಿಸ್ಟ್ ನಾಯಕರಲ್ಲಿ ಒಬ್ಬರಾದ ಕಾಮ್ರೇಡ್ ಎನ್. ಶಂಕರಯ್ಯ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಅವರಿಗೆ 102 ವರ್ಷ ವಯಸ್ಸಾಗಿತ್ತು.

ಶಂಕರಯ್ಯ ಮಧುರೈನ ಅಮೇರಿಕನ್ ಕಾಲೇಜಿನ ವಿದ್ಯಾರ್ಥಿಯಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಸೇರಿದರು. ಅವರ ಅಂತಿಮ ಪರೀಕ್ಷೆಗಳಿಗೆ ಮುಂಚೆಯೇ ಅವರನ್ನು ಬಂಧಿಸಲಾಯಿತು ಆದರಿಂದಾಗಿ ಅವರು ಪದವಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯದ ಮುನ್ನಾದಿನದವರೆಗೆ ಎಂಟು ವರ್ಷಗಳ ಕಾಲ ಅವರು ಜೈಲಿನಲ್ಲಿ ಕಳೆದರು.

ಶಂಕರಯ್ಯ 1940 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು ಮತ್ತು ತಮಿಳುನಾಡಿನ ಅವಿಭಜಿತ ಪಕ್ಷದ ಪ್ರಮುಖ ಸಂಘಟಕರಲ್ಲಿ ಒಬ್ಬರಾದರು.

ರಾಷ್ಟ್ರೀಯ ಮಂಡಳಿಯಿಂದ ಹೊರನಡೆದು, ನಂತರ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಚಿಸಿದ 32 ಸದಸ್ಯರಲ್ಲಿ ಅವರೊಬ್ಬರು. ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟುವಲ್ಲಿ ಪ್ರಮುಖ ಕೊಡುಗೆಯನ್ನು ನೀಡಿರುವ ಅವರು 1995 ರಿಂದ 2002 ರವರೆಗೆ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಅವರು ತಮಿಳುನಾಡು ರಾಜ್ಯ ವಿಧಾನಸಭೆಗೆ ಮೂರು ಬಾರಿ 1967, 1977 ಮತ್ತು 1980 ರಲ್ಲಿ ಆಯ್ಕೆಯಾದರು. ಅವರು 1977 ಮತ್ತು 1980 ರಲ್ಲಿ ವಿಧಾನಸಭೆಯಲ್ಲಿ ಸಿಪಿಐ(ಎಂ) ಗುಂಪಿನ ನಾಯಕರಾಗಿದ್ದರು.

ರೈತ ಚಳವಳಿಯನ್ನು ಬೆಳೆಸುವಲ್ಲಿಯೂ ತೊಡಗಿಸಿಕೊಂಡಿದ್ದ ಅವರು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರಾದರು.

ಕಾಂ.ಶಂಕರಯ್ಯ ಕಮ್ಯುನಿಸ್ಟ್ ರಾಜಕೀಯ ಮತ್ತು ನೀತಿಗಳನ್ನು ಪರಿಣಾಮಕಾರಿಯಾಗಿ ಜನರ ನಡುವೆ ಸಂವಹನ ಮಾಡುವ ಒಬ್ಬ ಪ್ರಬಲ ಭಾಷಣಕಾರರಾಗಿದ್ದರು. ಅವರು ಸಮರ್ಪಿತ ಮಾರ್ಕ್ಸ್‌ವಾದಿಯಾಗಿದ್ದು, ಪಕ್ಷಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು ಮತ್ತು ಸಾರ್ವಜನಿಕ ಜೀವನದಲ್ಲಿ ಸಮಗ್ರತೆ ಮತ್ತು ಸರಳತೆಯ ಉನ್ನತ ಮಟ್ಟವನ್ನು ಹಾಕಿಕೊಟ್ಟವರು.

ಅವರ ನಿಧನದಿಂದ, ಕಮ್ಯುನಿಸ್ಟ್ ಚಳುವಳಿ ಭವ್ಯ ದಾಖಲೆ ಹೊಂದಿದ್ದ ಒಬ್ಬ ನೇತಾರರನ್ನು ಕಳೆದು ಕೊಂಡಿದೆ. ಆದರೆ ಅವರ ಪರಂಪರೆಯು ಜೀವಂತವಾಗಿರುತ್ತದೆ ಎಂದು ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ ಮತ್ತು ಅವರ ಇಬ್ಬರು ಪುತ್ರರು ಮತ್ತು ಕುಟುಂಬ ಸದಸ್ಯರಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

ಅವರನ್ನು ಸದಾ ಪ್ರೀತಿ, ಗೌರವ ಮತ್ತು ಹೆಮ್ಮೆಯಿಂದ ಸ್ಮರಿಸುತ್ತೇವೆ – ಎಐಕೆಎಸ್



ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಅವರ ನಿಧನದೊಂದಿಗೆ, ಎಐಕೆಎಸ್ ಮತ್ತು ಎಡ ಪ್ರಜಾಸತ್ತಾತ್ಮಕ ಚಳವಳಿಯು ಒಬ್ಬ ಉನ್ನತ ನಾಯಕನನ್ನು ಕಳೆದುಕೊಂಡಿದೆ, ಅವರಿಗೆ ಸದಾ ಕಾರ್ಮಿಕ ವರ್ಗ, ರೈತರು ಮತ್ತು ಎಲ್ಲಾ ತುಳಿತಕ್ಕೊಳಗಾದವರ ವಿಮೋಚನೆಯು ಸರ್ವೋಚ್ಚವಾಗಿತ್ತು ಎಂದು ಹೇಳಿದೆ.

ಅವರು ಎಐಕೆಎಸ್‌ನ ಅಧ್ಯಕ್ಷರಾಗಿದ್ದ ಅವಧಿ ಭಾರತದಲ್ಲಿ ಆರ್ಥಿಕ ಉದಾರೀಕರಣ ರಭಸ ಪಡೆಯುತ್ತಿದ್ದ ಸಮಯವಾಗಿತ್ತು. ಆಗ 1993 ರಲ್ಲಿ ಎಐಕೆಎಸ್ ತನ್ನ ಮೊದಲ ಪರ್ಯಾಯ ಕೃಷಿ ನೀತಿಯನ್ನು ರೂಪಿಸುವಲ್ಲಿ ಕಾಂ. ಶಂಕರಯ್ಯ ನಿರ್ಣಾಯಕ ಪಾತ್ರವನ್ನು ವಹಿಸಿದರು. ಇದು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಗೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಲು ಹಾಗೂ ಮತ್ತು ಭಾರತದ ರೈತ ಸಮೂಹವನ್ನು ದುರ್ಬಲಗೊಳಿಸಲು ಪ್ರಯತ್ನಿಸಿದ ರಫ್ತು–ಆಧಾರಿತ ಕೃಷಿಯ ನವ ಉದಾರೀಕರಣ ಕ್ರಮಕ್ಕೆ ಮತ್ತು ಡಂಕೆಲ್ ಕರಡಿಗೆ ಸವಾಲು ಹಾಕಿತು. ಇದಕ್ಕೆ ಪರ್ಯಾಯವಾಗಿ, ಭೂಸುಧಾರಣಾ ಕ್ರಮಗಳನ್ನು ಪೂರ್ಣಗೊಳಿಸುವುದು, ಕೃಷಿ ಕಾರ್ಮಿಕರು ಮತ್ತು ಬಡ ರೈತರಿಗೆ ಭೂಮಿ ವಿತರಣೆ, ನೀರಾವರಿಯಲ್ಲಿ ವಿಸ್ತರಣೆ, ಕೃಷಿಯಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆ, ಎಲ್ಲಾ ಬೆಳೆಗಳಿಗೆ ಲಾಭದಾಯಕ ಬೆಲೆಗಳನ್ನು ಖಾತರಿಪಡಿಸುವುದು, ಲಾಗುವಾಡುಗಳ ವೆಚ್ಚದಲ್ಲಿ ಕಡಿತ, ಅಗ್ಗದ ಸಾಂಸ್ಥಿಕ ಸಾಲಗಳು, ಸಮಗ್ರ ಬೆಳೆ ವಿಮೆ, ಮತ್ತಿತರ ಇದೇ ಧಾಟಿಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಐಕೆಎಸ್‌ನ ಈ ದಸ್ತಾವೇಜು ಪ್ರತಿಪಾದಿಸಿತು.

ಶಂಕರಯ್ಯ ಅವರು ತಮ್ಮ ಕೊನೆಯ ಉಸಿರಿನವರೆಗೂ ದೇಶದ ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಚಳುವಳಿಗಳಲ್ಲಿ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತ ಮಾರ್ಗದರ್ಶನ ನೀಡುವುದನ್ನು ಮುಂದುವರೆಸಿದರು. ಡಿಸೆಂಬರ್ 6, 2022 ರಂದು, ಎಐಕೆಎಸ್‌ನ 35 ನೇ ಅಖಿಲ ಭಾರತ ಸಮ್ಮೇಳನದ ಪೂರ್ವಭಾವಿಯಾಗಿ ನಡೆದ ಹುತಾತ್ಮ ಜ್ಯೋತಿ ಯಾತ್ರೆಯನ್ನು ಅವರು ವೀಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು ಮತ್ತು ಕಾರ್ಮಿಕ–ರೈತ ಐಕ್ಯತೆಯನ್ನು ಬಲಪಡಿಸಲು, ಪರ್ಯಾಯ ಕೃಷಿ ನೀತಿಯತ್ತ ಮುನ್ನಡೆಯಲು ಮತ್ತು ಜನವಿರೋಧಿ ಬಿಜೆಪಿ ಸರ್ಕಾರವನ್ನು ಸೋಲಿಸುವ ಸ್ಪಷ್ಟ ಕರೆ ನೀಡಿದರು.

"ಎಐಕೆಎಸ್ ಅವರನ್ನು ಸದಾ ಪ್ರೀತಿ, ಗೌರವ ಮತ್ತು ಹೆಮ್ಮೆಯಿಂದ ಸ್ಮರಿಸುತ್ತದೆ ಮತ್ತು ಪ್ರಜಾಸತ್ತಾತ್ಮಕ, ಜಾತ್ಯತೀತ ಮತ್ತು ಸಮಾಜವಾದಿ ಸಮಾಜದ ಅವರ ಆದರ್ಶಗಳನ್ನು ಈಡೇರಿಸಲು ಶ್ರಮಿಸುತ್ತದೆ" ಎಂದು ಅಖಿಲ ಭಾರತ ಕಿಸಾನ್ ಸಭಾ ಕಾಂ.ಶಂಕರಯ್ಯ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ಕಾಂ. ಬಸುದೇಬ್ ಆಚಾರ್ಯ ನಿಧನ

ಅತ್ಯುತ್ತಮ ಸಂಸದೀಯ ಪಟು, ಸದಾ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು–ಪೊಲಿಟ್‌ಬ್ಯುರೊ

ಹಿರಿಯ ಕಮ್ಯುನಿಸ್ಟ್, ಸಂಸದೀಯ ಪಟು ಮತ್ತು ಕಾರ್ಮಿಕ ಚಳುವಳಿಯ ನಾಯಕ ಬಸುದೇಬ್ ಆಚಾರ್ಯ ನಿಧನರಾಗಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ಅವರು ಹೈದರಾಬಾದ್‌ನಲ್ಲಿ ನವಂಬರ್ 13 ರಂದು ನಿಧನರಾದರು. ಅವರಿಗೆ 81 ವರ್ಷವಾಗಿತ್ತು. ಸಿಪಿಐ(ಎಂ) ಪೊಲಿಟ್ ಬ್ಯುರೊ ಅವರ ನಿಧನಕ್ಕೆ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ.

ಜುಲೈ 11, 1942 ರಂದು ಪುರುಲಿಯಾದಲ್ಲಿ ಜನಿಸಿದ ಆಚಾರ್ಯ ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೇ ರಾಜಕೀಯದಲ್ಲಿ ತೊಡಗಿಕೊಂಡಿದ್ದರು. ತಮ್ಮ ಶಾಲಾ ಶಿಕ್ಷಕ ಕೆಲಸವನ್ನು ತೊರೆದು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದ ಅವರು 1981 ರಲ್ಲಿ ಸಿಪಿಐ(ಎಂ)ನ ಪುರುಲಿಯಾ ಜಿಲ್ಲಾ ಸಮಿತಿಗೆ, 1985 ರಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸಮಿತಿಗೆ ಮತ್ತು 2005 ರಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದರು. 2018 ರಲ್ಲಿ ಅವರು ಪಕ್ಷದ ಕೇಂದ್ರ ನಿಯಂತ್ರಣ ಆಯೋಗದ ಅಧ್ಯಕ್ಷರಾಗಿ ಆಯ್ಕೆಯಾದರು.

ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಸಕ್ರಿಯರಾಗಿದ್ದ ಬಸುದೇಬ್ ಆಚಾರ್ಯ ಮುಖ್ಯವಾಗಿ ರೈಲ್ವೆ ಮತ್ತು ಕಲ್ಲಿದ್ದಲು ಕಾರ್ಮಿಕರ ನಾಯಕರಾಗಿದ್ದರು, ಮತ್ತು ಸಿಐಟಿಯು ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದರು. ಅತ್ಯುತ್ತಮ ಸಂಸದೀಯ ಪಟು, ಸದಾ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದ ಅವರು, 1980 ರಿಂದ 2009 ರವರೆಗೆ ಒಂಬತ್ತು ಬಾರಿ ಲೋಕಸಭೆಗೆ ಚುನಾಯಿತರಾಗಿದ್ದರು.

ಅವರ ಇಬ್ಬರು ಪುತ್ರಿಯರು ಮತ್ತು ಮಗನಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.



ಪ್ಯಾಲೆಸ್ಟೀನಿನಲ್ಲಿ ಇಸ್ರೇಲೀ ನರಮೇಧ ಕೂಡಲೇ ನಿಲ್ಲಬೇಕು–ಎಡಪಕ್ಷಗಳ ಆಗ್ರಹ

ಭಾರತ–ಅಮೆರಿಕ 2+2 ಸಚಿವರ ಸಂವಾದದಲ್ಲಿ ತಕ್ಷಣದ ಕದನ ವಿರಾಮದ ಜಾಗತಿಕ ಕರೆಗೆ ಸೇರಲು ನಿರಾಕರಿಸಿದ್ದಕ್ಕಾಗಿ ಮೋದಿ ಸರ್ಕಾರವನ್ನು ಐದು ಎಡಪಕ್ಷಗಳು– ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಎಐಎಫ್‌ಬಿ ಮತ್ತು ಆರ್‌ಎಸ್‌ಪಿ– ಬಲವಾಗಿ ಟೀಕಿಸಿವೆ.

ಅಮೇರಿಕ–ಇಸ್ರೇಲಿ ನರಮೇಧವನ್ನು ಅನುಮೋದಿಸುವುದನ್ನು ನಿಲ್ಲಿಸುವಂತೆ ಎಡಪಕ್ಷಗಳು ಈ ಹಿಂದೆ ಮೋದಿ ಸರಕಾರವನ್ನು ಒತ್ತಾಯಿಸಿದ್ದವು. 2+2 ಸಂವಾದದಲ್ಲಿ, ಭಾರತವು 2–ಪ್ರಭುತ್ವ ಪರಿಹಾರವನ್ನು ಪುನರುಚ್ಚರಿಸುವುದರೊಂದಿಗೆ "ಮಾನವೀಯ ತಡೆ"ಗೆ ಕರೆ ನೀಡಲಾಯಿತು. 'ಕದನ ವಿರಾಮ'ಕ್ಕಲ್ಲ, ಕೇವಲ 'ತಡೆ' ಗಾಗಿ ಕರೆ ಈ ಹಂತದಲ್ಲಿ, ನಡೆಯುತ್ತಿರುವ ಈ ಇಸ್ರೇಲಿ ನರಮೇಧವನ್ನು ನ್ಯಾಯಬದ್ಧಗೊಳಿಸುತ್ತದಷ್ಟೇ ಎಂದು ಎಡಪಕ್ಷಗಳು ಹೇಳಿವೆ.

ಇಸ್ರೇಲಿ ನರಮೇಧದ ಪ್ರಹಾರವು ಪ್ಯಾಲೆಸ್ಟೀನಿ ಯನ್ನರಿಗೆ ತಮ್ಮ ಸ್ವಂತ ದೇಶದಲ್ಲಿ ಬದುಕಲು ಯಾವುದೇ ಭೂಮಿಯನ್ನು ಬಿಡುತ್ತಿಲ್ಲ. ಈ ಬರ್ಬರ ಮತ್ತು ರಾಕ್ಷಸೀ ದಾಳಿಗಳಲ್ಲಿ 10,000 ಕ್ಕೂ ಹೆಚ್ಚು ಜನರು ಕೊಲ್ಲಲ್ಪಟ್ಟಿದ್ದಾರೆ, ಅವರಲ್ಲಿ ಅರ್ಧದಷ್ಟು ಮಕ್ಕಳು, ಮತ್ತು ಆಸ್ಪತ್ರೆಗಳು ಬಾಂಬ್ ದಾಳಿಗೊಳಗಾಗಿವೆ.

ಪ್ಯಾಲೆಸ್ಟೀನಿಯರ ಮೇಲೆ ಈ ಇಸ್ರೇಲಿ ನರಮೇಧ ಕೂಡಲೇ ನಿಲ್ಲಬೇಕು, ಆಗ ಮಾತ್ರ ಒಂದು ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಈ ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ನೀಡಿರುವ ಜಂಟಿ ಹೇಳಿಕೆ ಆಗ್ರಹಿಸಿದೆ.

ಬಿಜೆಪಿ ಆಡಳಿತದಡಿ 'ರೋಗಗ್ರಸ್ಥ' ಮಧ್ಯ ಪ್ರದೇಶ

ಪ್ರಕಾಶ್ ಕಾರತ್

ಗುಜರಾತ್ ನಂತರ ಬಿಜೆಪಿ ದೀರ್ಘ ಕಾಲ ಆಳಿದ ರಾಜ್ಯ ಮಧ್ಯ ಪ್ರದೇಶ. 2002ರಿಂದ ಬಿಜೆಪಿ ಆ ರಾಜ್ಯದಲ್ಲಿ ಆಡಳಿತದಲ್ಲಿದೆ; ಅದರ ನಡುವೆ ಒಂದುವರೆ ವರ್ಷ ಕಾಂಗ್ರೆಸ್ ಆಡಳಿತದಲ್ಲಿದ್ದು ಅದನ್ನು ಪಕ್ಷಾಂತರದ ಮೂಲಕ ಉರುಳಿಸಲಾಗಿತ್ತು. ಕಳೆದ 18 ವರ್ಷದಲ್ಲಿ ಮಧ್ಯ ಪ್ರದೇಶವನ್ನು ರೋಗಗ್ರಸ್ಥ ಸ್ಥಿತಿಯಿಂದ ಹೋಲಿಕೆ ಮಾಡಲಾಗದ ಉತ್ತಮ ಸ್ಥಿತಿಗೆ ಪರಿವರ್ತಿಸಲಾಗಿದೆ ಎಂದು ಪ್ರಸ್ತುತ ವಿಧಾನಸಭೆ ಚುನಾವಣೆಯ ಪ್ರಚಾರದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೊಂಡಿದ್ದಾರೆ.

ಇಷ್ಟು ದೀರ್ಘ ಸಮಯ ರಾಜ್ಯವನ್ನು ಆಳಿದ ಬಿಜೆಪಿ ತನ್ನ ದಾಖಲೆಯನ್ನು ಸಮರ್ಥಿಸಿಕೊಳ್ಳಬೇಕಿದೆ. ಹೀಗಾಗಿ, ರೋಗಗ್ರಸ್ಥವಾಗಿದ್ದ ರಾಜ್ಯವನ್ನು 'ಹೋಲಿಕೆ ಮಾಡಲಾಗದ' ರಾಜ್ಯವನ್ನಾಗಿ ಮಾಡಲಾಗಿದೆ ಎಂದು ಅಮಿತ್ ಶಾ ಅಲ್ಲದೆ ನಿರ್ಮಲಾ ಸೀತಾರಾಮನ್‌ರಂಥ ಬಿಜೆಪಿಯ ಇತರ ನಾಯಕಗಣ ಕೊಚ್ಚಿಕೊಳ್ಳುತ್ತಿದೆ.



ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಂಥ ಹಿಂದಿ ವಲಯದ ರಾಜ್ಯಗಳಿಗೆ 'ಬಿಮಾರು' (ರೋಗಗ್ರಸ್ತ) ಎಂಬ ಹಣೆ ಪಟ್ಟಿ ಕಟ್ಟಲಾಗಿದೆ. ಆರ್ಥಿಕವಾಗಿ ಅವುಗಳ ಹಿಂದುಳಿದಿರುವಿಕೆ ಮತ್ತು ಸಾಮಾಜಿಕ ಸೂಚಕಗಳ ಕೆಳಗಿನ ಮಟ್ಟವನ್ನು ಪರಿಗಣಿಸಿ ಈ ಹಣೆಪಟ್ಟಿ ಕಟ್ಟಲಾಗಿದೆ. ಬಿಜೆಪಿ ಆಡಳಿತದಡಿ ರಾಜ್ಯ ತ್ವರಿತ ಪ್ರಗತಿ ಮಾಡಿದೆ ಎಂದು ಘೋಷಿಸುವ ಮೂಲಕ ಬಿಜೆಪಿ ಮುಖಂಡರು ಮಧ್ಯ ಪ್ರದೇಶಕ್ಕೆ ಅಂಟಿದ್ದ ರೋಗಗ್ರಸ್ತ ಹಣೆಪಟ್ಟಿಯನ್ನು ತೆಗೆದು ಹಾಕಲು ಪ್ರಯತ್ನಿಸುತ್ತಿದ್ದಾರೆ.

ವಾಸ್ತವವೇನು?

ಆದರೆ, ವಾಸ್ತವ ಸ್ಥಿತಿ ಏನಿದೆ? ಅತ್ಯಂತ ಕೆಟ್ಟ ಆರ್ಥಿಕ ಪರಿಸ್ಥಿತಿಯ ರಾಜ್ಯಗಳಲ್ಲಿ ಮಧ್ಯ ಪ್ರದೇಶವೂ ಒಂದಾಗಿದೆ.

1993–94ರಲ್ಲಿ ನಿವ್ವಳ ರಾಜ್ಯ ಆಂತರಿಕ ಉತ್ಪನ್ನದ ವಿಚಾರದಲ್ಲಿ 27 ರಾಜ್ಯಗಳಲ್ಲಿ ಮಧ್ಯ ಪ್ರದೇಶ 19ನೇ ಸ್ಥಾನ ಗಳಿಸಿತ್ತು. ಆದರೆ, 2021–22ರಲ್ಲಿ ಅದು ಕೇವಲ ಎರಡು ಸ್ಥಾನ ಮಾತ್ರ ಮೇಲೇರಿದೆ. ಅಂದರೆ 17ನೇ ಸ್ಥಾನದಲ್ಲಿದೆ. ನೀತಿ ಆಯೋಗದ ಪ್ರಕಾರ, ರಾಜ್ಯದ ಅರ್ಧಕ್ಕಿಂತ ಹೆಚ್ಚಿನ ಜನರು ಸಂಪತ್ತಿನ ಐದು ಭಾಗದ ಅತ್ಯಂತ ಕೆಳಗಿನ ಎರಡು ವಿಭಾಗಕ್ಕೆ ಸೇರಿದ್ದಾರೆ. ಶಿಕ್ಷಣದ ವಿಚಾರಕ್ಕೆ ಬಂದರೆ ಮಧ್ಯ ಪ್ರದೇಶ 2020ರಲ್ಲಿ 30 ರಾಜ್ಯಗಳ ಪೈಕಿ 20ನೇ ಸ್ಥಾನ ಗಳಿಸಿತ್ತು. ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜ್ ಮಟ್ಟದ ಶಿಕ್ಷಣಕ್ಕೆ ಪ್ರವೇಶದ ವಿಚಾರದಲ್ಲಿ ಈ ಸ್ಥಾನದಲ್ಲಿತ್ತು.

ರಾಜ್ಯದ ಸಾಮಾಜಿಕ ಸೂಚಕಗಳು ಕೂಡ ಅತ್ಯಂತ ಕೆಳಗಿನ ಮಟ್ಟದಲ್ಲಿವೆ. ಉದಾಹರಣೆಗೆ; 2019–21ರಲ್ಲಿ ಮಧ್ಯ ಪ್ರದೇಶ ಬೆಳವಣಿಗೆ ಕುಂಠಿತವಾದ (ಸ್ಟಂಟೆಡ್) ಶೇಕಡ 35.7 ಮಕ್ಕಳನ್ನು ಹೊಂದಿತ್ತು. ಆ ವಿಚಾರದಲ್ಲಿ 30 ರಾಜ್ಯಗಳಲ್ಲಿ 25ನೇ ರ್‍ಯಾಂಕ್ ಹೊಂದಿತ್ತು. ಕಡಿಮೆ ತೂಕದ ಮಕ್ಕಳ ವಿಭಾಗದಲ್ಲಿ 2015–16 ಮತ್ತು 2019–21ರ ನಡುವೆ ಕೇವಲ ಎರಡು ಸ್ಥಾನಗಳಷ್ಟೇ (28ರಿಂದ 26ಕ್ಕೆ) ಸುಧಾರಿಸಿದೆ. ಮಧ್ಯ ಪ್ರದೇಶದ ಒಟ್ಟಾರೆ ಸಾಮಾಜಿಕ ರ್‍ಯಾಂಕಿಂಗ್ ಕೆಳಮಟ್ಟದಲ್ಲಿರುವುದು ಅದರ ಮಾನವ ಅಭಿವೃದ್ಧಿ ಸೂಚ್ಯಂಕದ (ಎಚ್‌ಡಿಐ) ಸ್ಥಾನದಿಂದ ತಿಳಿಯುತ್ತದೆ. 2021ರಲ್ಲಿ ಅದು 30 ರಾಜ್ಯಗಳಲ್ಲಿ 27ನೇ ಸ್ಥಾನ ಹೊಂದಿತ್ತು.

ಸಾಮಾಜಿಕ–ಆರ್ಥಿಕ ಸೂಚಕಗಳು ಪಟ್ಟಿಯ ಕೆಳಗಿನ ಹಂತದ ಮಧ್ಯ ಭಾಗದಲ್ಲಿದೆ.

ಕೋಮುವಾದಿ–ಕಾರ್ಪೊರೇಟ್ ಆಡಳಿತ

ಶಿವರಾಜ್ ಸಿಂಗ್ ಚೌಹಾಣ್ ಸರಕಾರ ಸ್ಥಾಪಿಸಿರುವ ಕೋಮುವಾದಿ–ಕಾರ್ಪೊರೇಟ್ ಆಡಳಿತವು ವಿನಾಶಕಾರಿ ಫಲಿತಾಂಶಗಳನ್ನು ತೋರಿಸುತ್ತದೆ. ಯದ್ವಾತದ್ವಾ ಗಣಿಗಾರಿಕೆಗೆ ಅವಕಾಶ ನೀಡುವ ಮೂಲಕ ರಾಷ್ಟ್ರೀಯ ಸಂಪತ್ತಿನ ಲೂಟಿಗೆ ಅವಕಾಶ ಕೊಟ್ಟಿದ್ದನ್ನು ರಾಜ್ಯ ಕಂಡಿದೆ. ಅದಾನಿ ಸಮೂಹಕ್ಕೆ ಧಿರೌಲಿ ಕಲ್ಲಿದ್ದಲು ಗಣಿ ಗುತ್ತಿಗೆ (ಲೀಸ್) ಕೊಟ್ಟಿದ್ದು ತೀರಾ ಇತ್ತೀಚಿನ ಉದಾಹರಣೆಯಾಗಿದೆ. ಅದು 2,672 ಹೆಕ್ಟೇರ್ ವಿಸ್ತೀರ್ಣದ ಅರಣ್ಯ, ಹೊಲಗಳು ಮತ್ತು ಗ್ರಾಮಗಳಲ್ಲಿ ಹರಡಿದೆ.

ದಲಿತರ ಮೇಲಿನ ದೌರ್ಜನ್ಯ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ದಾಖಲೆಗಳ ಪ್ರಕಾರ, 2021ರಲ್ಲಿ ಮಧ್ಯ ಪ್ರದೇಶದಲ್ಲಿ ದಲಿತರ ಮೇಲೆ ದೇಶದಲ್ಲೇ ಅತಿ ಹೆಚ್ಚು ದೌರ್ಜನ್ಯಗಳು ನಡೆದಿವೆ. ಇದು ದೇಶದ ದಲಿತರ ಮೇಲಿನ ಒಟ್ಟು ದಬ್ಬಾಳಿಕೆಗಳ ಶೇಕಡ 29.8ರಷ್ಟಾಗುತ್ತದೆ. ಪರಿಶಿಷ್ಟ ಜಾತಿ ಜನರ ಮೇಲಿನ ದೌರ್ಜನ್ಯಗಳಲ್ಲಿ ಶೇಕಡ 14.1ರಷ್ಟು ಮಧ್ಯ ಪ್ರದೇಶದಲ್ಲೇ ದಾಖಲಾಗಿವೆ.

ಹಿಂದುತ್ವ ಅಜೆಂಡಾವನ್ನು ವಿಶೇಷವಾಗಿ 2019ರ ಬಿಜೆಪಿ ಸರ್ಕಾರದ ಪ್ರಸ್ತುತ ಅವಧಿಯಲ್ಲಿ ತೀವ್ರವಾಗಿ ಅನುಸರಿಸಲಾಗುತ್ತಿದ್ದು ಅಲ್ಪಸಂಖ್ಯಾತರ ಮೇಲೆ ದಾಳಿಗಳು ತೀವ್ರಗೊಂಡಿವೆ. ಇಂದೋರ್‌ನಲ್ಲಿ ಮುಸ್ಲಿಂ ವ್ಯಾಪಾರಸ್ಥರ ಮೇಲಿನ ದಾಳಿಗಳು ಮತ್ತು ಖರ್ಗೋನ್‌ನಲ್ಲಿ ಮುಸ್ಲಿಮರ ಮನೆಗಳನ್ನು ನೆಲಸಮಗೊಳಿಸಿದ್ದು ಅಲ್ಪಸಂಖ್ಯಾತರ ವಿರುದ್ಧದ ದೌರ್ಜನ್ಯದ ಈಚಿನ ದೃಷ್ಟಾಂತಗಳಾಗಿವೆ. ಕ್ರೈಸ್ತರ ಪ್ರಾರ್ಥನಾ ಸ್ಥಳಗಳ ಮೇಲೆ ಕೂಡ ದಾಳಿಗಳು ನಡೆದಿವೆ.

ಇಷ್ಟೆಲ್ಲ ನೋಡಿದ ಮೇಲೆ, ಮಧ್ಯ ಪ್ರದೇಶದ ಕೋಮುವಾದಿ–ಕಾರ್ಪೊರೇಟ್ ಆಡಳಿತವು ಮಧ್ಯ ಪ್ರದೇಶ ರಾಜ್ಯದ 'ಬಿಮಾರು' ಸ್ಥಿತಿಯನ್ನು ಕಾಯಂಗೊಳಿಸಿದೆ ಅಷ್ಟೇ ಎಂದೇ ಹೇಳಬೇಕಾಗುತ್ತದೆ. ಕೋಮುವಾದಿ ರೋಗಾಣುವಿಂದ ಪೀಡಿತವಾದ ಸಮಾಜ ಮತ್ತು ದಲಿತರು, ಆದಿವಾಸಿಗಳು ಹಾಗೂ ಅಲ್ಪಸಂಖ್ಯಾತರ ಮೇಲಿನ ನಗ್ನ ದಬ್ಬಾಳಿಕೆಯ ಸಮಾಜವನ್ನು ಸೃಷ್ಟಿಸಿದ್ದಾರೆ ಎನ್ನಬೇಕಾಗುತ್ತದೆ.

ಬಿಜೆಪಿ ಸರ್ಕಾರದ ಈ ಕರಾಳ ದಾಖಲೆಗಳಿಂದ ಜನರಲ್ಲಿ ಅತೃಪ್ತಿ ಮಡುಗಟ್ಟಿದ್ದು ನವೆಂಬರ್ 17ರಂದು ನಡೆಯುವ ಚುನಾವಣೆಯ ಫಲಿತಾಂಶದಲ್ಲಿ ಪ್ರತಿಫಲನಗೊಳ್ಳಲಿದೆ.

ಅನು: ವಿಶ್ವ

ಯುದ್ಧಭೂಮಿಯಲ್ಲೂ ನೈತಿಕತೆ ಎಂಬುದಿದೆ

ಈ ಪ್ರತಿಮೆಯನ್ನು ಸರಿಯಾಗಿ ಗಮನಿಸಿ. ಇದು ರಷ್ಯಾದ ಸೈನಿಕನ ಪ್ರತಿಮೆ. ಆತ ತನ್ನ ತೋಳುಗಳಲ್ಲಿ ಮಗುವೊಂದನ್ನು ಎತ್ತಿಕೊಂಡಿದ್ದಾನೆ. ಈ ಪ್ರತಿಮೆ ಜರ್ಮನಿ ದೇಶದ ಬರ್ಲಿನ್‌ನ ಟೆರ್ಪ್ ಟವರ್ [TERPTOWER] ಪಾರ್ಕ್‌ನಲ್ಲಿದೆ. 1945 ರಲ್ಲಿ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ವಿರುದ್ಧ ಸೋವಿಯತ್ ಕೆಂಪು ಸೈನ್ಯ (ಸೋವಿಯತ್ ರೆಡ್ ಆರ್ಮಿ)ಯ ವಿಜಯದ ಸ್ಮಾರಕವಿದು.

ಸೈನಿಕನ ಕೈಯಲ್ಲಿ ಮಗು ಏಕೆ? ಸೋವಿಯತ್ ಕೆಂಪು ಸೈನ್ಯ ಯುದ್ಧದ ಅಂತಿಮ ಅಧ್ಯಾಯವನ್ನು ಬರೆಯುತ್ತಿದ್ದಂತೆ, ರಷ್ಯಾದ ಕಮಾಂಡರ್ ಮಾರ್ಷಲ್ ಝುಕೋವ್ ಓರ್ಗ ಆದೇಶಿಸಿದ್ದು ಹೀಗೆ– "ಎಂಟು ವರ್ಷದೊಳಗಿನ ಮಕ್ಕಳಿಗೆ ಯಾವುದೇ ಅಡೆತಡೆ ಇಲ್ಲದೆ ಹಾಲು ಪೂರೈಕೆಯಾಗಬೇಕು. ಬರ್ಲಿನ್‌ಗೆ ಹಾಲು ತರಲು ಹಾಲಿನ ಡೈರಿಗೆ 25 ಟ್ರಕ್ಕುಗಳನ್ನು ಮೀಸಲಿಡುವಂತೆ ಮೇಜರ್ ಜನರಲ್ ಶಿಶಿನ್ ಅವರಿಗೆ ಆದೇಶಿಸಲಾಗಿದೆ. ಪ್ರತಿ ಐದು ದಿನಗಳಿಗೊಮ್ಮೆ ಈ ಸಂಬಂಧ ಮಿಲಿಟರಿ ಕೌನ್ಸಿಲ್‌ಗೆ ವರದಿ ಕಳುಹಿಸಬೇಕು." ಈ ಪ್ರತಿಮೆಯು ಈ ಸಂದೇಶವನ್ನು ಮಾತ್ರವಲ್ಲದೆ ಸಮಾಜವಾದದ ಪರಮೋನ್ನತ ಮಾನವೀಯತೆಯನ್ನು ಸಹ ಸಾರುತ್ತದೆ.



ಯುದ್ಧಭೂಮಿಯಲ್ಲಿಯೂ ಸಹ, ಮಕ್ಕಳು, ಮಹಿಳೆಯರು, ವೃದ್ಧರು ಮತ್ತು ರೋಗಿಗಳನ್ನು ರಕ್ಷಿಸುವ ನೈತಿಕತೆ ಸಮಾಜವಾದಿ ಸೋವಿಯತ್‌ಗೆ ಇತ್ತು. ಆದರೆ, ಇಸ್ರೇಲ್‌ನ ಆಕ್ರಮಣಕಾರಿ ಯುದ್ಧದಲ್ಲಿ ಪ್ಯಾಲೆಸ್ತೀನ್ ನ 4,500 ಕ್ಕೂ ಹೆಚ್ಚು ಮಕ್ಕಳು ಮತ್ತು 2,500 ಕ್ಕೂ ಹೆಚ್ಚು ಮಹಿಳೆಯರು ಸಾವನ್ನಪ್ಪಿದ್ದಾರೆ. ಇಸ್ರೇಲ್ ಸೈನಿಕರು ಮಕ್ಕಳ ಆಸ್ಪತ್ರೆಯ ಮೇಲೆ ದಾಳಿ ಮಾಡಿ ಧ್ವಂಸ ಮಾಡಿದ್ದಾರೆ. ಇಂತಹ ಇಸ್ರೇಲ್ ಹುಚ್ಚುತನವನ್ನು ಟೀ ಮಾರುವ ಅಂಗಡಿಯವನಿಂದ ಹಿಡಿದು, ಸಂಘಿ ರಾಜನ ತನಕ ಮಾನವೀಯತೆ ಇಲ್ಲದೆ ಬೆಂಬಲಿಸುತ್ತಾ ಆನಂದಿಸುತ್ತಾರೆ. ಎಡಪಕ್ಷಗಳು ಪ್ಯಾಲೆಸ್ತೀನ್ ಪರ ಧ್ವನಿ ಎತ್ತುತ್ತಿವೆ. ನೀವು ಯಾವ ಕಡೆ ಇದ್ದೀರಿ?

ರಂಜಾನ್ ಸಾಬ್ ಕರ್ನಾಟಕ ಏಕೀಕರಣದ..... ಪುಟ 3 ರಿಂದ

ಕರ್ನಾಟಕದ ಸಾಂಸ್ಕೃತಿಕ ಹೆಗ್ಗುರುತಾಗಿತ್ತು. ಬಳ್ಳಾರಿ ಜಿಲ್ಲೆಯು ಆಂಧ್ರಕ್ಕೆ ಸೇರಬೇಕು ಎಂದು ಕೆಲ ತೆಲುಗು ಭಾಷಿಕರು ಒತ್ತಡ ಹೇರುತ್ತಿದ್ದರು. ಕರ್ನಾಟಕ ಏಕೀಕರಣದ ಮೊದಲ ವಿಜಯ ಪತಾಕೆ ಹಾರಿದ್ದು ಬಳ್ಳಾರಿಯಲ್ಲಿ. ಅಂದಿನ ಕೇಂದ್ರ ಸರ್ಕಾರ ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಳ್ಳಾರಿಯನ್ನು ಮೈಸೂರು ರಾಜ್ಯಕ್ಕೆ ವಿಲೀನಗೊಳಿಸಿತು. 1953 ಅಕ್ಟೋಬರ್ 1ರಿಂದ ಬಳ್ಳಾರಿ ಜಿಲ್ಲೆಯು ಅಧಿಕೃತವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿತು. ಅದು ಏಕೀಕರಣ ಹೋರಾಟದ ಮೊದಲ ಜಯ ಅನಿಸಿಕೊಂಡಿತು.

1925ರಲ್ಲಿ ಬಳ್ಳಾರಿಯಲ್ಲಿ ಪ್ರಥಮ ನಾಡಹಬ್ಬ ನಡೆಯಿತು. ನಾಡಹಬ್ಬವು ಏಕೀಕರಣ ಹೋರಾಟಕ್ಕೆ ಸ್ಫೂರ್ತಿ ತುಂಬಿತು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಚಳುವಳಿಯಲ್ಲಿ 1400 ಕನ್ನಡಿಗರು ಜೈಲಿಗೆ ಹೋದರು. ಅವರಲ್ಲಿ ಕೋ. ಚನ್ನಬಸಪ್ಪ ಜೊತೆಗೆ ರಂಜಾನ್ ಸಾಬ್ ಕೂಡಾ ಇದ್ದರು. 1952ರಲ್ಲಿ ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿ ಹುಟ್ಟಿಕೊಂಡಿತು. ಏಕೀಕರಣ ಹೋರಾಟಕ್ಕೆ ರಂಜಾನ್ ಸಾಬ್ ಹಮಾಲರನ್ನು, ಜಟಕಾ ಹೊಡೆಯುವವರನ್ನು ಹಾಗೂ ಎಲ್ಲ ದುಡಿಯುವ ವರ್ಗಗಳನ್ನು ಒಗ್ಗೂಡಿಸಿ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಿದರು. ಒಂದು ಲಕ್ಷಕ್ಕೂ ಅಧಿಕ ಸಹಿಗಳನ್ನು ಸಂಗ್ರಹಿಸಿ ಮನವಿ ಜೊತೆಯಲ್ಲಿ ಸಂಸದರಾದ ಅಳವಂಡಿ ಶಿವಮೂರ್ತಿ ಸ್ವಾಮೀಜಿ ಮೂಲಕ ಸಂಸತ್ತಿಗೆ ರವಾನಿಸಲಾಯಿತು. 1953 ಅಕ್ಟೋಬರ್ 1ರಂದು ಏಳು ತಾಲೂಕುಗಳೊಂದಿಗೆ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಮರುದಿನವೇ ಸಂಭ್ರಮಾಚರಣೆ ಆಚರಿಸಲು ಭರದ ಸಿದ್ಧತೆ ಮಾಡಲಾಯಿತು. ಸಭಾ ಮಂಟಪದ ಜವಾಬ್ದಾರಿ ರಂಜಾನ್ ಸಾಹೇಬರಿಗೆ ವಹಿಸಲಾಗಿತ್ತು. ಕನ್ನಡದ ವಿರೋಧಿಗಳಿಗೆ ರಂಜಾನ್ ಸಾಹೇಬರು ಸಿಂಹ ಸ್ವಪ್ನರಾಗಿದ್ದರು. ಈ ಸಂಭ್ರಮವನ್ನು ಕೆಡಿಸಲು ಕೆಲವು ಪುಂಡರು ಹೊಂಚುಹಾಕಿದ್ದರು. ಇದನ್ನು ತಿಳಿದ ರಂಜಾನ್ ಸಾಹೇಬರು ಸಮಾವೇಶದ ಸಭಾ ಮಂಟಪದ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಿದ್ದರು. ರಂಜಾನ್ ಸಾಬ್ ಅಲ್ಲಿಯೇ ರಾತ್ರಿಯಿಡೀ ಕಾದಿದ್ದರು. ಕೆಲವು ಪುಂಡರು ಸಭಾ ಮಂಟಪವನ್ನು ಕೆಡಿಸಲು ಪ್ರಯತ್ನಿಸುತ್ತಿದ್ದಾಗ ರಂಜಾನ್ ಸಾಬ್ ಅವರ ಮೇಲೆ ಎರಗಿ ಬಿದ್ದರು. ಆ ದುಷ್ಕರ್ಮಿಗಳು ಬಲ್ಬಿನಲ್ಲಿ ತುಂಬಿದ ಆ್ಯಸಿಡ್ ಅನ್ನು ಅವರ ಮೇಲೆ ಎರಚಿದರು. ಅರ್ಧ ದೇಹ ಸುಟ್ಟುಹೋದ ಕಾರಣದಿಂದ ಅವರು ಪ್ರಜ್ಞೆ ತಪ್ಪಿ ನೆಲಕ್ಕೆ ಉರುಳಿದರು. ನಂತರ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಹುತಾತ್ಮರಾದರು. ನಾಡಿನ ನೆಲ ಹಾಗೂ ನುಡಿಗಾಗಿ ತನ್ನ ಅಮೂಲ್ಯ ಪ್ರಾಣವನ್ನು ಬಲಿಕೊಟ್ಟ ಏಕೈಕ ಹುತಾತ್ಮರನ್ನು ನಾವು ಸದಾ ನೆನೆಯುತ್ತಾ, ಅವರಿಂದ ಸ್ಫೂರ್ತಿ ಪಡೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕನ್ನಡಿಗರ ಹೃದಯದಲ್ಲಿ ಅವರು ಅಜರಾಮರ.

ಬಿಜೆಪಿ ಸರ್ಕಾರದ ಚಿಂತನೆಯ ಅಸಂಬದ್ಧತೆಯನ್ನು ಬಯಲಿಗೆ ತರುತ್ತಿದೆ ಹೆಚ್ಚುತ್ತಿರುವ ನಿರುದ್ಯೋಗದ ಬಿಕ್ಕಟ್ಟು

ಕೊರೊನಾ ಸಾಂಕ್ರಾಮಿಕದಿಂದಾಗಿ ಅರ್ಥವ್ಯವಸ್ಥೆಯಲ್ಲಿ ಉಂಟಾದ ಕುಸಿತದಿಂದ ಚೇತರಿಕೆಯು ಅಪೂರ್ಣವಾಗಿರುವುದೇ ಉದ್ಯೋಗ ನಿರ್ಮಾಣದಲ್ಲಿ ಜಡತೆ ಮತ್ತು ನಿರುದ್ಯೋಗ ದರ ಏರಿಕೆಗೆ ಕಾರಣ ಎನ್ನಲಾಗುತ್ತದೆ. ಆದರೆ ಜಿಡಿಪಿ ವೃದ್ಧಿಸಿದರೂ, ಉದ್ಯೋಗಾವಕಾಶಗಳು ಹೆಚ್ಚದಿದ್ದರೆ, ಅದು ಬೆಳವಣಿಗೆಯ ನಿಧಾನಗತಿಗಿಂತಲೂ ಮಿಗಿಲಾಗಿ, ಬೆಳವಣಿಗೆಯ ಸ್ವರೂಪವನ್ನು ಅಂದರೆ ಜಿಡಿಪಿ ಬೆಳವಣಿಗೆಯ ಪುನಶ್ಚೇತನ ಅಸಮವಾಗಿದೆ ಎಂಬುದನ್ನು ತೋರಿಸುತ್ತದೆ. ಉದ್ಯೋಗಾವಕಾಶಗಳನ್ನು ಕಲ್ಪಿಸಲು 'ಉತ್ತೇಜನೆ'ಯ ಹೆಸರಿನಲ್ಲಿ ಬಂಡವಾಳಗಾರರಿಗೆ ಮಾತ್ರ ತೆರಿಗೆ ರಿಯಾಯಿತಿಗಳನ್ನು ಒದಗಿಸುತ್ತಿರುವ ಸರ್ಕಾರ, ಸರ್ಕಾರೀ ವಲಯದಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಗ್ರಾಮೀಣ ಪ್ರದೇಶದಲ್ಲಿ ಮನರೇಗ ಸ್ಕೀಮಿಗೆ ಅಗತ್ಯವಾದ ವೆಚ್ಚವನ್ನು ಕೈಗೊಳ್ಳುತ್ತಿಲ್ಲ. ಸಿಎಂಐಇ ದತ್ತಾಂಶವು ಹೆಚ್ಚುತ್ತಿರುವ ನಿರುದ್ಯೋಗ ಬಿಕ್ಕಟ್ಟನ್ನು ಎತ್ತಿ ತೋರಿಸುವುದರ ಜೊತೆಯಲ್ಲೇ, ನಿರುದ್ಯೋಗದ ಬಗ್ಗೆ ಬಿಜೆಪಿ ಸರ್ಕಾರದ ಇಂತಹ ಚಿಂತನೆಯ ಅಸಂಬದ್ಧತೆಯನ್ನೂ ಬಹಿರಂಗಪಡಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಭಾರತದಂಥಹ ದೇಶಗಳಲ್ಲಿ ಶ್ರಮಿಕ ಪಡೆಯನ್ನು "ಉದ್ಯೋಗಿಗಳು" ಮತ್ತು "ನಿರುದ್ಯೋಗಿಗಳು" ಎಂದು ನಿಖರವಾಗಿ ವಿಂಗಡಿಸಿಲ್ಲ. ಏಕೆಂದರೆ, ಬಹುತೇಕ ಕೆಲಸಗಳು ಹಂಗಾಮಿಯಾಗಿಬಿಟ್ಟಿವೆ ಮತ್ತು ಈ ಪ್ರವೃತ್ತಿ ಹೆಚ್ಚುತ್ತಲೇ ಇದೆ. ಹಾಗಾಗಿ, ನಿರುದ್ಯೋಗದ ಮಟ್ಟವನ್ನು ಅಳೆಯುವುದು ಒಂದು ಬಲು ನಾಜೂಕಿನ ವ್ಯವಹಾರವಾಗುತ್ತದೆ. ಅಂದರೆ, ಒಬ್ಬ ವ್ಯಕ್ತಿಯನ್ನು, ಗತಿಸಿದ ಒಂದು ನಿರ್ದಿಷ್ಟ ಅವಧಿಯಲ್ಲಿ ನಿನಗೆ ಎಷ್ಟು ದಿನಗಳ ಕೆಲಸ ದೊರಕಿತ್ತು ಎಂದು ಕೇಳುವುದು ಅವಶ್ಯವಾಗುತ್ತದೆ. ಈ ಕಾರಣದಿಂದಾಗಿ, ನಿರುದ್ಯೋಗದ ಅಳತೆಗಾಗಿ ವರ್ಷದ ಯಾವ ಅವಧಿಯನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು ಮತ್ತು ಆ ಅವಧಿಯಲ್ಲಿ ಎಷ್ಟು ದಿನಗಳ ಕೆಲಸವನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು ಎಂಬುದಕ್ಕೆ ಅನುಗುಣವಾಗಿ ನಿರುದ್ಯೋಗದ ಮಟ್ಟ ಬದಲಾಗುತ್ತಿರುತ್ತದೆ. ಅಂತೆಯೇ, ಈ ಸಂಬಂಧವಾಗಿ ನಡೆಸುವ ರಾಷ್ಟ್ರೀಯ ಮಾದರಿ ಸಮೀಕ್ಷೆಯು(ಎನ್‌ಎಸ್‌ಎಸ್) ಮೂರು ವಿಭಿನ್ನ ಪರಿಕಲ್ಪನೆಗಳಿಂದ ಕೂಡಿದೆ: ನಿರುದ್ಯೋಗದ ಸಾಮಾನ್ಯ ಮಟ್ಟ, ಸಾಪ್ತಾಹಿಕ ಮಟ್ಟ, ಮತ್ತು ದಿನವಹಿ ಮಟ್ಟ. ಈ ಪರಿಕಲ್ಪನೆಗಳ ಬಗ್ಗೆ ಇರುವ ವ್ಯಾಖ್ಯಾನಗಳ ಭಿನ್ನತೆಯ ಹೊರತಾಗಿಯೂ, ಈ ಸಂಸ್ಥೆಯು ಎರಡು ಸಮೀಕ್ಷೆಗಳನ್ನು (ಸರ್ವೆಗಳನ್ನು) ನಡೆಸುತ್ತಿತ್ತು. ಸಣ್ಣ ಸ್ಯಾಂಪಲ್ಲಿನ ಒಂದು ವಾರ್ಷಿಕ ಸರ್ವೆಯನ್ನು ಮತ್ತು ಒಂದು ದೊಡ್ಡ ಸ್ಯಾಂಪಲ್ಲಿನ ಸರ್ವೆಯನ್ನು ಪ್ರತಿ ಐದು ವರ್ಷಗಳಿಗೊಮ್ಮೆಯೂ ನಡೆಸುತ್ತಿತ್ತು. ಈ ಕಾರಣದಿಂದಾಗಿ ಈ ಸಂಸ್ಥೆಯು ನೀಡುತ್ತಿದ್ದ ವಾರ್ಷಿಕ ಅಂಕಿಅಂಶಗಳು ಹೆಚ್ಚು ನಿಖರತೆ ಹೊಂದಿದ್ದವು.

ನಿರುದ್ಯೋಗ ದರವನ್ನು, ಕೆಲಸ ಬಯಸುವ ಮತ್ತು ಅದನ್ನು ಮಾಡಲು ಸಿದ್ಧರಿರುವ ಕೆಲಸ ಇಲ್ಲದವರ ಸಂಖ್ಯೆ ಮತ್ತು ಶ್ರಮಿಕ ಪಡೆಯ (ಶ್ರಮಿಕ ಪಡೆಯಲ್ಲಿ ಉದ್ಯೋಗಿಗಳು ಹಾಗೂ ನಿರುದ್ಯೋಗಿಗಳೂ ಸೇರುತ್ತಾರೆ) ಒಟ್ಟು ಸಂಖ್ಯೆ ಇವುಗಳ ಅನುಪಾತ ಎಂದು ವ್ಯಾಖ್ಯಾನಿಸಲಾಗಿದೆ. ನಿರುದ್ಯೋಗದ ಬಗ್ಗೆ, ಸೆಂಟರ್ ಫಾರ್ ಮಾನಿಟರಿಂಗ್ ದಿ ಇಂಡಿಯನ್ ಎಕಾನಮಿ (ಸಿಎಂಐಇ) ಎಂಬ ಒಂದು ಖಾಸಗಿ ಸಂಸ್ಥೆಯು ಒಂದು ಮಾಸಿಕ ಸ್ಯಾಂಪಲ್ ಸರ್ವೆಯನ್ನು ಪ್ರತಿ ತಿಂಗಳೂ ನಡೆಸುತ್ತದೆ (ಪ್ರತಿ ವಾರವೂ ಒಂದು ಸಾಪ್ತಾಹಿಕ ಸ್ಯಾಂಪಲ್ ಸರ್ವೆಯನ್ನು ನಗರಗಳಲ್ಲಿ ನಡೆಸುತ್ತದೆ). ಸರ್ವೆ ಮಾಡಿದ ದಿನಾಂಕದಂದು ನೀವು ಉದ್ಯೋಗದಲ್ಲಿ ಇದ್ದಿರೇ ಎಂದು ಕೇಳುತ್ತಾರೆ. ಈ ಸಂಸ್ಥೆಯು ನಡೆಸುವ ಸರ್ವೆಯ ವಿಧಾನದ ಬಗ್ಗೆ ಕೆಲವು ಆಕ್ಷೇಪಣೆಗಳು ಇರಬಹುದು. ಆದರೆ ಬಹಳ ವರ್ಷಗಳಿಂದಲೂ ಅದು ಒಂದು ಸುಸಂಗತ ಅಂಕಿಅಂಶಗಳನ್ನು ಒದಗಿಸುತ್ತಾ ಬಂದಿದೆ. ಈ ಅಂಕಿಅಂಶಗಳನ್ನು, ನಿರುದ್ಯೋಗದ ಪ್ರವೃತ್ತಿಗಳನ್ನು ವಿಶ್ಲೇಷಿಸಲು ಸಂಶೋಧಕರು ಬಳಸುತ್ತಿದ್ದಾರೆ.

ಅಕ್ಟೋಬರ್ 2023ರ ಸಿಎಂಐಇ ಅಂಕಿಅಂಶಗಳ ಪ್ರಕಾರ, ದೇಶದಲ್ಲಿ ನಿರುದ್ಯೋಗ ದರ ಶೇ. 10.05ರಷ್ಟಿದೆ. ಗ್ರಾಮೀಣದಲ್ಲಿ ಶೇ. 10.82ರಷ್ಟಿದ್ದರೆ, ನಗರಗಳಲ್ಲಿ ಶೇ. 8.44ರಷ್ಟಿದೆ. ಹಿಂದಿನ ತಿಂಗಳಲ್ಲಿ ಶೇ. 7.09ರ ಮಟ್ಟದಲ್ಲಿದ್ದ ಒಟ್ಟಾರೆ ನಿರುದ್ಯೋಗ ದರ, ಮೇ 2021ರ ನಂತರದಲ್ಲಿ ಇದೀಗ ಒಂದು ತೀವ್ರ ಏರಿಕೆಯನ್ನು ಕಂಡಿದೆ. (ಕೋವಿಡ್-19 ಹಿನ್ನೆಲೆಯಲ್ಲಿ ಮೋದಿ ಸರ್ಕಾರ ವಿಧಿಸಿದ ಕಠಿಣ ಲಾಕ್‌ಡೌನ್‌ನಿಂದಾಗಿ ಇದೇ ರೀತಿಯ ತೀವ್ರ ಏರಿಕೆ 2020ರಲ್ಲಿಯೂ ಇತ್ತು).

ಅಂಕಿಅಂಶಗಳ ಮತ್ತೊಂದು ಆಯಾಮ

ಈ ದರ ಹೆಚ್ಚಳವು ನಿರುದ್ಯೋಗ ಬಿಕ್ಕಟ್ಟಿನ ಬಗ್ಗೆ ಒಂದು ಚರ್ಚೆಯನ್ನು ಸ್ವಾಭಾವಿಕವಾಗಿ ಹುಟ್ಟುಹಾಕಿದೆ. ಆದರೆ, ನಾನು ಸಿಎಂಐಇ ಕೊಡುವ ಅಂಕಿಅಂಶಗಳಿಗಿಂತಲೂ ಭಿನ್ನವಾದ ಮತ್ತೊಂದು ಅಂಶವನ್ನು ಅನ್ವೇಷಿಸಲು ಬಯಸುತ್ತೇನೆ. ಸಿಎಂಐಇ ನ ಅಂದಾಜು ನಿರುದ್ಯೋಗ ದರವು ತಿಂಗಳಿನಿಂದ ತಿಂಗಳಿಗೆ ಗಮನಾರ್ಹವಾಗಿ ಬದಲಾಗುತ್ತಿರುವಂತೆ ತೋರುವುದರಿಂದ, ಮಾಸಿಕ ನಿರುದ್ಯೋಗ ದರದ ಬದಲು, ನಿರುದ್ಯೋಗ ಬಿಕ್ಕಟ್ಟು ಬೆಳೆಯುತ್ತಲೇ ಇದೆ ಎಂಬುದನ್ನು ದೃಢಪಡಿಸಲು ಸಿಎಂಐಇ ಅಂಕಿಅಂಶಗಳ ಮತ್ತೊಂದು ಆಯಾಮದ ಮೇಲೆ ಗಮನ ಹರಿಸುತ್ತೇನೆ. ಅಲ್ಲಿ ಒಂದು ನಿರ್ದಿಷ್ಟ ತರ್ಕವೂ ಇದೆ.

ಸಿಎಂಐಇ ಮುಖ್ಯಸ್ಥರ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಭಾರತದ ಶ್ರಮಿಕ ಪಡೆ (ಇದು ಉದ್ಯೋಗ ಹೊಂದಿದವರ ಸಂಖ್ಯೆಗೆ ಸಮಾನಾರ್ಥಕವಾಗಿದೆ) ವಾಸ್ತವವಾಗಿ 40 ಕೋಟಿಗಿಂತ ತುಸು ಹೆಚ್ಚಿನ ಮಟ್ಟದಲ್ಲೇ ನಿಂತಿದೆ. ಅಂದರೆ, ಉದ್ಯೋಗಾವಕಾಶಗಳು ವೃದ್ಧಿಸಿಲ್ಲ ಎಂದಾಗುತ್ತದೆ. ಅಕ್ಟೋಬರ್ 2023ರಲ್ಲಿ, ನಿರುದ್ಯೋಗ ದರ ಅಷ್ಟೊಂದು ತೀವ್ರವಾಗಿ ಏರಿದಾಗ, ಭಾರತದ ಒಟ್ಟು ಶ್ರಮಿಕ ಪಡೆಯ ಸಂಖ್ಯೆಯೂ ಒಂದು ಹಠಾತ್ ಹೆಚ್ಚಳವನ್ನು ತೋರಿಸುತ್ತದೆ. ಆದರೆ, ಒಂದು ಸರಳ ಲೆಕ್ಕಾಚಾರದ ಪ್ರಕಾರ, ಹಿಂದಿನ ಅವಧಿಗೆ ಹೋಲಿಸಿದರೆ ಒಟ್ಟು ಉದ್ಯೋಗಿಗಳ ಸಂಖ್ಯೆಯು ಬದಲಾಗದೆ ಉಳಿದಿದೆ ಎಂಬುದು ಕಂಡುಬರುತ್ತದೆ (ಈ ಅಂಶವು ನಿರುದ್ಯೋಗ ದರ ಏಕೆ ತೀವ್ರವಾಗಿ ಏರಿತು ಎಂಬುದನ್ನು ವಿವರಿಸುತ್ತದೆ). ಈ ರೀತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಭಾರತದ ಅರ್ಥವ್ಯವಸ್ಥೆಯಲ್ಲಿ ಉದ್ಯೋಗಿಗಳ ಸಂಖ್ಯೆಯ ಸ್ಥಗಿತವು ಒಂದು ವಾಸ್ತವ ಸಂಗತಿಯಾಗಿದೆ.

ಈ ಅಂಶವು 2019ರಿಂದಲೂ ಸಂಭವಿಸುತ್ತಿರುವ ನಿರುದ್ಯೋಗ ದರದ ಏರಿಕೆಯ ವಿದ್ಯಮಾನವನ್ನು ವಿವರಿಸುತ್ತದೆ. ಸಿಎಂಐಇ ಪ್ರಕಾರ, 2019ರಲ್ಲಿ ಶೇ. 5.27ರಷ್ಟಿದ್ದ ನಿರುದ್ಯೋಗ ದರವು 2020ರ ವೇಳೆಗೆ ಶೇ. 8ಕ್ಕೆ ಏರಿತ್ತು ಮತ್ತು ತದನಂತರದ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ಶೇ. 5.98 ಮತ್ತು ಶೇ. 7.33ರಷ್ಟಿತ್ತು. ಇದು 2023ರಲ್ಲಿ ಇನ್ನಷ್ಟು ಏರಿಕೆ ಕಂಡಿದೆ. ಕಾರ್ಮಿಕ ಪಡೆಯ ಸಂಖ್ಯೆ ಹೆಚ್ಚಿದರೂ, ನಿರುದ್ಯೋಗ ದರದ ಈ ರೀತಿಯ ಏರಿಕೆಯು ಉದ್ಯೋಗದಲ್ಲಿರುವವರ ಒಟ್ಟು ಸಂಖ್ಯೆಯು ಬದಲಾಗದೆ ಉಳಿದ ಅಂಶದ ಪರಿಣಾಮವೇ. ಮತ್ತು, ಕಾರ್ಮಿಕ ಪಡೆಯಲ್ಲಿ ಆಗಿರುವ ಹೆಚ್ಚಳವು, ಕಾರ್ಮಿಕ ಭಾಗವಹಿಸುವಿಕೆ ದರದಲ್ಲಿ ಆಗಿರುವ ಇಳಿಕೆಯನ್ನು ಸರಿದೂಗಿಸದ ಸನ್ನಿವೇಶದಲ್ಲಿ ದುಡಿಯುವ ವಯಸ್ಸಿನ ಜನಸಂಖ್ಯೆ ಬೆಳೆಯುತ್ತಿರುವುದರ ಪರಿಣಾಮವಾಗಿದೆ.

ಬೆಳವಣಿಗೆಯ ಸ್ವರೂಪವೇ ಬದಲಾಗಿದೆ

ಕೊರೊನಾ ಸಾಂಕ್ರಾಮಿಕದಿಂದಾಗಿ ಅರ್ಥವ್ಯವಸ್ಥೆಯಲ್ಲಿ ಉಂಟಾದ ಕುಸಿತದಿಂದ ಚೇತರಿಕೆಯು ಅಪೂರ್ಣವಾಗಿರುವುದೇ ಉದ್ಯೋಗಗಳ ಈ ಜಡತೆ ಮತ್ತು ನಿರುದ್ಯೋಗ ದರ ಏರಿಕೆಗೆ ಕಾರಣ ಎಂಬುದು ಅನೇಕ ವ್ಯಾಖ್ಯಾನಕಾರರ ಅಂಬೋಣ. ಈ ಅಭಿಪ್ರಾಯವು ಕಿಸಬಾಯಿ ದಾಸನ ಅದೇ ಹಾಡಿನಂತಾಗಬಾರದು ಎಂದಾದರೆ, ಜಿಡಿಪಿಯ ಸಾಧನೆಯನ್ನು ಉಲ್ಲೇಖಿಸಬೇಕಾಗುತ್ತದೆ. ಸಾಂಕ್ರಾಮಿಕದ ನಂತರದಲ್ಲಿ ಜಿಡಿಪಿಯ ಚೇತರಿಕೆಯು ನಿಧಾನವಾಗಿತ್ತು ಎಂಬುದು ನಿಜ. ಆದರೆ, "ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ದೇಶ" ಎಂಬ ಸರ್ಕಾರದ ಹೆಗ್ಗಳಿಕೆಯ ಮೂಲಕ ಉದ್ಯೋಗದಲ್ಲಿರುವವರ ಒಟ್ಟು ಸಂಖ್ಯೆಯು ಬದಲಾಗದೆ ಉಳಿದ ಜಡತೆಯನ್ನು ವಿವರಿಸುವುದು ಸಾಧ್ಯವಿಲ್ಲ. ಉದಾಹರಣೆಗೆ, 2019ಕ್ಕೆ ಹೋಲಿಸಿದರೆ, ನೈಜ ಜಿಡಿಪಿಯು 2023ರಲ್ಲಿ ಸುಮಾರು ಶೇ. 16ರಷ್ಟು ಏರಿಕೆ ಕಂಡಿದೆ (2023ರಲ್ಲಿ ಬೆಳವಣಿಗೆಯ ದರ ಶೇ. 6ರಷ್ಟು ಇದೆ ಎಂದು ಊಹಿಸಿಕೊಳ್ಳಲಾಗಿದೆ). ಜಿಡಿಪಿ ವೃದ್ಧಿಸಿದರೂ, ಉದ್ಯೋಗಾವಕಾಶಗಳು ಹೆಚ್ಚದಿದ್ದರೆ, ಈ ರೀತಿಯ ಬೆಳವಣಿಗೆಯು ಅದರ ನಿಧಾನಗತಿಗಿಂತಲೂ ಮಿಗಿಲಾಗಿ, ಬೆಳವಣಿಗೆಯ ಸ್ವರೂಪದ ಬಗ್ಗೆಯೇ ಏನನ್ನೋ ಹೇಳುತ್ತದೆ. ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ಬೆಳವಣಿಗೆಯ ದರವನ್ನು ವೇಗಗೊಳಿಸಿದರೆ ಮಾತ್ರ ನಿರುದ್ಯೋಗವನ್ನು ನಿವಾರಿಸಬಹುದು ಎಂಬ ಪ್ರತಿಪಾದನೆಯು ಸಂಪೂರ್ಣವಾಗಿ ಅಸಮರ್ಥನೀಯ ಎಂಬುದನ್ನು ಭಾರತದ ಅನುಭವವೇ ತೋರಿಸುತ್ತದೆ. ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ನಿರುದ್ಯೋಗ ನಿವಾರಣೆಯು, ಬೆಳವಣಿಗೆಯನ್ನು ಹೇಗೆ ಸಾಧಿಸಲಾಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ.

ಉದ್ಯೋಗಾವಕಾಶಗಳ ಜಡತೆಯ ಹಿಂದಿರುವ ಕಾರಣವೆಂದರೆ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಳೆದ ಕೆಲವು ವರ್ಷಗಳಲ್ಲಿ ಬೆಳವಣಿಗೆಯ ಸ್ವರೂಪವೇ ಬದಲಾಗಿದೆ. ಬೆಳವಣಿಗೆಯ ಈ ಮಾದರಿಯು ಅತಿ ಕಡಿಮೆ ಸಂಖ್ಯೆಯ ಉದ್ಯೋಗಗಳನ್ನು ಸೃಷ್ಟಿಸಿದೆ. ಸದಾ ಕಾಲವೂ ದುಃಸ್ಥಿತಿಯಲ್ಲಿದ್ದ ಸಣ್ಣ ಕೈಗಾರಿಕೆ ಮತ್ತು ಕಿರು ಉತ್ಪಾದನಾ ವಲಯದಿಂದ ಸರ್ಕಾರದ ಪ್ರೋತ್ಸಾಹ-ಬೆಂಬಲವನ್ನು, ನವ-ಉದಾರವಾದಿ ನೀತಿಗಳ ಜಾರಿಯಿಂದಾಗಿ, ಹಿಂಪಡೆದುದರಿಂದ ಮತ್ತು ಈ ವಲಯವನ್ನು ಅನಿರ್ಬಂಧಿತ ವಿದೇಶಿ ಸ್ಪರ್ಧೆಗೆ ತೆರೆದಿಟ್ಟದ್ದರಿಂದ ಮತ್ತು ಮೋದಿ ಸರ್ಕಾರದ ನೋಟುಗಳ ರದ್ದತಿ ಮತ್ತು ಜಿಎಸ್‌ಟಿ ಜಾರಿಯಂಥಹ ನಿರ್ಧಾರಗಳಿಂದಾಗಿ ಈ ವಲಯದ ಸಂಕಷ್ಟಗಳು ಹೆಚ್ಚಿದವು. ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಕೋವಿಡ್-19ರ ಕಠಿಣ ಲಾಕ್‌ಡೌನ್ ಈ ವಲಯದ ಮೇಲೆ ಒಂದು ಭಾರೀ ವಿನಾಶಕಾರಿ ಪರಿಣಾಮವನ್ನು ಬೀರಿತು. ಈ ಎಲ್ಲ ಅಂಶಗಳಿಂದಾಗಿ ಈ ವಲಯವು ಇನ್ನೂ ಚೇತರಿಸಿಕೊಂಡಿಲ್ಲ. ಅರ್ಥವ್ಯವಸ್ಥೆಯ ಕೋವಿಡ್-ನಂತರದ ಪುನಶ್ಚೇತನದ ಲಾಭವು ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವ ಈ ವಲಯಕ್ಕೆ ದಕ್ಕಲಿಲ್ಲ. ಬಿಕ್ಕಟ್ಟಿನಿಂದ ಈ ವಲಯವು ಇನ್ನೂ ಹೊರಬಂದಿಲ್ಲ. ಜಿಡಿಪಿ ಬೆಳವಣಿಗೆಯ ಅಸಮ ಪುನಶ್ಚೇತನವೇ ಈ ಉದ್ಯೋಗ-ಸಾಂದ್ರ ವಲಯವು ಉದ್ಯೋಗ ಒದಗಿಸುವಲ್ಲಿ ಹಿಂದೆ ಬೀಳಲು ಕಾರಣವಾಗಿದೆ. ಈಗ ಅದರ ಬೆಳವಣಿಗೆಯು ಶೂನ್ಯ ಮಟ್ಟದಲ್ಲಿದೆ.

ನಿಷ್ಪ್ರಯೋಜಕ ಉಪಕ್ರಮಗಳು


ಬಿಜೆಪಿ ಸರ್ಕಾರವು ತನ್ನ ಬಳಿ ಹೊಂದಿರುವ ಆರ್ಥಿಕ ಪ್ರೋತ್ಸಾಹದ ಎಲ್ಲ ಉಪಕ್ರಮಗಳೂ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಅಸಮರ್ಥವಾಗಿವೆ. ಈ ಎಲ್ಲ ಉಪಕ್ರಮಗಳೂ ಬಂಡವಾಳಗಾರರಿಗೆ ಅಧಿಕ ಹೂಡಿಕೆ ಮಾಡಲು ಅನುಕೂಲವಾಗುವಂತೆ ಅನೇಕ

ಪುಟ 15 ಕ್ಕೆ



ಎರಡು ಭಾರತಗಳು: ಉತ್ತರ ಮತ್ತು ದಕ್ಷಿಣ

ಪ್ರೊ. ಟಿ.ಆರ್. ಚಂದ್ರಶೇಖರ



GOAL-WISE TOP STATES

Goal	Top States
No poverty	Tamil Nadu
Zero hunger	Kerala
Good health and well-being	Gujarat
Quality education	Kerala
Gender equality	Chhattisgarh
Clean water and sanitation	Goa
Decent work and economic growth	Himachal Pradesh
Industry, innovation and infrastructure	Gujarat
Reduced inequality	Meghalaya
Sustainable cities and communities	Punjab
Responsible consumption and production	Tripura
Climate action	Odisha
Life below water	Odisha
Life on land	Arunachal Pradesh
Peace, justice and strong institutions	Uttarakhand

ನಾವು ಬಯಸಲಿ-ಬಯಸದಿರಲಿ, ದಕ್ಷಿಣ ಭಾರತ ಮತ್ತು ಉತ್ತರ ಭಾರತ ನಡುವಿನ ಕಂದರವು-ಅಂತರವು ಬೇರೆ ಬೇರೆ ಆಯಾಮಗಳಲ್ಲಿ ಬೆಳೆಯುತ್ತಿದೆ. ಪ್ರಾಚೀನ ಕಾಲದಿಂದಲೂ 'ಭಾವಿಸಿದ' ಭಾರತವು ಒಂದೇ ಎಂಬುದು ನಿಜವಾದರೂ ಇಲ್ಲಿ ಇಂದು ದೊಡ್ಡ ಬಿರುಕು ಉಂಟಾಗುತ್ತಿದೆ. ಈ ಬಿರುಕು ದಕ್ಷಿಣ ಮತ್ತು ಉತ್ತರ ಭಾರತದ ರಾಜ್ಯಗಳ ನಡುವೆ ಉಲ್ಬಣಗೊಳ್ಳುತ್ತಾ ನಡೆದಿದೆ. ಇದು ಕೇವಲ ಆರ್ಯ-ದ್ರಾವಿಡ ಜನಾಂಗ ಭಿನ್ನತೆಗೆ ಅಥವಾ ಇಂಡೋ-ಆರ್ಯನ್-ದ್ರಾವಿಡಿಯನ್ ಭಾಷೆಗಳ ವ್ಯತ್ಯಾಸಕ್ಕೆ ಸೀಮಿತಗೊಂಡಿಲ್ಲ ಅಥವಾ ಇಂಡಿಯಾ-ಭಾರತ ಎಂಬ ರಾಜಕೀಯ ಕೆಸರೆರಚಾಟಕ್ಕೂ ಸಂಬಂಧಿಸಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳಲ್ಲಿ ಬಿರುಕು ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ಭಿನ್ನತೆಗಳು-ಬಿರುಕುಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಿಯಂತ್ರಣದಲ್ಲಿದ್ದವು. ನಿಯಂತ್ರಣದಲ್ಲಿದ್ದವು ಎನ್ನುವುದಕ್ಕಿಂತ ಸದರಿ ಬಿರುಕಿಗೆ ಎಣ್ಣೆ ಸುರಿಯುವ ಕೆಲಸವನ್ನು ಅಂದು ಸರ್ಕಾರಗಳು ಮಾಡುತ್ತಿರಲಿಲ್ಲ. ಆದರೆ ಕಳೆದ ಒಂದು ದಶಕದಿಂದ ಒಕ್ಕೂಟ ಸರ್ಕಾರದ ಏಕೀಕೃತ-ಕೇಂದ್ರೀಕರಣ ನೀತಿಗಳಿಂದಾಗಿ ಇವೆರಡರ ನಡುವಿನ ಕಂದಕವು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಈ ಬಗೆಯ ಚರ್ಚೆಯನ್ನು 'ಉತ್ತರ-ದಕ್ಷಿಣ ಭಾರತಗಳ ನಡುವೆ ವಿಷಮತೆಯನ್ನು ಬಿತ್ತುವ ಕೆಲಸ' ಎಂದು ಭಾವಿಸುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಬಿರುಕು-ಕಂದರ ಕಣ್ಣಿಗೆ ಗೋಚರವಾಗುವಷ್ಟು ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ಕಂದರ-ಬಿರುಕನ್ನು ಗುರುತಿಸಿ ಪ್ರಜ್ಞಾಪೂರ್ವಕವಾಗಿ ಅದನ್ನು ತಡೆಯುವ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳದಿದ್ದರೆ ಇವೆರಡರ ನಡುವಿನ ವಿಷಮತೆಯು ಸ್ಫೋಟಗೊಳ್ಳುವ ಸಾಧ್ಯತೆಯಿದೆ.

ಉತ್ತರ-ದಕ್ಷಿಣ ನಡುವಿನ ಕಂದರ ಎಷ್ಟು ದೊಡ್ಡದಿದೆ?

ನಮ್ಮದು ಮೂಲತಃ ಒಕ್ಕೂಟ ರಾಜಕೀಯ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕವಾಗಿ ರಾಜ್ಯ ಸರ್ಕಾರಗಳ ಮತ್ತು ಒಕ್ಕೂಟ ಸರ್ಕಾರ ನಡುವೆ ಸಮಾನ ಹಕ್ಕುಗಳು ಮತ್ತು ಕರ್ತವ್ಯಗಳಿರುತ್ತವೆ. ಈ ಸಮತೋಲನದಲ್ಲಿ ವ್ಯತ್ಯಾಸವುಂಟಾದರೆ ರಾಜ್ಯ-ಒಕ್ಕೂಟ ನಡುವಿನ ಸಂಬಂಧದಲ್ಲಿ ಸಮಸ್ಯೆಯುಂಟಾಗುತ್ತದೆ.

ಇಂದು ನಮ್ಮ ದೇಶದಲ್ಲಿ ಉತ್ತರ ಮತ್ತು ದಕ್ಷಿಣ ಭಾರತ ರಾಜ್ಯಗಳ ನಡುವೆ ಬಿರುಕು ಹೆಚ್ಚಾಗುತ್ತಿದೆ. ಉತ್ತರ-ದಕ್ಷಿಣಗಳ ನಡುವಿನ ಸಂಬಂಧವು 'ಶ್ರೀಮಂತ ದಕ್ಷಿಣ - ಬಡತನದ ಉತ್ತರ' ಎಂಬಂತಾಗಿದೆ. ಆರ್ಥಿಕ ಬೆಳವಣಿಗೆಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ದಕ್ಷಿಣದ ರಾಜ್ಯಗಳು ಉತ್ತರದ ರಾಜ್ಯಗಳಿಗಿಂತ ಉತ್ತಮಸ್ಥಿತಿಯಲ್ಲಿರುವುದು ಅನೇಕ ವರದಿ-ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ನಿದರ್ಶನಕ್ಕಾಗಿ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ, ಜಾರ್ಖಂಡ್ ಮತ್ತು ಛತ್ತೀಸ್‌ಗಡ ರಾಜ್ಯಗಳನ್ನು(ಹಿಂದಿ ಬೆಲ್ಟ್) ಮತ್ತು ದಕ್ಷಿಣ ಭಾರತದ ಆರು ರಾಜ್ಯಗಳನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹೋಲಿಸಿದರೆ ನಮಗೆ ಇವೆರಡರ ನಡುವಿನ ಅಂತರ-ಕಂದರದ ಅಂದಾಜು ದೊರೆಯುತ್ತದೆ.

ಈ ಎರಡು ಭಾರತಗಳ ನಡುವಿನ ಬಿರುಕನ್ನು ಗುರುತಿಸಲು ಜೀವನಾಯುಷ್ಯ (2019), ಶಿಶುಗಳ ಮರಣ ಪ್ರಮಾಣ(2019), ತಾಯಂದಿರ ಮರಣ ಪ್ರಮಾಣ (2019) (ಮೂಲ: ಮಿನಿಸ್ಟ್ರಿ ಆಫ್ ಹೆಲ್ತ್ ಆಂಡ್ ಫ್ಯಾಮಿಲಿ ವೆಲ್‌ಫೇರ್. 2019), ಒಟ್ಟು ಫಲೋತ್ಪತ್ತಿ ಪ್ರಮಾಣ (ಟಿಎಫ್‌ಆರ್) (ಮೂಲ: ಆರ್ಥಿಕ ಸಮೀಕ್ಷೆ 2020), ಬಹುಮುಖಿ ಬಡತನ ಪ್ರಮಾಣ (2019-2020)(ನೀತಿ ಆಯೋಗ 2021), ಮಾನವ ಅಭಿವೃದ್ಧಿ ಸೂಚ್ಯಂಕ (2022) (ಮೂಲ: ನೀತಿ ಆಯೋಗ), ವಯಸ್ಕ ಮಹಿಳೆಯರ ಸಾಕ್ಷರತಾ ಪ್ರಮಾಣ (2019-2020), ವಯಸ್ಕ ಮಹಿಳೆಯರಲ್ಲಿ 10 ವರ್ಷ ಶಾಲೆ ಕಲಿತವರ ಪ್ರಮಾಣ (2019-2020)(ಎನ್‌ಎಫ್‌ಎಚ್‌ಎಸ್ 5, 2019-20) ಮತ್ತು ತಲಾ ವರಮಾನ (ಮೂಲ: ಫೋರ್‌ಬೆಸ್ ಇಂಡಿಯಾ 2023) ಎಂಬ ಒಂಬತ್ತು ಸೂಚಿಗಳನ್ನು ಬಳಸಲಾಗಿದೆ. ಈ ಎಲ್ಲ ಒಂಬತ್ತು ಸೂಚಿಗಳನ್ನು ವಿವರವಾಗಿ ಪರಿಶೀಲಿಸಿದರೆ ಅವುಗಳಲ್ಲಿ ದಕ್ಷಿಣದ ರಾಜ್ಯಗಳು ಉತ್ತರದ ರಾಜ್ಯಗಳಿಗಿಂತ ಉತ್ತಮವಾಗಿರುವುದು ಕಂಡುಬರುತ್ತದೆ.

ಜೀವನಾಯುಷ್ಯದಲ್ಲಿ ದ.ಭಾ. ರಾಜ್ಯಗಳಲ್ಲಿ ಇದು 70 ವರ್ಷಗಳಿಗಿಂತ ಅಧಿಕವಾಗಿದ್ದರೆ ಉ.ಭಾ. ರಾಜ್ಯಗಳಲ್ಲಿ ಇದು 70 ವರ್ಷಗಳಿಗಿಂತ ಕಡಿಮೆಯಿದೆ. ಶಿಶು ಮರಣ ಪ್ರಮಾಣ ದ.ಭಾ.ದ ರಾಜ್ಯಗಳಲ್ಲಿ ಪ್ರತಿ ಸಾವಿರ ಜನನಗಳಿಗೆ 30ಕ್ಕಿಂತ ಕಡಿಮೆಯಿದ್ದರೆ ಉ.ಭಾ. ರಾಜ್ಯಗಳಲ್ಲಿ ಇದು 35ಕ್ಕಿಂತ ಅಧಿಕವಾಗಿದೆ. ತಾಯಂದಿರ ಮರಣ ಅನುಪಾತ ಪ್ರತಿ ಲಕ್ಷ ಜನನಗಳಿಗೆ ದ.ಭಾ. ದಲ್ಲಿ 65ಕ್ಕಿಂತ ಕಡಿಮೆಯಿದ್ದರೆ ಉ.ಭಾ. ರಾಜ್ಯಗಳಲ್ಲಿ ಇದು 100ಕ್ಕಿಂತ ಅಧಿಕವಾಗಿದೆ. ಒಟ್ಟು 15 ರಿಂದ 45 ವರ್ಷ ವಯೋಮಾನದ ಒಬ್ಬ ಮಹಿಳೆ ತನ್ನ ಸಂತಾನೊತ್ಪತ್ತಿ ಅವಧಿಯಲ್ಲಿ ಹಡೆಯುವ ಮಕ್ಕಳ ಸಂಖ್ಯೆ) ದ.ಭಾ. ರಾಜ್ಯಗಳಲ್ಲಿ ಇದು 1.5 ಕ್ಕಿಂತ ಕಡಿಮೆಯಿದ್ದರೆ (ಕೇರಳದಲ್ಲಿ ಇದು ಶೇ.1.4) ಉ.ಭಾ. ರಾಜ್ಯಗಳಲ್ಲಿ ಇದು ಶೇ.2.0 ಕ್ಕಿಂತ ಅಧಿಕವಾಗಿದೆ (ಬಿಹಾರದಲ್ಲಿ ಇದು ಶೇ.3.0). ಬಹುಮುಖಿ ಬಡತನದ ಪ್ರಮಾಣದಲ್ಲಿ ದ.ಭಾ. ರಾಜ್ಯಗಳಲ್ಲಿ ಇದು ಶೇ. 14ಕ್ಕಿಂತ ಕೆಳಮಟ್ಟದಲ್ಲಿದ್ದರೆ (ಕೇರಳ: ಶೇ.0.71), ಉ.ಭಾ. ರಾಜ್ಯಗಳಲ್ಲಿ ಇದು ಶೇ. 25 ಕ್ಕಿಂತ ಅಧಿಕವಾಗಿದೆ (ಬಿಹಾರ: ಶೇ. 51.91). ಮಾನವ ಅಭಿವೃದ್ಧಿ ಸೂಚ್ಯಂಕ ದ.ಭಾ. ರಾಜ್ಯಗಳಲ್ಲಿ ಇದು ದೇಶದ ಸರಾಸರಿ (0.637)ಗಿಂತ ಅಧಿಕವಾಗಿದ್ದರೆ ಉ.ಭಾ. ರಾಜ್ಯಗಳಲ್ಲಿ ಇದು ಕೆಳಮಟ್ಟದಲ್ಲಿದೆ. ವಯಸ್ಕ (15-49 ವರ್ಷ ವಯೋಮಾನ) ಒಟ್ಟು ಮಹಿಳೆಯರಲ್ಲಿ 10ಕ್ಕಿಂತ ಹೆಚ್ಚು ವರ್ಷಗಳು ಶಾಲೆ ಕಲಿತ ಮಹಿಳೆಯರ ಪ್ರಮಾಣ 2019-20ರಲ್ಲಿ ದಕ್ಷಿಣ ಭಾರತದಲ್ಲಿ ಶೇ. 60ಕ್ಕಿಂತ ಅಧಿಕವಾಗಿದ್ದರೆ ಉ.ಭಾ. ರಾಜ್ಯಗಳಲ್ಲಿ ಇದು ಶೇ. 50 ಕ್ಕಿಂತ ಕೆಳಮಟ್ಟದಲ್ಲಿದೆ. ಲಿಂಗ ಸಮಾನತೆಯ ಮಹತ್ವದ ಸೂಚಿಯಾದ ಮಹಿಳೆಯರ ಸಾಕ್ಷರತೆ ಪ್ರಮಾಣ. ಇದು ದ.ಭಾ. ರಾಜ್ಯಗಳಲ್ಲಿ 2019-20ರಲ್ಲಿ ಶೇ. 80ಕ್ಕಿಂತ ಅಧಿಕವಾಗಿದ್ದರೆ(ಕೇರಳ ಶೇ.99) ಉ.ಭಾ. ರಾಜ್ಯಗಳಲ್ಲಿ ಇದು ಶೇ. 80ಕ್ಕಿಂತ ಕೆಳಮಟ್ಟದಲ್ಲಿದೆ (ಬಿಹಾರ: 74.9).. ಕೊನೆಯ ಒಂಬತ್ತನೆಯ ಒಟ್ಟು ತಲಾ ಆಂತರಿಕ ಉತ್ಪನ್ನ ದ.ಭಾ. ರಾಜ್ಯಗಳಲ್ಲಿ ಇದು 2021-22ರಲ್ಲಿ ರೂ. 2.25 ಲಕ್ಷಕ್ಕಿಂತ ಅಧಿಕವಾಗಿದ್ದರೆ (ಕರ್ನಾಟಕ ರೂ. 3.01 ಲಕ್ಷ, ತಮಿಳುನಾಡು ರೂ. 2.73 ಲಕ್ಷ). ಉ.ಭಾ. ರಾಜ್ಯಗಳಲ್ಲಿ ಇದು ರೂ. 1.5 ಲಕ್ಷಕ್ಕಿಂತ ಕಡಿಮೆಯಿದೆ (ಉ. ಪ್ರ. ರೂ. 83000, ಬಿಹಾರ ರೂ.54000). ದ.ಭಾ. ರಾಜ್ಯಗಳು 2020-21ರಲ್ಲಿ ದೇಶದ ಜಿಡಿಪಿಗೆ ಶೇ. 33.13 ಕಾಣಿಕೆ ನೀಡಿದ್ದರೆ ಉ.ಭಾ. ಆರು ರಾಜ್ಯಗಳ ಪಾಲು ಕೇವಲ ಶೇ. 23.27. ದ.ಭಾ. ರಾಜ್ಯಗಳ ಬಗ್ಗೆ ಒಕ್ಕೂಟವು ಹಣಕಾಸು ವರ್ಗಾವಣೆ ಮತ್ತು ರಾಜಕೀಯ ಅಧಿಕಾರಗಳಿಗೆ ಸಂಬಂಧಿಸಿದಂತೆ ಮಲತಾಯಿ ಧೋರಣೆ ತಳೆದರೆ ಮತ್ತು ತಾರತಮ್ಯವೆಣಿಸಿದರೆ ಅದು ಭಾರತದ ಆರ್ಥಿಕ ಬೆಳವಣಿಗೆಗೆ ಮಾರಕವಾಗುತ್ತದೆ ಎಂಬುದನ್ನು ನಾವು ಮರೆಯಬಾರದು.

ಒಕ್ಕೂಟ ತತ್ವದ ಉಲ್ಲಂಘನೆ

ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತಗಳ ರಚನೆ, ರಾಜ್ಯಗಳು ಮತ್ತು ಒಕ್ಕೂಟಗಳ ನಡುವೆ ಕರ್ತವ್ಯಗಳ ಸಂವಿಧಾನಾತ್ಮಕ ಹಂಚಿಕೆ(ರಾಜ್ಯಪಟ್ಟಿ, ಒಕ್ಕೂಟ ಪಟ್ಟಿ, ಸಂಯುಕ್ತ ಪಟ್ಟಿ), ಹಿಂದಿಯ ಜೊತೆಯಲ್ಲಿ ಇಂಗ್ಲೀಷನ್ನು ಅಧಿಕೃತ ಭಾಷೆಯನ್ನಾಗಿ 1963ರಲ್ಲಿ ಕಾಯಿದೆ ಮಾಡಿದ್ದು ಮುಂತಾದ ಕ್ರಮಗಳ ಮೂಲಕ ಒಕ್ಕೂಟ ತತ್ವವನ್ನು ಬಲಪಡಿಸಲಾಗಿತ್ತು. ಆದರೆ ಇಂದು ನೀಟ್ ಪರೀಕ್ಷೆ(ರಾಜ್ಯ ಪಠ್ಯಕ್ರಮದಲ್ಲಿ ಮತ್ತು ರಾಜ್ಯ ಭಾಷೆಯಲ್ಲಿ ಕಲಿತ ಮಕ್ಕಳಿಗೆ ಅನ್ಯಾಯ), ಜಿಎಸ್‌ಟಿ(ರಾಜ್ಯಗಳ ಹಣಕಾಸು ಸ್ವಾಯತ್ತತೆಯ ಹರಣ), ಈಗ ರದ್ದಾಗಿರುವ ಮೂರು ಕೃಷಿ ಕಾಯಿದೆಗಳು, ಹಣಕಾಸು ಆಯೋಗದಿಂದ ಉತ್ತರಕ್ಕೆ ತುಪ್ಪ, ದಕ್ಷಿಣಕ್ಕೆ ಸುಣ್ಣ(ಉತ್ತರಕ್ಕೆ ಓಲೈಕೆ-ದಕ್ಷಿಣಕ್ಕೆ ಶಿಕ್ಷೆ), ಡಿಲಿಮಿಟೇಶನ್ನಿನ ತೂಗುಕತ್ತಿ, 'ಒಂದು ದೇಶ-ಒಂದು ಚುನಾವಣೆ' ಎಂಬ ಬೆದರುಗೊಂಬೆ ಮುಂತಾದ ಕ್ರಮಗಳು ನಮ್ಮ ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಯನ್ನು ಛಿದ್ರಗೊಳಿಸುತ್ತಿವೆ. ರಾಷ್ಟ್ರೀಯ ಸರ್ಕಾರವು ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುತ್ತಿರುವುದು ನಿಚ್ಚಳವಾಗಿ ಕಂಡುಬರುತ್ತಿದೆ. ಇವೆಲ್ಲವೂ ಆರೋಗ್ಯಕರ ಒಕ್ಕೂಟ ತತ್ವಕ್ಕೆ ದಕ್ಕೆಯನ್ನುಂಟು ಮಾಡುತ್ತವೆ.

> ನಾವು ಬಯಸಲಿ-ಬಯಸದಿರಲಿ, ದಕ್ಷಿಣ ಭಾರತ ಮತ್ತು ಉತ್ತರ ಭಾರತ ನಡುವಿನ ಕಂದರವು-ಅಂತರವು ಬೇರೆ ಬೇರೆ ಆಯಾಮಗಳಲ್ಲಿ ಬೆಳೆಯುತ್ತಿದೆ. ಬೆಳವಣಿಗೆಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ದಕ್ಷಿಣದ ರಾಜ್ಯಗಳು ಉತ್ತರದ ರಾಜ್ಯಗಳಿಗಿಂತ ಉತ್ತಮ ಸ್ಥಿತಿಯಲ್ಲಿರುವುದು ಅನೇಕ ವರದಿ-ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಉತ್ತರ ಭಾರತದ 6 ಹಿಂದಿ ರಾಜ್ಯಗಳ ಮತ್ತು ದಕ್ಷಿಣ ಭಾರತದ ಆರು ರಾಜ್ಯಗಳ ಸಾಮಾಜಿಕ, ಆರ್ಥಿಕ ಮತ್ತು ಮಾನವ ಅಭಿವೃದ್ಧಿಯ ಒಂಬತ್ತು ಸೂಚಿಗಳನ್ನು ಹೋಲಿಸಿ ವಿವರವಾಗಿ ಪರಿಶೀಲಿಸಿದರೆ ನಮಗೆ ಇವೆರಡರ ನಡುವಿನ ಅಂತರ-ಕಂದರದ ಅಂದಾಜು ದೊರೆಯುತ್ತದೆ. ಈ ಭಿನ್ನತೆಗಳು-ಬಿರುಕುಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಿಯಂತ್ರಣದಲ್ಲಿದ್ದವು. ನಿಯಂತ್ರಣದಲ್ಲಿದ್ದವು ಎನ್ನುವುದಕ್ಕಿಂತ ಸದರಿ ಬಿರುಕಿಗೆ ಎಣ್ಣೆ ಸುರಿಯುವ ಕೆಲಸವನ್ನು ಅಂದು ಸರ್ಕಾರಗಳು ಮಾಡುತ್ತಿರಲಿಲ್ಲ. ಆದರೆ ಕಳೆದ ಒಂದು ದಶಕದಿಂದ ಒಕ್ಕೂಟ ಸರ್ಕಾರದ ಏಕೀಕೃತ-ಕೇಂದ್ರೀಕರಣ ನೀತಿಗಳಿಂದಾಗಿ ಇವೆರಡರ ನಡುವಿನ ಕಂದಕವು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಈ ಕಂದರ-ಬಿರುಕನ್ನು ಗುರುತಿಸಿ ಪ್ರಜ್ಞಾಪೂರ್ವಕವಾಗಿ ಅದನ್ನು ತಡೆಯುವ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳದಿದ್ದರೆ ಇವೆರಡರ ನಡುವಿನ ವಿಷಮತೆಯು ಸ್ಫೋಟಗೊಳ್ಳುವ ಸಾಧ್ಯತೆಯಿದೆ.

ಪ್ರಾದೇಶಿಕ ಭಿನ್ನತೆಗೆ ಅಗೌರವ

ಅನೇಕ ಐತಿಹಾಸಿಕ, ಭೌಗೋಳಿಕ, ಭಾಷೆ, ಆಹಾರ, ಉಡುಪು, ರೂಢಿ-ಆಚರಣೆಗಳು, ಸಾಮಾಜಿಕ ಸುಧಾರಣೆ ಮುಂತಾದವುಗಳಲ್ಲಿ ದಕ್ಷಿಣವು ತನ್ನದೇ ವಿಶಿಷ್ಟತೆಯನ್ನು ಪಡೆದಿದೆ. ಬಸವಣ್ಣ(ಕರ್ನಾಟಕ), ನಾರಾಯಣಗುರು(ಕೇರಳ), ಪೆರಿಯಾರ್(ತಮಿಳುನಾಡು) ಮುಂತಾದವರ ಸಾಮಾಜಿಕ ನ್ಯಾಯದ ಆಂದೋಳನಗಳಿಂದಾಗಿ ದ.ಭಾ. ಈ ವಿಷಯದಲ್ಲಿ ಮುಂಚೂಣಿಯಲ್ಲಿದೆ. ಇಂಡೋ-ಆರ್ಯನ್ ಭಾಷಾ ಕುಟುಂಬದ ಜೊತೆಯಲ್ಲಿ ಯಾವುದೇ ಸಮಾನಾಂಶಗಳನ್ನು ಹೊಂದದ ಧ್ರಾವಿಡ ಭಾಷೆಗಳನ್ನು ದಕ್ಷಿಣ ಬದುಕುತ್ತಿದೆ. ಈ ಭಾಷೆಗಳಿಗೆ ಸಾವಿರ ವರ್ಷಗಳನ್ನು ಮೀರಿದ ಚರಿತ್ರೆಯಿದೆ. ಆರ್ಥಿಕ ಸ್ಥಿತಿಗತಿಯಲ್ಲಿ ಉತ್ತಮವಾಗಿರುವುದರಿಂದ ಉತ್ತರದಿಂದ ಬಂದ ಲಕ್ಷಾಂತರ ವಲಸಿಗರಿಗೆ ದಕ್ಷಿಣವು ಬದುಕನ್ನು ನೀಡುತ್ತಿದೆ. ದಕ್ಷಿಣವು ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಹಿತ್ಯಿಕವಾಗಿ ಸಮೃದ್ಧವಾಗಿದೆ. ಆದರೆ ಇಂದಿನ ಒಕ್ಕೂಟ ಸರ್ಕಾರವು ದೇಶಕ್ಕೆ ಮಾದರಿಯಾಗಬಹುದಾದ ಕೇರಳ-ತಮಿಳುನಾಡು-ಕರ್ನಾಟಕ ಅಭಿವೃದ್ಧಿ ಮಾದರಿಗಳ ಬಗ್ಗೆ ಮಾತಾಡುವುದಕ್ಕೆ ಬದಲಾಗಿ ಗುಜರಾತ್-ಉತ್ತರ ಪ್ರದೇಶ ಮಾದರಿಯನ್ನು ಎಲ್ಲ ರಾಜ್ಯಗಳು ಅಳವಡಿಸಿಕೊಳ್ಳಬೇಕು ಎಂದು ಶಿಫಾರಸ್ಸು ಮಾಡುತ್ತಿದೆ. ಈ ರಾಜ್ಯಗಳ ಆರ್ಥಿಕ-ಸಾಮಾಜಿಕ ಸಿದ್ಧಿ-ಸಾಧನೆಗಳ ಬಗ್ಗೆ ಒಮ್ಮೆಯೂ ಒಕ್ಕೂಟ ಸರ್ಕಾರ ಮೆಚ್ಚುಗೆಯ ಮಾತಾಡಿಲ್ಲ. ಎಲ್ಲಕ್ಕಿಂತ

ಪುಟ 10 ಕ್ಕೆ

ಸಿಐಟಿಯು ಶ್ರದ್ಧಾಂಜಲಿ–"ಸಂಸತ್ತಿನ ಒಳಗೂ ಮತ್ತು ಹೊರಗೂ ಶ್ರಮಜೀವಿಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸಿದ ಉನ್ನತ ನಾಯಕರು"

ಕಾಮ್ರೇಡ್ ಬಾಸುದೇಬ್ ಆಚಾರ್ಯ ಅವರ ನಿಧನಕ್ಕೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ತೀವ್ರ ದುಃಖ ವ್ಯಕ್ತಪಡಿಸಿದೆ. ಅವರು ದಶಕಗಳ ಕಾಲ ಸಿಐಟಿಯು ನ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದರು ಮತ್ತು ಕಳೆದ ಆರು ವರ್ಷಗಳಿಂದ ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ಮಂಡಳಿಯ ಖಾಯಂ ಆಹ್ವಾನಿತರಾಗಿದ್ದರು.

ಅವರು ಸಕ್ರಿಯ ರಾಜಕೀಯ ಜೀವನದ ಆರಂಭದಿಂದಲೂ ಕಾರ್ಮಿಕ ವರ್ಗದ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಅವರು ಸಂಘಟಿತ ಮತ್ತು ಅಸಂಘಟಿತ ಎರಡೂ ವಲಯಗಳ ಕಾರ್ಮಿಕರ ಸಂಘಟನೆಯಲ್ಲಿ ಮುಂಚೂಣಿ ಪಾತ್ರವನ್ನು ನಿರ್ವಹಿಸಿದರು. ನಿಧನದ ವರೆಗೂ ಅವರು ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿದ್ದರು ಮತ್ತು ಹಲವಾರು ಮುಷ್ಕರ ಕಾರ್ಯಾಚರಣೆಗಳು ಸೇರಿದಂತೆ ಕಲ್ಲಿದ್ದಲು ಕಾರ್ಮಿಕರ ಅನೇಕ ಹೋರಾಟಗಳನ್ನು ಮುನ್ನಡೆಸಿದರು. ಕಲ್ಲಿದ್ದಲಿನ ಜೊತೆಗೆ, ಅವರು ರೈಲ್ವೆಯ ವಿವಿಧ ವಿಭಾಗಗಳಲ್ಲಿ, ಅಂದರೆ, ಲೋಕೊ ರನ್ನಿಂಗ್, ಮತ್ತು ರೈಲ್ವೆಯ ವಿವಿಧ ವೃತಿಗಳು/ಕೆಲಸಗಳ ಗುತ್ತಿಗೆ ಕಾರ್ಮಿಕರ ಚಳುವಳಿಗಳನ್ನು ಸಂಯೋಜಿಸುವಲ್ಲಿ ಸಕ್ರಿಯರಾಗಿದ್ದರು, ಮತ್ತು ತಾತ್ಕಾಲಿಕ/ಸಾಂದರ್ಭಿಕ/ಗುತ್ತಿಗೆ ಕಾರ್ಮಿಕರ ದೊಡ್ಡ ವಿಭಾಗಗಳನ್ನು ರೈಲ್ವೆ ನೌಕರರಾಗಿ ಕಾಯಂಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಅವರು ಎಫ್‌ಸಿಐ ಕಾರ್ಮಿಕರ ಆಂದೋಲನ ಮತ್ತು ಇತರ ಅನೇಕ ಚಟುವಟಿಕೆಗಳಲ್ಲಿಯೂ ಭಾಗಿಯಾಗಿದ್ದರು. ಅಖಿಲ ಭಾರತ ಎಲ್‌ಐಸಿ ಏಜೆಂಟರ ಒಕ್ಕೂಟದ ಹಿಂದಿನ ಸಮ್ಮೇಳನದವರೆಗೂ ಅದರ ಅಧ್ಯಕ್ಷರಾಗಿದ್ದರು.

1980 ರಿಂದ 2014 ರವರೆಗೆ ಪಶ್ಚಿಮ ಬಂಗಾಳದಿಂದ ಲೋಕಸಭೆಯ ಸದಸ್ಯರಾಗಿ ಒಂಬತ್ತು ಬಾರಿ ಚುನಾಯಿತರಾದ ಕಾಂ. ಬಾಸುದೇಬ್ ಆಚಾರ್ಯ ತಮ್ಮ ಸುದೀರ್ಘ ಕಾರ್ಯಕಾಲದಲ್ಲಿ ಅನುಭವಿ ಸಂಸದರಾಗಿ ಸ್ಮರಣೀಯ ಪಾತ್ರವನ್ನು ವಹಿಸಿದ್ದಾರೆ, ಸಂಸತ್ತಿನ ಒಳಗೂ ಮತ್ತು ಹೊರಗೂ ಶ್ರಮಜೀವಿಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸಿದ್ದಾರೆ. ರೈಲ್ವೆಯ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಅವರು ಕೇಂದ್ರದಲ್ಲಿ ಅಧಿಕಾರ ನಡೆಸಿದ ಸರ್ಕಾರಗಳು ರೈಲ್ವೆಯಲ್ಲಿ ತರಬಯಸಿದ ನವ ಉದಾರವಾದಿ ಖಾಸಗೀಕರಣ ಆಧಾರಿತ ಕ್ರಮಗಳನ್ನು ವಿರೋಧಿಸುವಲ್ಲಿ ಮತ್ತು ಅನೇಕ ಸಂದರ್ಭಗಳಲ್ಲಿ ನಿಲ್ಲಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ಶ್ರಮಜೀವಿ ಜನಗಳಿಗೆ ಅವರ ಸೇವೆಯ ಅತ್ಯಂತ ಸ್ಮರಣೀಯ ಅಂಶವೆಂದರೆ, ಯಾವುದೇ ತೊಂದರೆಗಳು/ಸಮಸ್ಯೆಗಳಿಗಾಗಿ ಅವರನ್ನು ಸಂಪರ್ಕಿಸುವ ಯಾವುದೇ ಕಾರ್ಮಿಕರಿಗೆ, ಅವರು ಯಾವುದೇ ರಾಜ್ಯದವರಾಗಲಿ, ಅಥವ ಯಾವುದೇ ಕಾರ್ಮಿಕ ಸಂಘಟನೆಗೆ ಸೇರಿರಲಿ, ಅವರ ಬಾಗಿಲು ಸದಾ ತೆರೆದಿರುತ್ತಿತ್ತು, ಅವರು ಎಲ್ಲ ಸಂದರ್ಭಗಳಲ್ಲೂ ಮಧ್ಯಪ್ರವೇಶಿಸಿ ಸಂಬಂಧಪಟ್ಟ ಕಾರ್ಮಿಕರಿಗೆ ಸ್ಪಂದಿಸುತ್ತಿದ್ದರು ಎಂದು ಸಿಐಟಿಯು ನೆನಪಿಸಿಕೊಂಡಿದೆ.

ಕಾಮ್ರೇಡ್ ಬಾಸುದೇಬ್ ಆಚಾರ್ಯ ಅವರು ತಮ್ಮ ಸಕ್ರಿಯ ರಾಜಕೀಯ ಜೀವನದುದ್ದಕ್ಕೂ ದುಡಿಯುವ ಜನರ ಚಳವಳಿ ಹೇಗೆ ಪರಿಣಾಮಕಾರಿಯಾಗಿ ಮುನ್ನಡೆಯಬೇಕು, ಉತ್ತೇಜನ ನೀಡಬೇಕು ಮತ್ತು ಅದನ್ನು ಸಂಸತ್ತಿನ ಹೊರಗೆ ಐಕ್ಯ ಹೋರಾಟಗಳ ಮೂಲಕ ಹಾಗೂ ಸಂಸದೀಯ ವೇದಿಕೆಗಳಲ್ಲಿ ಪರಿಣಾಮಕಾರಿ ಮಧ್ಯಪ್ರವೇಶಗಳ ಮೂಲಕ ಹೇಗೆ ಸಂಯೋಜಿಸಬೇಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ದುಡಿಯುವ ಜನರ ಎಲ್ಲಾ ಸಮಸ್ಯೆಗಳು ಮತ್ತು ಹೋರಾಟಗಳ ಸಂದರ್ಭಗಳಲ್ಲಿ ಸಂಸತ್ತಿನೊಳಗೆ ಅವರ ನೇರ ಮಧ್ಯಪ್ರವೇಶಗಳು ಎಂದೆಂದಿಗೂ ನೆನಪಿನಲ್ಲಿ ಉಳಿಯುತ್ತವೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ತಮ್ಮ ಶ್ರದ್ಧಾಂಜಲಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕಾಯಿಲೆಗಳಿಂದಾಗಿ ಆರೋಗ್ಯವು ಕೆಡುತ್ತಿದ್ದರೂ ಲೆಕ್ಕಿಸದೆ ಅವರು, ಕಾರ್ಮಿಕ ವರ್ಗದ ಪ್ರಮುಖ ಹೋರಾಟಗಳಲ್ಲಿ, ರಾಷ್ಟ್ರೀಯ ಮಟ್ಟದಲ್ಲಿಯೂ ಮತ್ತು ಹಲವಾರು ವಲಯಗಳ ಮಟ್ಟದಲ್ಲಿಯೂ ತಮ್ಮ ದೈಹಿಕ ಉಪಸ್ಥಿತಿಯ ಮೂಲಕ ಮಧ್ಯಪ್ರವೇಶಿಸುತ್ತಿದ್ದರು. ಅವರು ಭಾಗವಹಿಸದಿದ್ದ ಸಿಐಟಿಯುನ ಸಂಘಟನಾ ಸಭೆಗಳು ಬಹಳ ವಿರಳ. ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿ, ಕಾಂ. ಆಚಾರ್ಯ ಅವರು ದೇಶಾದ್ಯಂತ ವಿವಿಧ ಕಲ್ಲಿದ್ದಲು ಗಣಿಗಳಲ್ಲಿ ಓಡಾಡಿದ್ದಾರೆ . ನಿಧನದ ಒಂದು ತಿಂಗಳ ಮುಂಚೆಯಷ್ಟೇ, ಅವರು ಲೋಕೋ ಚಾಲಕ ಸಿಬ್ಬಂದಿಯ ಧರಣಿಯಲ್ಲಿ ಮತ್ತು ಪುರುಲಿಯಾದ ಆದ್ರ ಮತ್ತು ಪಕ್ಕದ ಪ್ರದೇಶದಲ್ಲಿ ಎಫ್‌ಸಿಐ ಗೋಡೌನ್ ಕಾರ್ಮಿಕರ ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು. ಕೊನೆಯ ಉಸಿರು ಇರುವವರೆಗೂ, ಆಸ್ಪತ್ರೆಯಲ್ಲಿರಬೇಕಾದ ಅವಧಿಯನ್ನು ಹೊರತುಪಡಿಸಿ, ಕಾಂ. ಬಸುದೇವ್ ಆಚಾರ್ಯ ದುಡಿಯುವ ಜನರ ಹೋರಾಟದ ಮುಂಚೂಣಿಯಲ್ಲಿ ಸಕ್ರಿಯವಾಗಿರುವಲ್ಲಿ ಎಂದೂ ವಿಫಲರಾಗಲಿಲ್ಲ ಎಂದು ತಪನ್ ಸೆನ್ ಹೇಳಿದ್ದಾರೆ.

ಅವರ ನಿಧನದೊಂದಿಗೆ, ಕಾರ್ಮಿಕ ವರ್ಗದ ಚಳವಳಿಯು ದುಡಿಯುವ ವರ್ಗದ ಸಿದ್ಧಾಂತಕ್ಕೆ ಮತ್ತು ಶೋಷಣೆಯ ವ್ಯವಸ್ಥೆಯನ್ನು ಬದಲಾಯಿಸುವ ಹೋರಾಟದಲ್ಲಿ ದುಡಿಯುವ ವರ್ಗದ ನಿರ್ಣಾಯಕ ಪಾತ್ರದ ಬಗ್ಗೆ ದೃಢವಾದ ಬದ್ಧತೆ ಹೊಂದಿದ್ದ ಒಬ್ಬ ಘನ ನೇತಾರನನ್ನು ಕಳೆದುಕೊಂಡಿದೆ, ಇದರಿಂದ ಉಂಟಾಗಿರುವ ತೆರವನ್ನು ತುಂಬುವುದು ಬಹಳ ಕಷ್ಟ ಎಂದಿರುವ ಸಿಐಟಿಯು "ಅಗಲಿದ ನಾಯಕನ ಕುಟುಂಬದ ಸದಸ್ಯರಿಗೆ ಸಿಐಟಿಯು ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತದೆ, ಜನತೆ ಮತ್ತು ಶ್ರಮಿಕ ವರ್ಗದ ಹಿತಸಾಧನೆಗೆ ಕಾಮ್ರೇಡ್ ಬಾಸುದೇಬ್ ಆಚಾರ್ಯ ಅವರ ಮಹಾನ್ ಕೊಡುಗೆಗೆ ಶ್ರದ್ಧಾಪೂರ್ಣ ಗೌರವ ನಮನವನ್ನು ಸಲ್ಲಿಸುತ್ತದೆ" ಎಂದು ಹೇಳಿದೆ.

ಸತತವಾಗಿ ರೈತರ ಪ್ರಶ್ನೆಗಳನ್ನು ಕೈಗೆತ್ತಿಕೊಂಡ ಸಂಸದೀಯ ಪಟು–ಎಐಕೆಎಸ್ ಶ್ರದ್ಧಾಂಜಲಿ

ಕಾಂ. ಬಸುದೇಬ್ ಆಚಾರ್ಯ ಎಲ್ಲರೊಂದಿಗೂ ಆತ್ಮೀಯವಾಗಿ ಬೆರೆಯುತ್ತಿದ್ದ ಸರಳ ನಡೆಯ ನಾಯಕ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ಅವರ ವ್ಯಕ್ತಿತ್ವವನ್ನು ವರ್ಣಿಸಿದೆ. ತಮ್ಮ ಹಿರಿ ವಯಸ್ಸಿನಲ್ಲೂ ದಣಿವಿಲ್ಲದೆ ಕೆಲಸ ಮಾಡುತ್ತಿದ್ದ ಅವರ ಬಳಿ ಸಮಾಜದ ಎಲ್ಲಾ ವರ್ಗದ ಜನಗಳೂ ತಮ್ಮ ಸಮಸ್ಯೆಗಳನ್ನು ಒಯ್ಯುತ್ತಿದ್ದರು. ಬಹು ಗೌರವಾನ್ವಿತ ಸಂಸದೀಯ ಪಟುವಾಗಿದ್ದ ಅವರು ಕಾರ್ಮಿಕರು ಮತ್ತು ರೈತರ ಹಕ್ಕುಗಳಿಗೆ ಅಚಲ ಬದ್ಧತೆ ಹೊಂದಿದ್ದರು ಎಂದು ಎಐಕೆಎಸ್ ಹೇಳಿದೆ.

9 ಬಾರಿ ಲೋಕಸಭೆಗೆ ಚುನಾಯಿತರಾದ ಅವರು ಸಂಸದೀಯ ಪ್ರಜಾಪ್ರಭುತ್ವದೊಂದಿಗೆ ತಮ್ಮ ಮೂರು ದಶಕಗಳ ಸುದೀರ್ಘ ನಡೆಯಲ್ಲಿ ಕಾರ್ಮಿಕ ವರ್ಗ ಮತ್ತು ರೈತರ ಪರವಾಗಿ ದೃಢವಾಗಿ ನಿಂತರು. ಅತ್ಯುತ್ತಮ ಸಂಸದೀಯ ಪಟುವಾಗಿದ್ದ ಅವರು ತಮ್ಮ ಕಾರ್ಯಕಾಲದಲ್ಲಿ ಸಾರ್ವಜನಿಕ ಉದ್ಯಮಗಳ ಸಮಿತಿ, ಸರ್ಕಾರಿ ಭರವಸೆಗಳ ಸಮಿತಿ, ರೈಲ್ವೆ ಸಮಿತಿ, ಅರ್ಜಿಗಳ ಸಮಿತಿ ಮತ್ತು ಕೃಷಿ ಸಮಿತಿಯಂತಹ ಅನೇಕ ಪ್ರಮುಖ ಸಮಿತಿಗಳ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು.

ಅವರು ಸಂಸತ್ತಿನ ಒಳಗೆ ಮತ್ತು ಹೊರಗೆ ರೈತರ ಪ್ರಶ್ನೆಗಳನ್ನು ಸತತವಾಗಿ ತೆಗೆದುಕೊಂಡರು, ಬೆಳೆಗಳಿಗೆ ಲಾಭದಾಯಕ ಬೆಲೆಗಳ ಕುರಿತು ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಜಾರಿಗೊಳಿಸುವ ಅಗತ್ಯವನ್ನು ಒತ್ತಿ ಹೇಳಿದರು. ರೈತರ ಪರವಾದ ಭೂಸ್ವಾಧೀನ ಪುನರ್ವಸತಿ ಮತ್ತು ಮರುಇತ್ಯರ್ಥ (ಎಲ್‌ಎಆರ್‌ಆರ್ 2013) ಶಾಸನವನ್ನು ರೂಪಿಸುವಲ್ಲಿ ಅವರ ಪಾತ್ರವು ಎಲ್ಲಾ ರೈತರ ಗುಂಪುಗಳಲ್ಲಿ ಅವರಿಗೆ ವ್ಯಾಪಕ ಗೌರವವನ್ನು ಗಳಿಸಿ ಕೊಟ್ಟಿತು. ಇದರಲ್ಲಿ ಅವರು ರೈತರು ಮತ್ತು ಭೂಮಿಯನ್ನು ಅವಲಂಬಿಸಿರುವವರ ಹಕ್ಕುಗಳ ಪರವಾಗಿ ನಿಂತರು, ಅಧಿಕೃತ ಮಸೂದೆಗೆ ಹಲವಾರು ತಿದ್ದುಪಡಿಗಳನ್ನು ತಂದರು. ಯುಪಿಎ–2 ಸರ್ಕಾರವು ಸಾಕಷ್ಟು ಚರ್ಚೆ ಮತ್ತು ಸಮಾಲೋಚನೆಗಳಿಲ್ಲದೆ ಮಸೂದೆಯನ್ನು ತರಾತುರಿಯಲ್ಲಿ ಮಂಡಿಸಲು ಪ್ರಯತ್ನಿಸುತ್ತಿದ್ದರೂ, ಅವರ ಸಮಯೋಚಿತ ಮಧ್ಯಪ್ರವೇಶದಿಂದಾಗಿ ಅಂದಿನ ಲೋಕಸಭಾಧ್ಯಕ್ಷರು ಸ್ಥಾಪಿತ ಸಂಸದೀಯ ಕಾರ್ಯವಿಧಾನವನ್ನು ಅನುಸರಿಸಲು ಕರೆ ನೀಡುವಂತಾಯಿತು. ಸರ್ಕಾರವು ಸಮಾಲೋಚನೆಗಳನ್ನು ನಡೆಸುವ ಒತ್ತಾಯಕ್ಕೆ ಒಳಪಟ್ಟಿತು. ಕೃಷಿ ಕಾರ್ಮಿಕರ ಹಕ್ಕುಗಳ ಪ್ರಶ್ನೆ, ಮನರೇಗ ಮತ್ತು ಅರಣ್ಯ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಅವರು ಬಲವಾಗಿ ದನಿಯೆತ್ತಿದರು ಎಂದು ಎಐಕೆಎಸ್ ನೆನಪಿಸಿಕೊಂಡಿದೆ.

ರೇಷ್ಮೆ ರೈತರು, ರೀಲರ್‌ಗಳು ಮತ್ತು ಕಾರ್ಮಿಕರನ್ನು ಸಂಘಟಿಸುವಲ್ಲಿ ಅವರು ಪಥಪ್ರದರ್ಶಕ ಪಾತ್ರವನ್ನು ವಹಿಸಿದರು ಮತ್ತು ಅವರ ಸಮಸ್ಯೆಗಳನ್ನು ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯೊಂದಿಗೆ ಎತ್ತಿಕೊಂಡರು. ಕಬ್ಬು ರೈತರ ಸಮಸ್ಯೆಗಳು ಮತ್ತು ಅವರ ಹೆಚ್ಚುತ್ತಿರುವ ಬಾಕಿಗಳ ಕುರಿತು ಅವರು ಅನೇಕ ಪ್ರತಿಭಟನೆಗಳನ್ನು ಉದ್ದೇಶಿಸಿ ಮಾತನಾಡಿದರು. ಸಂಸತ್ತಿನ ಕೃಷಿಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ, ಅವರು ಕೃಷಿಯ ಕಾರ್ಪೊರೇಟೀಕರಣದ ವಿರುದ್ಧ, ವಿಸ್ತರಣಾ ಸೇವೆಗಳನ್ನು ಕಿತ್ತುಹಾಕುವುದು, ಸಾರ್ವಜನಿಕ ದಾಸ್ತಾನು ಮತ್ತು ಭಾರತೀಯ ಆಹಾರ ನಿಗಮವನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳ ವಿರುದ್ಧ ಧ್ವನಿ ಎತ್ತಿದರು. ಅವರ ಅಧಿಕಾರಾವಧಿಯಲ್ಲಿ ಮಂಡಿಸಲಾದ ಜಿಎಂ ಬೆಳೆಗಳ ವರದಿಯು ಭಾರತದಲ್ಲಿ ನಿಯಂತ್ರಣ ವ್ಯವಸ್ಥೆಯು ಅಸಮರ್ಪಕವಾಗಿದೆ, ಹೆಚ್ಚು ದೃಢವಾಗಿರಬೇಕು, ಸಾಕಷ್ಟು ಪರಿಶೀಲನೆ ಮತ್ತು ಏಕಸ್ವಾಮ್ಯದ ಮೇಲೆ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಜೈವಿಕ ಸುರಕ್ಷತೆ, ಜೈವಿಕ ವೈವಿಧ್ಯತೆ, ಆಹಾರ ಸಾರ್ವಭೌಮತ್ವ ಮತ್ತು ರೈತರ ಜೀವನೋಪಾಯದಂತಹ ಕಾಳಜಿಗಳನ್ನು ನಿರ್ಲಕ್ಷಿಸಬಾರದು ಎಂದು ಒತ್ತಿಹೇಳಿತು. .

ಅವರು ಪಶ್ಚಿಮ ಬಂಗಾಳದ ಪ್ರಜಾಪ್ರಭುತ್ವ ವಿರೋಧಿ, ಭ್ರಷ್ಟ ಟಿಎಂಸಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟವನ್ನು ಮುಂದುವರೆಸಿದರು. 2018 ರ ಪಂಚಾಯತ್ ಚುನಾವಣೆಯ ಸಮಯದಲ್ಲಿ ಅವರು ನಾಮಪತ್ರಗಳನ್ನು ಸಲ್ಲಿಸಲು ಅಭ್ಯರ್ಥಿಗಳ ಮೆರವಣಿಗೆಯನ್ನು ಮುನ್ನಡೆಸುತ್ತಿದ್ದಾಗ ಟಿಎಂಸಿ ಗೂಂಡಾಗಳಿಂದ ಕ್ರೂರ ಹಲ್ಲೆಗೆ ಒಳಗಾದರು. ಆದರೆ ದೈಹಿಕ ದಾಳಿ ಮತ್ತು ಬೆದರಿಕೆಗಳಿಗೆ ಮಣಿಯದೆ ಅವರು ತಮ್ಮ ಕೆಲಸವನ್ನು ದಣಿವರಿಯದೆ ನಡೆಸಿದರು ಎಂದಿರುವ ಎಐಕೆಎಸ್ ಅವರ ಪುತ್ರ ಮತ್ತು ಪುತ್ರಿಯರಿಗೆ, ಕುಟುಂಬ ಸದಸ್ಯರಿಗೆ ಮತ್ತು ಎಲ್ಲಾ ಒಡನಾಡಿಗಳಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತ, ಕಾಂ. ಬಸುದೇವ ಆಚಾರ್ಯ ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯಾಗಿರುತ್ತಾರೆ ಎಂದಿದೆ.

ಎರಡು ಭಾರತಗಳು: ಉತ್ತರ ಮತ್ತು ದಕ್ಷಿಣ...... ಪುಟ 9 ರಿಂದ

ಮುಖ್ಯವಾಗಿ ಪ್ರತಾಪ್ ಭಾನು ಮೆಹ್ತ ಹೇಳುವಂತೆ ಇಂದಿನ ರಾಷ್ಟ್ರೀಯ ರಾಜಕೀಯ ವ್ಯವಸ್ಥೆಯು ಸಾಂಸ್ಕೃತಿಕ ಭಿನ್ನತೆಗಳನ್ನು ನಿರ್ವಹಿಸುವುದರಲ್ಲಿ ವಿಫಲವಾಗಿರುವುದರಿಂದ ಮತ್ತು ಇದೇ ಸಮಯದಲ್ಲಿ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳ ರಚನೆಯು ದುರ್ಬಲವಾಗಿರುವುದರಂದ ಉತ್ತರ–ದಕ್ಷಿಣ ಬಿರುಕು ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ದಸರಾ ಕಾರ್ಯಕ್ರಮವೊಂದರಲ್ಲಿ ಅಕ್ಟೋಬರ್ 24 ರಂದು ಮಾತನಾಡುತ್ತಾ ದೇಶವನ್ನು ವಿಭಜಿಸುವ ಜಾತಿಯತೆ ಮತ್ತು ಪ್ರಾತೀಯತೆಗಳನ್ನು ಕಿತ್ತೊಗೆಯಬೇಕು ಎಂದು ಕರೆ ನೀಡಿದ್ದಾರೆ. ಪ್ರಾದೇಶಿಕತೆಯನ್ನು ವಿಭಜನಕಾರಿ–ವಿನಾಶಕಾರಿ ಸಂಗತಿಯನ್ನಾಗಿ ಪ್ರಧಾನಮಂತ್ರಿ ಅವರು ಗುರುತಿಸುತ್ತಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಈ ರೀತಿಯ ಪ್ರಧಾನಿಗಳ ಆಕ್ರೋಶಕ್ಕೆ ದ.ಭಾ.ದ ರಾಜ್ಯಗಳಲ್ಲಿ ಬಿಜೆಪಿಗೆ ತನ್ನ ಅಸ್ತಿತ್ವವನ್ನು ಸ್ಥಾಪಿಸುವುದು ಸಾಧ್ಯವಾಗದಿರುವುದು ಒಂದು ಕಾರಣವಾಗಿರಲೂಬಹುದು.

ಈ ಬೆಳವಣಿಗೆಗಳು ಭಾರತ/ಇಂಡಿಯಾದ ಏಕತೆ ಮತ್ತು ಸಮಗ್ರತೆಗೆ ಅಪಾಯಕಾರಿಯಾಗುತ್ತವೆ. ದಕ್ಷಿಣ ಭಾರತದ ರಾಜ್ಯಗಳ ಬಗ್ಗೆ ಅಸೂಯಾಪರ ಧೋರಣೆಯನ್ನು ಬಿಟ್ಟು ರಾಷ್ಟ್ರೀಯ ಸರ್ಕಾರ ಘನತೆಯಿಂದ ನಡೆದುಕೊಳ್ಳಬೇಕು ಮತ್ತು ಸಂವಿಧಾನಾತ್ಮ ಒಕ್ಕೂಟ ವ್ಯವಸ್ಥೆಗೆ ಗೌರವ ನೀಡಬೇಕು. ಆ ಮೂಲಕ ಉಲ್ಬಣಗೊಳ್ಳುತ್ತಿರುವ ಬಿರುಕನ್ನು ತಡೆಯಬಹುದು. ಇದಕ್ಕೆ ಅಗತ್ಯವಾಗಿರುವುದು ರಾಜಕೀಯ ಮುತ್ಸದ್ದಿತನವೇ ವಿನಾ ಚುನಾವಣಾ ರಾಜಕೀಯವಲ್ಲ.

ಡಾಲರ್ ಎದುರು 83 ಕ್ಕೆ ಕುಸಿದ ರೂಪಾಯಿ ಮೌಲ್ಯ

2013ರಲ್ಲಿ 60 ಇದ್ದಾಗ "ನಮ್ಮ ಕರೆನ್ಸಿ ಮರಣಶಯ್ಯೆಯಲ್ಲಿದೆ" ಎಂದಿದ್ದ ಮೋದಿ

ಸಿ. ಸಿದ್ದಯ್ಯ

2013ರಲ್ಲಿ ಅಮೆರಿಕಾದ ಡಾಲರ್ ಎದುರು ರೂಪಾಯಿ ಮೌಲ್ಯ 60 ರಷ್ಟಿತ್ತು. ಅಂದಿಗೆ ಡಾಲರ್ ಎದುರು ರೂಪಾಯಿ ಅದುವರೆಗಿನ ಐತಿಹಾಸಿಕ ಮೌಲ್ಯ ಕಳೆದುಕೊಂಡಿತ್ತು. ಅಂದು ನರೇಂದ್ರ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದರು ಮತ್ತು ಕಾರ್ಪೊರೇಟ್ ಕುಳಗಳ ಮತ್ತು ಹಿಂದುತ್ವವಾದಿಗಳ ಪ್ರಧಾನಿ ಹುದ್ದೆಯ ಅಭ್ಯರ್ಥಿಯೂ ಆಗಿದ್ದರು. ಅಂದು ಮನ್ಮೋಹನ್ ಸಿಂಗ್ ಪ್ರಧಾನಿಯಾಗಿದ್ದರು. ನರೇಂದ್ರ ಮೋದಿ ಪ್ರಧಾನಿಯಾದ 2014ರ ನಂತರವೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಬಂದಿದೆ. ನವೆಂಬರ್ 10, 2023 ರಂದು ಅಮೆರಿಕನ್ ಡಾಲರ್ ಎದುರು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ 83.41 ಇತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ರೂಪಾಯಿ ಮತ್ತು ಡಾಲರ್ ಮೌಲ್ಯದಲ್ಲಿ ಸಮನಾಗಿದ್ದವು. 1950 ರಲ್ಲಿ ರೂಪಾಯಿ ಮೌಲ್ಯ 4.79 ಇತ್ತು. ಭಾರತವು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳನ್ನು ಒಪ್ಪಿಕೊಳ್ಳುವವರೆಗೂ, ಅಂದರೆ 1991ರ ವರೆಗೂ 17.5 ರಷ್ಟಿತ್ತು. LPG ನೀತಿಗಳ ಪರಿಣಾಮ ರೂಪಾಯಿ ಮೌಲ್ಯ ಕುಸಿಯುತ್ತಲೇ ಹೋಯಿತು. ಈ ನೀತಿಗಳನ್ನೇ ಅಳವಡಿಸಿಕೊಂಡಿರುವ ಬಿಜೆಪಿ ತನ್ನ ಆಡಳಿತದಲ್ಲಿ ರೂಪಾಯಿಯನ್ನು ಬಲಗೊಳಿಸುತ್ತದೆ ಎಂದು ಬಿಜೆಪಿಯ ನೀತಿ ನಿಲುವುಗಳನ್ನು ಬಲ್ಲವರು ಅಂದೂ ಕೂಡ ನಂಬಿರಲಿಲ್ಲ.

ಅಧಿಕಾರ ಹಿಡಿಯಲು ಏನೇನೆಲ್ಲಾ ನಾಟಕವಾಡಿದರು

2014ರ ಲೋಕಸಭಾ ಚುನಾವಣೆಯಲ್ಲಿ ಗೆದ್ದು, ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಗುರಿ ಮುಟ್ಟುವ ಪ್ರಯತ್ನದಲ್ಲಿ ಬಿಜೆಪಿ, ಅದರ ಮಾತೃ ಸಂಸ್ಥೆ ಆರ್.ಎಸ್.ಎಸ್. ಮತ್ತದರ ಪರಿವಾರ ಏನೆಲ್ಲಾ ತಂತ್ರಗಾರಿಕೆ ನಡೆಸಿದವು ಎಂಬುದನ್ನು ಮತ್ತೊಮ್ಮೆ ನೆನಪಿಸಿಕೊಳ್ಳಬೇಕು. ದೇಶದ ಮತದಾರರ ಬೆಂಬಲ ಪಡೆಯಲು ಮನಮೋಹನ್ ಸಿಂಗ್ ನೇತೃತ್ವದ ಯುಪಿಎ-2 ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ದಾಳಿ ಮಾಡುತ್ತಿದ್ದ ಇವರಿಗೆ ಸಿಕ್ಕ ಅಸ್ತ್ರಗಳಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತ ವಿಷಯವೂ ಒಂದು.

ಅಂದು, ಬಿಜೆಪಿ ನಾಯಕರು ರೂಪಾಯಿ ಮೌಲ್ಯ ಕುಸಿತ ಕುರಿತಂತೆ ಏನೆಲ್ಲಾ ಹೇಳಿದ್ದರು ಎಂಬುದಕ್ಕೆ ಒಂದೆರಡು ಉದಾಹರಣೆಗಳು ಇಲ್ಲಿವೆ:

ಪಕ್ಷದ ನಾಯಕಿ ಸುಸ್ಮಾ ಸ್ವರಾಜ್ ಅವರು ಟ್ವಿಟರ್‌ನಲ್ಲಿ "ರೂಪಾಯಿ ಮೌಲ್ಯ ಕಳೆದುಕೊಂಡಿದೆ. ಪ್ರಧಾನಿ ಕೃಪೆ ಕಳೆದುಕೊಂಡಿದ್ದಾರೆ" ಎಂದು ಹೇಳಿದ್ದರು.

ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಅವರು 11 ಜುಲೈ 2013 ರಂದು "ಯುಪಿಎ ಅಧಿಕಾರಕ್ಕೆ ಬಂದಾಗ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ರಾಹುಲ್ ಗಾಂಧಿಯವರ ವಯಸ್ಸಿಗೆ ಸಮನಾಗಿತ್ತು. ಇಂದು ಅದು ಸೋನಿಯಾ ಗಾಂಧಿ ಅವರ ವಯಸ್ಸಿಗೆ ಸಮಾನವಾಗಿದೆ ಮತ್ತು ಶೀಘ್ರದಲ್ಲೇ ಅದು ಮನಮೋಹನ್ ಸಿಂಗ್ ಅವರ ವಯಸ್ಸನ್ನು ಮುಟ್ಟಲಿದೆ" ಎಂದು ಹೇಳಿದ್ದರು. ಅಂದು ರಾಹುಲ್ ಗಾಂಧಿ ಅವರಿಗೆ 41 ವರ್ಷ, ಸೋನಿಯಾ ಗಾಂಧಿ ಅವರಿಗೆ 67 ವರ್ಷ ಮತ್ತು ಮನಮೋಹನ್ ಸಿಂಗ್ ಅವರಿಗೆ 80 ವರ್ಷ ವಯಸ್ಸಾಗಿತ್ತು.

"ತೀಕ್ಷ್ಣವಾದ ಕುಸಿತದ ನಂತರ US ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ 60.15 ಆಗಿದೆ, ಮೇ ಮತ್ತು ಜುಲೈ 9ರ ನಡುವೆ 53 ರೂ. ನಿಂದ 60.15 ರೂ.ಗೆ ಕುಸಿದಿದೆ. ರಾಷ್ಟ್ರೀಯ ಹೆಮ್ಮೆಯನ್ನು ಗಂಭೀರವಾಗಿ ಘಾಸಿಗೊಳಿಸುವುದರ ಹೊರತಾಗಿ, ಈ ತೀವ್ರ ಕುಸಿತವು ಪ್ರಸ್ತುತ ಯುಪಿಎ ಸರ್ಕಾರದ ಭಾರತೀಯ ಆರ್ಥಿಕತೆಯ ಅಸಮರ್ಪಕ ನಿರ್ವಹಣೆಗೆ ನೇರವಾಗಿ ಸಂಬಂಧಿಸಿದೆ," ಎಂದು ರವಿಶಂಕರ್ ಪ್ರಸಾದ್ ಹೇಳಿದ್ದರು.

ಆದರೆ, ಐಸಿಯುನಲ್ಲಿದ್ದ ರೂಪಾಯಿಗೆ (ಅದನ್ನು ಬಲಗೊಳಿಸಲು) ಯಾವ ಚಿಕಿತ್ಸೆ ನೀಡಬೇಕು ಎಂಬ ಸಲಹೆಯನ್ನು ಜವಾಬ್ದಾರಿಯುತ ಪ್ರಮುಖ ವಿರೋಧ ಪಕ್ಷವಾಗಿ ಬಿಜೆಪಿ ಅಂದು ನೀಡಲಿಲ್ಲ. ಅಥವಾ ರೂಪಾಯಿ ಕುಸಿತಕ್ಕೆ ಕಾರಣವಾದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳಿಗೆ ಪರ್ಯಾಯವಾಗಿ ತನ್ನ ಬಳಿ ಯಾವ ನೀತಿಗಳಿವೆ ಎಂಬುದನ್ನೂ ಅದು ಹೇಳಲಿಲ್ಲ. ದೇಶದ ಪ್ರಜೆಗಳನ್ನು ಮಾತುಗಳಿಂದಲೇ ಮರುಳುಮಾಡುವ



ಕಲೆಯನ್ನು ಸಂಘಪರಿವಾರ ಎಷ್ಟು ಚೆನ್ನಾಗಿ ಕರಗತ ಮಾಡಿಕೊಂಡಿದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

9 ವರ್ಷಗಳಲ್ಲಿ ಶೇ. 39 ರಷ್ಟು ಕುಸಿತ

ಕಾಂಗ್ರೆಸ್ ಆಡಳಿತದ ವಿರುದ್ಧ ಇಷ್ಟೆಲ್ಲಾ ಟೀಕೆ ಮಾಡಿ, ಒಂದಷ್ಟು ಜನರ ಮನಸ್ಸನ್ನು ಗೆದ್ದು, ಶೇ.31ರಷ್ಟು ಮತ ಪಡೆದು ಅಧಿಕಾರಕ್ಕೆ ಬಂದ ಬಿಜೆಪಿ ರೂಪಾಯಿ ಮೌಲ್ಯ ವೃದ್ಧಿಗೆ ಅಥವಾ ಮತ್ತಷ್ಟು ಕುಸಿಯದಂತೆ ತಡೆಯಲು ತೆಗೆದುಕೊಂಡ ಕ್ರಮಗಳೇನು ಎಂಬ ಪ್ರಶ್ನೆಯನ್ನು ನಾವಿಂದು ಕೇಳಬೇಕಿದೆ. 2014ರ ಏಪ್ರಿಲ್ ನಲ್ಲಿ 60 ರೂ. ಗೆ ಒಂದು ಡಾಲರ್ ಸಿಗುತ್ತಿತ್ತು. ಇಂದು ಒಂದು ಡಾಲರ್ ಕೊಳ್ಳಬೇಕಾದರೆ 83 ರೂ. ಕೊಡಬೇಕು. ಅಂದರೆ, 23 ರೂ. ಹೆಚ್ಚು, ಅಥವಾ ಶೇ.39 ರಷ್ಟು ಹೆಚ್ಚು ಹಣ ಕೊಡಬೇಕು.

ರೂಪಾಯಿ ಮೌಲ್ಯ ಕುಸಿತ ಮೇಲ್ನೋಟಕ್ಕೆ ಅಂತಾರಾಷ್ಟ್ರೀಯ ವ್ಯವಹಾರಕ್ಕೆ ಸಂಬಂಧಿಸಿದ್ದು ಎನಿಸಿದರೂ, ಜನಸಾಮಾನ್ಯರ ಮೇಲೆ ಇದರ ನೇರ ಪರಿಣಾಮ ಬೀರಲಿದೆ. ವಿದೇಶದಿಂದ ಆಮದು ಮಾಡಿಕೊಳ್ಳುವ ಎಲ್ಲ ಸರಕುಗಳೂ ಜನಸಾಮಾನ್ಯರಿಗೆ ದುಬಾರಿಯಾಗಲಿದೆ. ಭಾರತವು ಲೋಹಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು ಇತ್ಯಾದಿಗಳ ಆಮದಿನ ಮೇಲೆ ಹೆಚ್ಚಾಗಿ ಅವಲಂಬಿತವಾಗಿದೆ ಮತ್ತು ದೇಶವು US ಡಾಲರ್‌ಗಳಲ್ಲಿ ತನ್ನ ಪಾವತಿಯನ್ನು ಮಾಡುತ್ತದೆ. ರೂಪಾಯಿ ಮೌಲ್ಯದ ಕುಸಿತದೊಂದಿಗೆ, ದೇಶವು ಅದೇ ವಸ್ತುವಿಗೆ ಮೊದಲಿಗಿಂತ ಹೆಚ್ಚು ಪಾವತಿಸಬೇಕಾಗುತ್ತದೆ. ಈ ವಿದ್ಯಮಾನವು ಕಚ್ಚಾ ವಸ್ತು ಮತ್ತು ಉತ್ಪಾದನಾ ವೆಚ್ಚಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ, ಅದು ಅಂತಿಮವಾಗಿ ಗ್ರಾಹಕರಿಗೆ ವರ್ಗಾಯಿಸುತ್ತದೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯ ಮೇಲೆ ಪರಿಣಾಮ

ರೂಪಾಯಿ ಮೌಲ್ಯ ಕುಸಿತವು ಪೆಟ್ರೋಲ್ ಮತ್ತು ಡೀಸೆಲ್, ಅನಿಲ ಇವುಗಳ ಮೇಲೆ ಹೆಚ್ಚಿನ ಪರಿಣಾಮ ಕಾಣುತ್ತದೆ. ಏಕೆಂದರೆ, ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಡಾಲರ್‌ನಲ್ಲಿ ಹಣ ಪಾವತಿಸಬೇಕು. ಇದಕ್ಕಾಗಿ ರೂಪಾಯಿ ಕೊಟ್ಟು ಡಾಲರ್ ಪಡೆಯಬೇಕು. ಭಾರತ ತನಗೆ ಅಗತ್ಯವಿರುವ ಒಟ್ಟು ಕಚ್ಚಾ ತೈಲದಲ್ಲಿ ಶೇ. 80ಕ್ಕೂ ಹೆಚ್ಚಿನ ಭಾಗವನ್ನು ಆಮದು ಮಾಡಿಕೊಳ್ಳುತ್ತದೆ. (ಭಾರತದಲ್ಲೇ ಹೊರತೆಗೆಯುವ ಪೆಟ್ರೋಲಿಯಂ ಗೆ ಅಂತರಾಷ್ಟ್ರೀಯ ಮಾರುಕಟ್ಟೆ ದರ ನಿಗದಿ ಮಾಡಿ ಮಾರುತ್ತಿದ್ದಾರೆ ಎಂಬುದನ್ನೂ ಗಮನಿಸಬೇಕು)

ಕೊರೋನಾದಿಂದಾಗಿ ರೂಪಾಯಿ ಮೌಲ್ಯ ಕುಸಿದಿದೆಯೇ?

ಕೊರೋನಾ ಸೃಷ್ಟಿಸಿದ ಬಿಕ್ಕಟ್ಟಿನ ಪರಿಣಾಮದಿಂದಾಗಿ ರೂಪಾಯಿ ಮೌಲ್ಯ ಕುಸಿದಿದೆ ಎಂಬ ಕಾರಣವನ್ನೂ ಆಳುವ ವರ್ಗದ ಆರ್ಥಿಕ ತಜ್ಞರು ಹೇಳುತ್ತಾರೆ. ಆದರೆ, ಕೊರೋನಾ ಬಿಕ್ಕಟ್ಟಿನ ಮೊದಲು 2019ರಲ್ಲಿ ರೂಪಾಯಿ ಮೌಲ್ಯ 72 ಇತ್ತು. ಮೋದಿ ಆಡಳಿತಕ್ಕೆ ಬಂದ 2014 ರಲ್ಲಿ 60 ಇದ್ದ ರೂಪಾಯಿ ಮೌಲ್ಯ, 2019ರ ವರೆಗಿನ 5 ವರ್ಷಗಳಲ್ಲಿ 12 ರಷ್ಟು (ಶೇ.20 ಅಥವಾ ಪ್ರತಿ ವರ್ಷ ಸರಾಸರಿ 4ರಷ್ಟು) ಕುಸಿದಿತ್ತು ಎಂಬುದನ್ನು ಗಮನಿಸಬೇಕು. 2021ರಲ್ಲಿ 75 ರಷ್ಟಿತ್ತು. ಅಂದರೆ, ಕೊರೋನಾ ಸಂಕಷ್ಟದ 2 ವರ್ಷಗಳಲ್ಲಿ ರೂಪಾಯಿ ಮೌಲ್ಯ 3 ರಷ್ಟನ್ನು ಮಾತ್ರ ಕಳೆದುಕೊಂಡಿತು. 2022ರಲ್ಲಿ 80 ಕ್ಕೆ ಕುಸಿದಿತ್ತು. ಕೊರೋನಾ ನಂತರದ ಮೂರು ವರ್ಷಗಳಲ್ಲಿ ಒಟ್ಟಾರೆಯಾಗಿ ರೂಪಾಯಿ ಕಳೆದುಕೊಂಡ ಮೌಲ್ಯ 8 ಮಾತ್ರ. ವರ್ಷಕ್ಕೆ ಸರಾಸರಿ 2.7 ರಷ್ಟು ಮಾತ್ರ.

ರೂಪಾಯಿ ಮೌಲ್ಯ ಕುಸಿತವಲ್ಲ, ಡಾಲರ್ ಮೌಲ್ಯ ಹೆಚ್ಚಾಗಿದೆಯಷ್ಟೆ!!??

ರೂಪಾಯಿ ಮೌಲ್ಯ ಕುಸಿತವಲ್ಲ, ಡಾಲರ್ ಮೌಲ್ಯಹೆಚ್ಚಾಗಿದೆಯಷ್ಟೆಎನ್ನುತ್ತಾರೆ ಬಿಜೆಪಿಯವರು. ರೂಪಾಯಿ ಮೌಲ್ಯ ಕುಸಿತಕ್ಕೆ ಮೋದಿ ಆಡಳಿತ ಕಾರಣವಲ್ಲ ಎಂದು ಸಮರ್ಥಿಸಿಕೊಳ್ಳಲು ಇಂತಹ ವಾದಗಳನ್ನು ಆಳುವ ವರ್ಗದ ಆರ್ಥಿಕ ತಜ್ಞರು ಮಾಡತೊಡಗಿದ್ದಾರೆ. ಡಾಲರ್ ವಿಶ್ವದ ಅತ್ಯಂತ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ, ಅತ್ಯಂತ ಶಕ್ತಿಶಾಲಿ ಕರೆನ್ಸಿಯಾಗಿದೆ. ಜಗತ್ತಿನ ಬಹುಪಾಲು ವಿದೇಶಿ ವಿನಿಮಯಕ್ಕಾಗಿ ಅಮೆರಿಕಾದ ಡಾಲರ್ ಬಳಕೆಯೇ ಇದಕ್ಕೆ ಕಾರಣ ಎಂದೂ ಹೇಳುತ್ತಾರೆ. ರಷ್ಯಾ-ಉಕ್ರೇನ್ ನಡುವಿನ ಸಂಘರ್ಷದ ನಂತರದ ಜಗತ್ತಿನ ಪರಿಸ್ಥಿತಿಯೂ ಇದಕ್ಕೆ ಕಾರಣ ಎನ್ನುತ್ತಾರೆ.

ಬ್ರಿಟಿಷ್ ಪೌಂಡ್, ಜಪಾನೀಸ್ ಯೆನ್ ಮತ್ತು ಯೂರೋ ಮುಂತಾದ ಕರೆನ್ಸಿಗಳು ಯುಎಸ್ ಡಾಲರ್ ಎದುರು ಭಾರತೀಯ ರೂಪಾಯಿಗಿಂತ ಹೆಚ್ಚು ದುರ್ಬಲವಾಗಿವೆ. ಆದ್ದರಿಂದ, ಈ ಕರೆನ್ಸಿಗಳ ವಿರುದ್ಧ ಭಾರತೀಯ ರೂಪಾಯಿ ಬಲಗೊಂಡಿದೆ ಎಂದು ಕೇಂದ್ರ ಸಚಿವರೊಬ್ಬರು ಹೇಳಿದ್ದರು.

2014ರ ಮಾರ್ಚ್ ನಲ್ಲಿ ಮತ್ತು ಇಂದು ಅಮೆರಿಕ ಡಾಲರ್ ಎದುರು ಕೆಲವು ದೇಶಗಳ ಕರೆನ್ಸಿ ಮೌಲ್ಯ ಹೀಗಿದೆ.

ಚೈನಾದ ಯುಹಾನ್ 6.2 ಇತ್ತು. ಇಂದು 7.2 ಇದೆ. ಶೇ. 16 ರಷ್ಟು ಕುಸಿತ.

ಜಪಾನೀಸ್ ಯೆನ್ 101 ಇತ್ತು. ಇಂದು 149 ಇದೆ. ಶೇ. 49 ರಷ್ಟು ಕುಸಿತ.

ಯುಕೆ ಪೌಂಡ್ 1.67 ಇತ್ತು. ಇಂದು 1.22 ಇದೆ. ಪೌಂಡ್ ತನ್ನ ಮೌಲ್ಯ ಹೆಚ್ಚಿಸಿಕೊಂಡಿದೆ.

ಯೂರೋ 1.38 ಇತ್ತು. ಇಂದು 1.06 ಇದೆ. ಇದೂ ಸಹ ತನ್ನ ಮೌಲ್ಯ ಹೆಚ್ಚಿಸಿಕೊಂಡಿದೆ.

ಒಂದು ಚೀನಾದ ಯುಹಾನ್ ಗೆ ಇಂದಿನ 11.40 ರೂಪಾಯಿಗೆ ಸಮ (ನವೆಂಬರ್ 12, 2023)

ಜಗತ್ತಿನ ಇತರೆ ರಾಷ್ಟ್ರಗಳ ಕರೆನ್ಸಿಗಳಿಗೆ ಹೋಲಿಸಿದರೆ ಭಾರತದ ರೂಪಾಯಿ ಸ್ಥಿರವಾಗಿದೆಯೇ? ಇಲ್ಲಿ ಕೆಲವು ಪ್ರಮುಖ ದೇಶಗಳ ಕರೆನ್ಸಿ ಮತ್ತು ರೂಪಾಯಿ ಮೌಲ್ಯದ ಪಟ್ಟಿ ಇದೆ. ಈ ಬಹುತೇಕ ದೇಶಗಳ ಕರೆನ್ಸಿ ಎದುರು ರೂಪಾಯಿ 2014ರಲ್ಲಿದ್ದ ಮೌಲ್ಯ ಇಳಿಕೆಯಾಗಿದೆ. ಈ ಕೆಳಗಿನ ಪಟ್ಟಿ ನೋಡಿ:

ವಿವಿಧ ದೇಶಗಳ ಕರೆನ್ಸಿ ಎದುರು ಭಾರತೀಯ ರೂಪಾಯಿ ಮೌಲ್ಯ 2014 ಮತ್ತು 2023ರ ವ್ಯತ್ಯಾಸ

	ನವೆಂಬರ್ 12, 2023	ಏಪ್ರಿಲ್ 2014	ವ್ಯತ್ಯಾಸ
EURO	88.98	81.04	−7.94
GBP	101.84	98.28	−3.56
USD	83.27	60.29	−22.98
CNY	11.40	9.36	−2.04
CAD	60.31	58.50	−1.81
AUD	52.91	54.44	+1.53

Great British pound(GBP), United States dollar(USD), Chinese yuan(CNY), Canadian Dollar (CAD), Australian dollar(AUD) -cs-

ಪಾಕಿಸ್ತಾನದ ರೂಪಾಯಿ

ನಮ್ಮ ನೆರೆ ದೇಶಗಳ ಉದಾಹರಣೆ ಕೊಟ್ಟು ತಮ್ಮ ವಿಫಲತೆಯನ್ನು ಮರೆಮಾಚಲು ನಮ್ಮ ನಾಯಕರು ಮುಂದಾಗಿದ್ದಾರೆ.

ಪುಟ 15 ಕ್ಕೆ

9 ವರ್ಷಗಳ ಮೋದಿ ಆಡಳಿತದಲ್ಲಿ ಸಾಧಿಸಿದ್ದೇನು?



2013ರ ಆಗಸ್ಟ್ 23 ರಂದು ಅಂದಿನ ಗುಜರಾತ್ ಮುಖ್ಯಮಂತ್ರಿ ಮೋದಿಯವರು ಸೌರಾಷ್ಟ್ರ ದಲ್ಲಿ ನಡೆದ ಸಮಾರಂಭವೊಂದರಲ್ಲಿ ಮಾತನಾಡುತ್ತ, "ಭಾರತೀಯ ರೂಪಾಯಿ ಬಹಳಷ್ಟು ಸದ್ದು ಮಾಡುತ್ತಿದ್ದ ಸಮಯವಿತ್ತು. ಆದರೆ ಇಂದು ಅದು ತನ್ನ ಧ್ವನಿಯನ್ನು ಕಳೆದುಕೊಂಡಿದೆ. ಮತ್ತು ಅದೇ ರೀತಿ ನಮ್ಮ ಪ್ರಧಾನಿಯ ಧ್ವನಿಯನ್ನು ನಾವು ಕೇಳಲು ಸಾಧ್ಯವಾಗುತ್ತಿಲ್ಲ. ಇಬ್ಬರೂ ಮೂಕರಾಗಿದ್ದಾರೆ. ಇಂದು ನಮ್ಮ ಕರೆನ್ಸಿ ಮರಣಶಯ್ಯೆಯಲ್ಲಿದೆ. ಇದು ಟರ್ಮಿನಲ್ ಹಂತದಲ್ಲಿದೆ ಮತ್ತು ತುರ್ತಾಗಿ ವೈದ್ಯರ ಗಮನ ಬೇಕಿದೆ. ಪ್ರಸ್ತುತ ರೂಪಾಯಿ ಮತ್ತು ಯುಪಿಎ ಸರ್ಕಾರಗಳೆರಡೂ ಮೌಲ್ಯ ಕಳೆದುಕೊಂಡಿವೆ. ನಮ್ಮ ದೇಶವನ್ನು ವಿನಾಶದಿಂದ ತಡೆಯುವ ಸಮಯ ಬಂದಿದೆ. ಕೇಂದ್ರ ಸರ್ಕಾರವು ದೇಶವನ್ನು ದಾರಿ ತಪ್ಪಿಸುತ್ತಿದೆ. ನಮ್ಮ ದೇಶ ಏಕೆ ವಿನಾಶದತ್ತ ಸಾಗುತ್ತಿದೆ ಎಂಬುದನ್ನು ಜನರು ತಿಳಿದುಕೊಳ್ಳಬೇಕು ಎಂದಿದ್ದರು. ಅಂದು ಮೋದಿಯವರೇ ಹೇಳಿದಂತೆ ರೂಪಾಯಿ ಇಂದು ಟರ್ಮಿನಲ್ ಹಂತದ ಹಾದಿಯಲ್ಲಿ ಸಾಗುತ್ತಿದೆ.

ಮೋದಿ-9 ವರ್ಷಗಳು-ಭಾಗ-25

10% ಮಂದಿಗೆ ಆರ್ಥಿಕ ಸಮೃದ್ಧಿ, ಉಳಿದ 90% ಮಂದಿಗೆ ನಿಧಾನಗತಿ

ಇದು ಅಮೃತ ಕಾಲ

ಬಲವಾದ ಖಾಸಗಿ ಬೇಡಿಕೆಗಳು ಮತ್ತು ಬಳಕೆಯಿಂದಾಗಿ ದೇಶದ ಅರ್ಥವ್ಯವಸ್ಥೆ ಗಟ್ಟಿಮುಟ್ಟಾದ ಬೆಳವಣಿಗೆಯನ್ನು ಕಾಣಲಿದೆ ಎಂದು ದಿಲ್ಲಿಯಿಂದ ಹಣಕಾಸು ಮಂತ್ರಾಲಯ ಬಿಡುಗಡೆ ಮಾಡಿರುವ ಇತ್ತೀಚಿನ ಮಾಸಿಕ ವರದಿ ಹೆಮ್ಮೆಯಿಂದ ಹೇಳಿಕೊಂಡಿದೆ. ಈ ಹಣಕಾಸು ವರ್ಷದಲ್ಲಿ ಜಿಡಿಪಿ 6.5% ದರದಲ್ಲಿ ಬೆಳೆಯಬಹುದು ಎಂದು ಅದು ಹೇಳಿದೆ.

ಅಲ್ಲದೆ ಇನೂ ಕೆಲವು 'ಸಂತೋಷದ ಸಂಗತಿ'ಗಳಿವೆ ಎಂದಿದೆ ವರದಿ! ಜಿಎಸ್‌ಟಿ ಸಂಗ್ರಹ ಚೆನ್ನಾಗಿ ಆಗಿದೆ, ಮತ್ತು ಕಾರುಗಳ ಮಾರಾಟದಲ್ಲಿಯೂ ದಾಖಲೆ ನಿರ್ಮಾಣವಾಗಿದೆ. ಲಕ್ಷುರಿ ವಾಹನಗಳ ಮಾರಾಟ 2022ಕ್ಕೆ ಹೋಲಿಸಿದರೆ ಒಂದೂವರೆ ಪಟ್ಟಾಗಿದೆ!

* 1.5 ಲಕ್ಷ ರೂ.ಗಿಂತ ಹೆಚ್ಚಿನ ಬೆಲೆಯ ಬಳಕೆ ವಸ್ತುಗಳ ಮಾರಾಟ ಹೆಚ್ಚುತ್ತಿದೆ. * ಚಿಲ್ಲರೆ ವ್ಯಾಪಾರದಲ್ಲಿ ಶ್ರೀಮಂತ ವಿಭಾಗಗಳ ಪಾಲು 70% ಮತ್ತು ಆನ್‌ಲೈನ್ ಖರೀದಿಗಳಲ್ಲೂ 50ರಿಂದ 60%!.
* 2026ರ ವೇಳೆಗೆ ಕೋಟ್ಯಾಧಿಪತಿಗಳ ಸಂಖ್ಯೆ 105% ದಷ್ಟು ಹೆಚ್ಚುತ್ತದೆ, ಅಂದರೆ ದುಪ್ಪಟ್ಟಾಗುತ್ತದೆ ಎಂದೂ ವರದಿ ಹೆಮ್ಮೆಯಿಂದ ಹೇಳಿಕೊಂಡಿದೆ.
* 2030ರ ವೇಳೆಗೆ ಭಾರತದ ವಿಲಾಸಿ ವಸ್ತುಗಳ ಮಾರುಕಟ್ಟೆ 200 ಬಿಲಿಯ ಡಾಲರುಗಳ ಮಟ್ಟಕ್ಕೇರಬಹುದಂತೆ!
* 55"–65" ಟಿವಿಗಳ ಮಾರಾಟದಲ್ಲಿ 300% ಹೆಚ್ಚಳವಾಗಿದೆ.
* ರಿಯಲ್‌ಎಸ್ಟೇಟ್‌ನಲ್ಲೂ 50ಲಕ್ಷ ರೂ.ಗಿಂತ ಹೆಚ್ಚಿನ ಬೆಲೆಯ ಮನೆಗಳ ಮಾರಾಟದಲ್ಲಿ ಏರಿಕೆಯಾಗಿದೆ. ಆದರೆ ಅದೇ ವರದಿಯಲ್ಲಿರುವ ಇತರ ಅಂಕಿ–ಅಂಶಗಳನ್ನು ಗಮನಿಸಿ!
* ದೇಶದ ಅತಿ ಮೇಲಣ 10% ವರಮಾನ ಗಳಿಸುವವರ ಆದಾಯ ಅತಿ ಕೆಳಗಣ 50% ಮಂದಿಯ ಆದಾಯದ 20 ಪಟ್ಟಾಗಿದೆ!
* ಅತ್ಯಂತ ತುದಿಯಲ್ಲಿರುವ 1% ಮಂದಿಯ ಬಳಿ ರಾಷ್ಟ್ರೀಯ ವರಮಾನದ 22% ದಷ್ಟು ಕೂಡಿಕೊಂಡಿದ್ದರೆ, ಅತಿ ಕೆಳಗಣ 50% ಮಂದಿಯ ಬಳಿಯಿರುವುದು ಕೇವಲ 13%!

ಕಾರುಗಳ ಮಾರಾಟದಲ್ಲಿಯೂ ಇದೇ ತಾರತಮ್ಯ ಕಾಣುತ್ತದೆ. ವರದಿ ಗಮನಿಸಿದಂತೆ ಕಾರುಗಳ ದಾಖಲೆ ಮಾರಾಟವಾಗಿದ್ದರೆ, ಅದು ಮುಖ್ಯವಾಗಿ 10ಲಕ್ಷ ರೂ.ಗಿಂತ ಹೆಚ್ಚಿನ ಬೆಲೆಯ ಕಾರುಗಳಿಂದಾಗಿಯೇ. ಕಡಿಮೆ ಬೆಲೆಯ ಹ್ಯಾಚ್ ಬ್ಯಾಕ್‌ಗಳ ಮಾರಾಟದಲ್ಲಿ ಏರಿಕೆ ಕಾಣ ಬಂದಿಲ್ಲ.

ಇನ್ನೊಂದೆಡೆಯಲ್ಲಿ ದ್ವಿಚಕ್ರವಾಹನಗಳ ಮಾರಾಟ ಕೂಡ ಇನ್ನೂ ಕೊವಿಡ್–ಪೂರ್ವ ಮಟ್ಟಕ್ಕೂ ಬಂದಿಲ್ಲ. ಕಡಿಮೆ ಬೆಲೆಗಳ ಮೋಟಾರು ಸೈಕಲುಗಳ ಮಾರಾಟದಲ್ಲಿನ ಸ್ಥಗಿತತೆ ಎದ್ದು ಕಾಣುತ್ತಿದೆ. ಅಂದರೆ ಗ್ರಾಮೀಣ ಖರೀದಿಗಳು ಬಹಳ ಕಡಿಮೆಯಾಗಿವೆ.
ವಾಸ್ತವವಾಗಿ ಇದು 3% ದಷ್ಟು ಇಳಿದಿದೆ!
* 32" ಟಿವಿ ಬೇಡಿಕೆಯಲ್ಲಿ 40% ಇಳಿಕೆಯಾಗಿದೆ. ಈ ಮೊದಲು ಮಾರಾಟವಾಗುತ್ತಿದ್ದ ಸ್ಮಾರ್ಟ್ ಟಿವಿಗಳಲ್ಲಿ 80%ದಷ್ಟು 32" ಮತ್ತು 40" ಟಿವಿಗಳು ಎನ್ನಲಾಗಿದೆ.
* ಉಡುಪುಗಳು ಮತ್ತು ಬಟ್ಟೆಗಳ ಮಾರಾಟ 10%ದಷ್ಟು ಕುಸಿದಿದೆ.
* ಬಹಳ ಹೆಚ್ಚಾಗಿ ಬಳಕೆಯಾಗುವ(ಎಫ್‌ಎಂಸಿಜಿ) ಸರಕುಗಳ ಮಾರಾಟವೂ 2%ದಷ್ಟು ಇಳಿಕೆ ಕಂಡಿದೆ.

ಈ ತಾರತಮ್ಯ ರಿಯಲ್ ಎಸ್ಟೇಟ್ ವಲಯದಲ್ಲೂ ಕಾಣುತ್ತಿದೆ. ಕೊವಿಡ್ ಪರಿಣಾಮ ತಗ್ಗಿದ ನಂತರ ಈ ವಲಯವೂ ವೃದ್ಧಿಯನ್ನು ಕಾಣುತ್ತಿದೆ. ಆದರೆ ಇಲ್ಲಿಯೂ ವೃದ್ಧಿಯಾಗಿರುವುದು ಹೆಚ್ಚು ಬೆಲೆಯ ವಿಲಾಸಿ ಗೃಹನಿರ್ಮಾಣದಲ್ಲಿಯೇ. 2023ರಲ್ಲಿ ವಿಲಾಸಿ ಮನೆಗಳ ಮಾರಾಟದಲ್ಲಿ 115% ಹೆಚ್ಚಳವಾಗಿದೆ. ಆದರೆ ಜನಸಾಮಾನ್ಯರ ಕೈಗೆಟಕುವ ಬೆಲೆಗಳ ವಸತಿಗಳ ಪಾಲು 68%ದಿಂದ 51%ಕ್ಕೆ ಗಮನಾರ್ಹ ಪ್ರಮಾಣದಲ್ಲಿ ಕುಸಿತವಾಗಿದೆ.

ಉದಾ: ಬೆಂಗಳೂರಿನಲ್ಲಿ 2022ರಲ್ಲಿ ಮಾರಾಟವಾದ 50ಲಕ್ಷ ರೂ. ಗಿಂತ ಕಡಿಮೆ ಮೌಲ್ಯದ ಮನೆಗಳ ಪ್ರಮಾಣ 64% ಇದ್ದದ್ದು 2023ರಲ್ಲಿ 36%ಕ್ಕೆ ಇಳಿದಿದೆ. ಆದರೆ 50ಲಕ್ಷ ದಿಂದ 1.5 ಕೋಟಿರೂ. ಮೌಲ್ಯದ ಮನೆಗಳ ಪ್ರಮಾಣ 26%ದಿಂದ 45%ಕ್ಕೆ ಏರಿದೆ, 1.5 ಕೋಟಿರೂ. ಗಿಂತ ಹೆಚ್ಚು ಮೌಲ್ಯದ ಮನೆಗಳ ಮಾರಾಟದ ಪ್ರಮಾಣ 9%ದಿಂದ 20%ಕ್ಕೇರಿದೆ.

ಒಟ್ಟಿನಲ್ಲಿ, ಹಲವು ಜನಪರ ಅರ್ಥಶಾಸ್ತ್ರಜ್ಞರು ಎಚ್ಚರಿಸಿದಂತೆ, ಸರಕಾರದ ದೊಡ್ಡ ಕಾರ್ಪೊರೇಟ್–ಪರ ಧೋರಣೆಗಳಿಂದಾಗಿ, ಕೊವಿಡ್ ನಂತರದ ಪುನಶ್ಚೇತನ K ಆಕಾರದಲ್ಲಿದೆ. ಅಂದರೆ ಉಳ್ಳವರ ವರಮಾನಗಳು ಏರುತ್ತಿವೆ, ಇಲ್ಲದವರ ವರಮಾನಗಳು ಸ್ಥಗಿತಗೊಂಡಿವೆ, ಇಲ್ಲವೇ ಇಳಿಯುತ್ತಿವೆ. ಕೇಂದ್ರದಲ್ಲಿರುವ ಸರಕಾರ ಇದನ್ನು ಒಪ್ಪದಿದ್ದರೂ, ಅದರ ಹಣಕಾಸು ಮಂತ್ರಾಲಯದ ಇತ್ತೀಚಿನ ಮಾಸಿಕ ವರದಿ ಅದನ್ನೇ ಹೇಳುತ್ತಿರುವಂತಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಅಂದರೆ 10% ಮಂದಿಗೆ ಆರ್ಥಿಕ ಸಮೃದ್ಧಿಯಾದರೆ, ಉಳಿದ 90% ಮಂದಿಗೆ ನಿಧಾನಗತಿಯ ಪುನಶ್ಚೇತನ.

ವಿಶ್ವ ಅಸಮಾನತೆಯ ವರದಿ 2022 ಭಾರತ ಅತ್ಯಂತ "ಅಸಮಾನತೆಯ ದೇಶ"ಗಳಲ್ಲಿ ಒಂದು ಎಂದಿತ್ತು. ಕೊವಿಡ್ ನಂತರದ ಬೆಳವಣಿಗೆ ಇದನ್ನು ಇನ್ನಷ್ಟು ಉಲ್ಬಣಗೊಳಿಸಿದೆ. "ಭಾರತದ ಜಿಡಿಪಿ ಚೆನ್ನಾಗಿಯೇ ಬೆಳೆಯುತ್ತಿದೆ. ಆದರೆ ಬೆಳವಣಿಗೆಯೆಲ್ಲ ಮೇಲಿದ್ದರವರಿಗೇ ಹೋಗುತ್ತಿದೆ. ನಾವಿದನ್ನು ಸರಿಪಡಿಸಬೇಕು" ಎಂದು ಭಾರತದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಕೌಶಿಕ್ ಬಸುರವರು ಕೂಡ ಹೇಳಿದ್ದಾರೆ ಎಂದು ವರದಿಯಾಗಿದೆ.

ಚುನಾವಣಾ ಪ್ರಚಾರದಲ್ಲೇ ಉಚಿತ ಧಾನ್ಯ ಹಂಚಿಕೆಯ ಯೋಜನೆಯ ವಿಸ್ತರಣೆಯ ಪ್ರಕಟಣೆ

ಈ ಬಾರಿಯ ಐದು ವಿಧಾನಸಭಾ ಚುನಾವಣೆಗಳ ಪ್ರಚಾರದ ನಡುವೆಯೂ ಪ್ರಧಾನ ಮಂತ್ರಿಗಳು ತಮ್ಮ ಸರಕಾರದ ಪರವಾಗಿ ಎರಡು ಪ್ರಮುಖ ಪ್ರಕಟಣೆಗಳನ್ನು ಮಾಡಿದ್ದಾರೆ. ಒಂದು, ಈ ಡಿಸೆಂಬರ್ 31ರಂದು ಕೊನೆಗೊಳ್ಳಲಿದ್ದ 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನಾ'ದ ಅಡಿಯಲ್ಲಿ 80 ಕೋಟಿ ಬಡವರಿಗೆ ಉಚಿತ ಧಾನ್ಯ ವಿತರಣೆಯನ್ನು ಇನ್ನೂ ಐದು ವರ್ಷಗಳ ಅವಧಿಗೆ ಅಂದರೆ ಡಿಸೆಂಬರ್31, 2028ರ ವರೆಗೆ ವಿಸ್ತರಿಸಲಾಗುವುದು ಎಂದು. ಎರಡನೆಯದ್ದು, ಛತ್ತಿಸ್‌ಗಡದಲ್ಲಿ ಚುನಾವಣಾ ಪ್ರಚಾರ ಮುಗಿಯುವ ಕೆಲವೇ ಗಂಟೆಗಳ ಮೊದಲು 24 ಸಾವಿರ ಕೋಟಿ ರೂ. ಗಳ ಪಿಎಂ–ಪಿವಿಟಿಜಿ ಅಭಿವೃದ್ಧಿ ಮಿಷನ್. ಇದು 75 ವಿಶೇಷವಾಗಿ ದುರ್ಬಲವಾಗಿರುವ ಬುಡಕಟ್ಟು ಗುಂಪುಗಳಿರುವ 22500 ಹಳ್ಳಿಗಳಲ್ಲಿ 11 ಪ್ರಮುಖ ನೆರವುಗಳಿಗಾಗಿ ಎನ್ನಲಾಗಿದೆ. ಜತೆಗೆ ಪಿಎಂ ಕಿಸಾನ್‌ನ ಇನ್ನೊಂದು ಕಂತನ್ನೂ ಪ್ರಧಾನಿಗಳು ಬಿಡುಗಡೆ ಮಾಡಿದರು.


ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವಾಗ ಹೀಗೆಲ್ಲ ಪ್ರಕಟಣೆ,ಬಿಡುಗಡೆ ಮಾಡಬಹುದೇ ಎಂಬುದು ಬೇರೆ ಮಾತು. ಈ ಪ್ರಧಾನಿಗಳು ಅವನ್ನು ಪ್ರಕಟಿಸಬೇಕಾದ ಇಂತಹ ಸನ್ನಿವೇಶ ಉಂಟಾದ್ದಾದರೂ ಏಕೆ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ಈ ಪ್ರಚಾರದ ಮೊದಲು, ಮತ್ತು ಆರಂಭದಲ್ಲಿ ಕೇಂದ್ರದಲ್ಲಿ ಆಳುವ ಪಕ್ಷದ ಮುಖಂಡರು ಸನಾತನ ಧರ್ಮ, ದೇಶಭಕ್ತಿ, ಹಮಾಸ್ ದಾಳಿ ಎಂದೆಲ್ಲ ಮಾತಾಡುತ್ತಿದ್ದರೆ, ಪ್ರಚಾರ ಕೊನೆಯ ಹಂತಕ್ಕೆ ಬರುವ ವೇಳೆಗೆ ಈ ಎರಡು ಪ್ರಮುಖ ಪ್ರಕಟಣೆಗಳು ಏಕೆ?


"ಹತಾಶ ಸಮಯಗಳಲ್ಲಿ ಹತಾಶ ಪರಿಹಾರಗಳು ಬೇಕಾಗುತ್ತವೆ" ಎಂದು ನಮ್ಮ ಸ್ಮಾರ್ಟ್ ಪ್ರಧಾನಿಗೆ ತಿಳಿದಿದೆ ಎಂದು ಒಬ್ಬ ವಿಶ್ಲೇಷಕರು ಇದನ್ನು ವರ್ಣಿಸಿದ್ದಾರೆ. ಬಿಹಾರದ ಜಾತಿಗಣತಿಯ ಪ್ರಕಟಣೆಗೆ ಪ್ರತಿಯಾಗಿ ಇದು ಅಗತ್ಯವಾಗಿದ್ದಿರಬಹುದೇ? ಅಂತೂ ಜನಗಳ ಭಾವನೆಗಳನ್ನು ಕೆದಕುವ ವಿಷಯಗಳು ಹಿಂದಕ್ಕೆ ಸರಿದು ಬದುಕಿನ ಪ್ರಶ್ನೆಗಳು ಮುನ್ನೆಲೆಗೆ ಬಂದಿವೆ ಎಂಬುದು ಗಮನಾರ್ಹ.

ಒಂದು ಪ್ರಮುಖ ಹಕ್ಕು–ಆಧಾರಿತ ಯೋಜನೆಯಾದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಂಗ್ರೆಸಿನ ಆಳ್ವಿಕೆಯ ವಿಫಲತೆಯ ದ್ಯೋತಕ ಎನ್ನುತ್ತ ಅದನ್ನು ಹೇಗಾದರೂ ಕೊನೆಗೊಳಿಸುವ ಯೋಚನೆಯನ್ನು ತೋರಿಸುತ್ತಿದ್ದವರು, ಜನಗಳಿಗೆ ಕಲ್ಯಾಣ ಯೋಜನೆಗಳನ್ನು 'ರೆವ್ಡಿ' ಎಂದು ಗೇಲಿ ಮಾಡಿದವರು, ಭಾರತದಲ್ಲಿ ಬಡತನದ ವಿವಿಧ ಆಯಾಮಗಳ ಬಗ್ಗೆ ಪ್ರಕಟವಾದ ಅಂಕಿ–ಅಂಶಗಳನ್ನು ಒಂದೋ ಬಚ್ಚಿಡುವ ಅಥವ ದೇಶ–ವಿರೋಧಿ ಪಿತೂರಿ ಎಂದು ಹೀಗಳೆಯುವ ಕೆಲಸಕ್ಕೆ ಮುಂದಾದವರು ಈಗ 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನಾ'ವನ್ನು ಹೇಗೆ ತಾನೇ ಮುಮದುವರೆಸುವುದಾಗಿ ಹೇಳಲು ಸಾಧ್ಯ ಎಂಬುದು ಹಲವರನ್ನು ಕಾಡುತ್ತಿರುವ ಪ್ರಶ್ನೆ. ಕೊವಿಡ್ ಕಾಲದಲ್ಲಿ ತಂದ ಈ ಯೋಜನೆಯನ್ನು ಮುಂದುವರೆಸಬೇಕೆಂಬ ಬೇಡಿಕೆಯನ್ನು ಬಹಳ ದಿನ ತಳ್ಳಿ ಹಾಕುತ್ತಿದ್ದ ಈ ಸರಕಾರ ಕೊನೆಗೂ ಅದನ್ನು ಮೊಟಕುಕಗೊಳಿಸಿ ಕೇವಲ ಒಂದು ವರ್ಷಕ್ಕೆ ಮುಂದುವರೆಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈಗ ಅದನ್ನು ಒಮ್ಮೆಲೇ ಐದು ವರ್ಷ ವಿಸ್ತರಿಸಿರುವುದರ ಅರ್ಥ, ಭಾರತದ 60% ಮಂದಿ ಕಡುಬಡವರು, ಅವರಿಗೆ ಸರಕಾರದ ಸಹಾಯಹಸ್ತದ ಅಗತ್ಯವಿದೆ ಎಂಬ ಜ್ಞಾನೋದಯವೇ? ಕಳೆದ ಹತ್ತು ವರ್ಷಗಳ ತಮ್ಮ ಆಳ್ವಿಕೆಯಲ್ಲಿ ದೇಶದ ಈ ಕಡುಬಡತನವನ್ನು ಹೋಗಲಾಡಿಸಲು ಸಾಧ್ಯವಾಗಲಿಲ್ಲ, ಇನ್ನೂ ಕನಿಷ್ಟ 5ವರ್ಷಗಳ ಕಾಲ ಅದು ಸಾಧ್ಯವಾಗಲಿಕ್ಕಿಲ್ಲ ಎಂಬ ವಿಫಲತೆಯ ಸ್ವೀಕಾರವೇ ಎಂದು ಒಬ್ಬ ವಿಶ್ಲೇಷಕರು ತೀವ್ರವಾಗಿ ಪ್ರಶ್ನಿಸಿದ್ದಾರೆ.

ಈ ನಡುವೆ ಅವರು, ಅದೇ ಚುನಾವಣಾ ಪ್ರಚಾರದಲ್ಲಿ ಭಾರತದಲ್ಲಿ ಇರುವುದು ಒಂದೇ ಜಾತಿ– ಅದು ಬಡವರದ್ದು ಎಂದೂ ಹೇಳಿದ್ದಾರಂತೆ. ನಿಜ, ಭಾರತದಲ್ಲಿ ಇರಬೇಕಾದ್ದು ಒಂದೇ ಧರ್ಮ–ಅದೆಂದರೆ ಬಡತನವನ್ನು ಅಸಮಾನತೆಯನ್ನು ಹೋಗಲಾಡಿಸುವುದು ಎಂದು ಅವರು ಇನ್ನೂ ಹೇಳಿಲ್ಲ.



ಅವರಿಗೆ ಇನ್ನೂ ಐದು ವರ್ಷ ಉಚಿತ ರೇಷನ್ ಕೊಡುತ್ತಿದ್ದೇನೆ, ನೋಡಿ!
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್



ಬಡವರ ಸೇವೆ ಮಾಡಲು ನಮಗೆ ಇನ್ನೂ 100ವರ್ಷ ಕೊಡಿ!
ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

"ಎಂಪಿ ಕೆ ದಿಲ್‌ಮೇಂ ಮೋದಿ, ಮೋದೀಕೀ ಗಾರಂಟಿ"

ಈಗ ಮತದಾನಕ್ಕೆ ಸಿದ್ಧವಾಗುತ್ತಿರುವ ಐದು ರಾಜ್ಯಗಳಲ್ಲಿ ಎಂ.ಪಿ.., ಅಂದರೆ ಮಧ್ಯಪ್ರದೇಶ ಮಾತ್ರವೇ 'ಡಬಲ್ ಇಂಜಿನ್' ಸರಕಾರ. ಆದರೆ ಅಲ್ಲಿಯೂ ಕರ್ನಾಟಕದಲ್ಲಿ ಈ ಮೊದಲು ಆದಂತೆ 'ಡಬಲ್ ಇಂಜಿನ್' ಬಗ್ಗೆ ಮಾತಾಡುವುದು ಕಷ್ಟವೇ–ಏಕೆಂದರೆ ಬಿಜೆಪಿ ಸರಕಾರದ ಹೇಳಿಕೊಳ್ಳುವ 'ಸಾಧನೆಗಳು' ಏನಿಲ್ಲ, ಆದರೆ ಹೇಳಿಕೊಳ್ಳದಿರಲು ಬಹಳ ಇವೆ. ಆದ್ದರಿಂದ ಪ್ರಸಕ್ತ ಮುಖ್ಯಮಂತ್ರಿ ಒಟ್ಟು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದರೂ, ಚುನಾವಣೆ ಗೆಲ್ಲಲು ಎಲ್ಲೆಡೆಗಳಲ್ಲೂ ಬಿಜೆಪಿ ಪ್ರಧಾನ ಮಂತ್ರಿಗಳನ್ನೇ ಅವಲಂಬಿಸಿದಂತಿದೆ ಎಂದು ವರದಿಯಾಗಿದೆ. ಎಷ್ಟೆಂದರೆ, ಶೀರ್ಷಿಕೆಯಲ್ಲಿನ ಘೋಷಣೆ(ಮಧ್ಯಪ್ರದೇಶದ ಹೃದಯದಲ್ಲಿ ಮೋದಿ, ಮೋದಿಯವರ ಗ್ಯಾರಂಟಿ)ಯನ್ನೂ ಕೊಟ್ಟಿರುವುದು ಅವರೇ! (ನ್ಯೂಸ್‌ಕ್ಲಿಕ್, ನವಂಬರ್ 17)

ಮೂರು ಕೇಂದ್ರ ಸಂಪುಟದ ಮಂತ್ರಿಗಳನ್ನೇ ಈ ಬಾರಿ ವಿಧಾನಸಭಾ ಚುನಾವಣೆಗೆ ಇಳಿಸಬೇಕಾದ ಸ್ಥಿತಿ ಚುನಾವಣೆಯ ಆರಂಭದಲ್ಲೇ ಉಂಟಾಗಿತ್ತು. ಇವರಲ್ಲಿ ಒಬ್ಬರು ದಿಲ್ಲಿಯಲ್ಲಿ ರೈತರು ಬಾಯಿ ಮುಚ್ಚಿಸಿದ ಕೇಂದ್ರ ಕೃಷಿ ಮಂತ್ರಿಗಳು. ರೈತರು ಅವರಿಗೆ ಪಾಟ ಕಲಿಸಲು ಪಣ ತೊಟ್ಟಿದ್ದಾರೆ. ಜತೆಗೆ, ಈ ಚುನಾವಣಾ ಪ್ರಚಾರದ ವೇಳೆಯಲ್ಲಿ ಅವರ ಮಗನ '10 ಸಾವಿರ ಕೋಟಿ ರೂ.ಗಳ ಹಗರಣ'ವೂ ಅವರನ್ನು ಸುತ್ತಿಕೊಂಡಿದೆಯಂತೆ. ಪ್ರಧಾನಿಗಳು ತಮ್ಮ ಪ್ರಚಾರ ಭಾಷಣಗಳಲ್ಲಿ ಎಲ್ಲಿಯೂ ಅದರ ಪ್ರಸ್ತಾಪವನ್ನೂ ಮಾಡಿಲ್ಲ ಎಂದು ಹೇಳಲಾಗಿದೆ.

ಕಳೆದ ಬಾರಿ ಕಾಂಗ್ರೆಸ್ ಗೆದ್ದಾಗ, ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ ಎಂದು ಕೆಲವು ಬೆಂಬಲಿಗರನ್ನು ಒಟ್ಟು ಹಾಕಿ ಜನರು ಆರಿಸಿದ ಕಾಂಗ್ರೆಸಿನ ಸರಕಾರವನ್ನೇ ಬೀಳಿಸಿ, ಮತ್ತೊಮ್ಮೆ ಬಿಜೆಪಿ ಸರಕಾರ ರಚಿಸಲು ನೆರವಾಗಿದ್ದ, ನಂತರ ಅದಕ್ಕೆ ಪ್ರತಿಯಾಗಿ ಕೇಂದ್ರ ಸಂಪುಟದಲ್ಲಿ ಸ್ಥಾನ ಪಡೆದ ಜ್ಯೋತಿರಾದಿತ್ಯ ಸಿಂಧ್ಯರವರನ್ನೂ ಈ ಬಾರಿ ಚುನಾವಣೆಯಲ್ಲಿ ಕೇಳುವವರೇ ಇಲ್ಲ, ಅವರು ಜತೆಗೆ ತಂದಿದ್ದ ಮಾಜಿ ಕಾಂಗ್ರೆಸ್ ಶಾಸಕರೂ ಅವರ ಜತೆಗಿಲ್ಲ ಎನ್ನಲಾಗುತ್ತಿದೆ.

ಎಂಬತ್ತು ವರುಷಕ್ಕಾಗುವ ಮಳೆ ಎರಡು ತಾಸಿನಲ್ಲಿ ಸುರಿದರೆ!



ನೀರು, ಬೆಂಕಿ, ಬರಗಾಲಗಳು ಅಂಕೆ ಮೀರಿದರೆ ಮನುಷ್ಯರ ಪಾಡು ಕಂಗೆಟ್ಟು ಅಲೆಯುವ ನಾಯಿಪಾಡೇ ಹೌದು. ನಿಸರ್ಗದೆದುರು ನಮ್ಮ ಇರುವಿಕೆ ಬಹಳ ನಾಜೂಕಿನದು ಎಂದು ನೆನಪಿಸುವ ಬರಹವಿದು.

ಕೆ.ಎಸ್.ರವಿಕುಮಾರ್, ಹಾಸನ

ಫ್ರಾಂಕ್‌ಫರ್ಟ್ ಜರ್ಮನಿಯ ವಾಣಿಜ್ಯ ನಗರಿ. ಹಣಕಾಸು ವಹಿವಾಟು ಮತ್ತು ನೌಕರಿ ಅವಕಾಶಗಳ ಕನಸಿನ ನಗರಿ. ಯೂರೊ ಕರೆನ್ಸಿಯನ್ನು ನಿರ್ವಹಿಸುವ ಯೂರೋಪಿಯನ್ ಸೆಂಟ್ರಲ್ ಬ್ಯಾಂಕ್(ECB)ನ ಕೇಂದ್ರ ಕಚೇರಿ ಇಲ್ಲೇ ಇದೆ. ಪ್ರತೀ ವರುಷ ಇಲ್ಲಿ ಜರುಗುವ 'ಫ್ರಾಂಕ್‌ಫರ್ಟ್ ಪುಸ್ತಕ ಜಾತ್ರೆ' ಬಹಳ ಸುದ್ದಿ ಮಾಡುತ್ತದೆ. ಎರಡನೇ ಜಾಗತಿಕ ಯುದ್ಧದಲ್ಲಿ ಶೇಕಡಾ ನೂರರ ಹತ್ತಿರ ನಾಶವಾಗಿದ್ದ ಈ ನಗರ ನಂತರ ತನ್ನನ್ನು ಬಹಳ ಆಧುನಿಕವಾಗಿ ನಿರ್ಮಿಸಿಕೊಂಡಿತು. ಜರ್ಮನಿಯ ಪ್ರಗತಿಯ ಸಂಕೇತವಾಗಿ ಮಾರ್ಪಟ್ಟಿತು. ಆಧುನಿಕವೆಂದಾಕ್ಷಣ ಬರಿಯ ಕಾಂಕ್ರೀಟ್ ಕಾಡಿನ ಚಿತ್ರಣ ನಿಮ್ಮ ಕಲ್ಪನೆಯಲ್ಲಿ ಕೊನರಬಹುದು. ಹಾಗೇನಿಲ್ಲ, ಫ್ರಾಂಕ್‌ಫರ್ಟ್ ನಗರದ ಅರ್ಧದಷ್ಟು ಪ್ರದೇಶ ದಟ್ಟ ನೈಸರ್ಗಿಕ ಕಾಡುಗಳಿಂದ ತುಂಬಿ ಹೋಗಿದೆ.

ನಗರದ ಒಟ್ಟಾರೆ ಕಾರ್ಬನ್ ಡೈಆಕ್ಸೈಡಿನ ಪ್ರಮಾಣವನ್ನು ತಗ್ಗಿಸುವಲ್ಲಿ ಈ ಕಾಡುಗಳು ಗಮನಾರ್ಹ ಪಾತ್ರ ನಿರ್ವಹಿಸುತ್ತವೆ. ಫ್ರಾಂಕ್‌ಫರ್ಟಿನ ಶೇಕಡಾ 80ರಷ್ಟು ನಿವಾಸಿಗಳು ತಮ್ಮ ಮನೆಬಾಗಿಲಿನಿಂದ 300 ಮೀಟರ್ ನಡೆದರೆ ಸಾಕು ಕಾಡಿನ ಅಂಚನ್ನು ತಲುಪುತ್ತಾರೆ. ಇವೇನು ನಿನ್ನೆ ಮೊನ್ನೆ ಬೆಳೆಸಿದ ಕಾಡುಗಳಲ್ಲ. ಅವುಗಳ ಚರಿತ್ರೆ ಕ್ರಿ.ಶ. 1221ರಷ್ಟು ಹಿಂದಕ್ಕೆ ಸರಿಯುತ್ತದೆ. ಜಗತ್ತಿನ ಅತಿದೊಡ್ಡ ಹೊಳಲುಗಾಡು(Urban Forest)ಗಳಲ್ಲಿ ಫ್ರಾಂಕ್‌ಫರ್ಟಿನ ಹೊಳಲುಗಾಡೂ ಒಂದು. ಫ್ರಾಂಕ್‌ಫರ್ಟಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೇ ನಿಬಿಡ ಕಾಡಿನಿಂದ ಸುತ್ತುವರೆದಿದೆ.

ಫ್ರಾಂಕ್‌ಫರ್ಟಿನ ವಿಮಾನ ನಿಲ್ದಾಣ ಜರ್ಮನಿಯಲ್ಲೆ ದೊಡ್ಡದಾದುದು. ಈಗಾಗಲೆ ಈ ವರುಷದ (Brand value ranking) ರೇಟಿಂಗ್‌ನಲ್ಲಿ ಜಗತ್ತಿನ 5ನೇ ಅತ್ಯುತ್ತಮ ವಿಮಾನ ನಿಲ್ದಾಣ ಎಂಬ ಮನ್ನಣೆ ಪಡೆದಿದೆ. ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯಾದಟ್ಟಣೆಯನ್ನು ಪರಿಗಣಿಸಿದರೆ 2022ರ ಮಾಹಿತಿಯ ಪ್ರಕಾರ ಯೂರೋಪಿನಲ್ಲಿ 6ನೇ ತೀರ ಬಿಡುವಿರದ (the busiest) ವಿಮಾನ ನಿಲ್ದಾಣವೆಂತಲೂ ಹೆಸರಾಗಿದೆ. ಸರಕು ಸಾಗಣೆಯ ಪ್ರಮಾಣವನ್ನು ಪರಿಗಣಿಸಿದರೆ ಯೂರೋಪಿನಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ಕಳೆದ ವರುಷ ಸುಮಾರು 20 ಲಕ್ಷ ಟನ್ನುಗಳಷ್ಟು ಸರಕು ಈ ವಿಮಾನ ನಿಲ್ದಾಣದ ಮೂಲಕ ಸಾಗಣೆಯಾಗಿದೆ. 200 ಕಿ.ಮೀ. ಪಾಸಲೆಯಲ್ಲಿ 4 ಕೋಟಿ ಜನ ಭಾರೀ ಸುಸಜ್ಜಿತ ಮತ್ತು ಸುವ್ಯವಸ್ಥಿತ ರೈಲು ಹಾಗೂ ಹೆದ್ದಾರಿ ರಸ್ತೆಗಳ ಮೂಲಕ ಸುಲಭದಲ್ಲಿ ಫ್ರಾಂಕ್‌ಫರ್ಟ್ ವಿಮಾನವನ್ನು ತಲುಪಬಹುದಾಗಿದೆ.

ಇದು 2022ರ ಮಾಹಿತಿ ಪ್ರಕಾರ ಜರ್ಮನಿಯ ಒಟ್ಟು ಜನಸಂಖ್ಯೆಯಾದ 8.44 ಕೋಟಿಗಳಲ್ಲಿ ಅರ್ಧಕ್ಕಿಂತ ಸ್ವಲ್ಪ ಕಮ್ಮಿ ಅಷ್ಟೆ! 98 ದೇಶಗಳ 300 ಊರುಗಳಿಗೆ ಫ್ರಾಂಕ್‌ಫರ್ಟಿನಿಂದ ವಿಮಾನಗಳು ಹಾರುತ್ತವೆ. ಜಗತ್ತಿನ ಮೊದಲ ವಿಮಾನಯಾನ ಸಂಸ್ಥೆ DELAG ಶುರುವಾದದ್ದೆ (1909 ರ ನವೆಂಬರ್ 16ರಂದು) ಫ್ರಾಂಕ್‌ಫರ್ಟಿನಲ್ಲಿ. ಅಂದು ರೆಕ್ಕೆಯ ವಿಮಾನಗಳು ಕಂಡುಹಿಡಿಯಲ್ಪಟ್ಟಿರಲಿಲ್ಲ. ಬದಲಾಗಿ ತೇಲುವ ಟೊಣಪ 'ಗಾಳಿಹಡಗು' ಅಥವಾ Airshipಗಳು ಬಳಕೆಯಲ್ಲಿದ್ದವು. ಹೀಗೆ ತನ್ನ ಬೆನ್ನಿಗೆ ಹಲವು ಅಗ್ಗಳಿಕೆಗಳನ್ನು ಸಿಕ್ಕಿಸಿಕೊಂಡಿರುವ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣ ಮೊನ್ನೆ ಮೊನ್ನೆ ಆಗಸ್ಟ್ 16ರ ಸಂಜೆ ಹಿಂದೆಂದೂ ಹೊಂದದ ನಿಸರ್ಗದ ನಾಟಕೀಯ ಅನುಭವವೊಂದಕ್ಕೆ ಪಕ್ಕಾಯಿತು. ಆ ದಿನ ಆದದ್ದೇನು?



ನೀರೋ ನೀರು

ಸಿಡಿಲು ಗುಡುಗು ಮಿಂಚು ಬಿರುಗಾಳಿಗಳ ಜೊತೆ ವಾಯುವ್ಯ ಜರ್ಮನಿಯ ರಾಜ್ಯಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆ ಬೀಳಬಹುದಾದ ಬಿರುಸು ಮಳೆಯ ಬಗ್ಗೆ ಜರ್ಮನಿಯ ಹವಾಮಾನ ಇಲಾಖೆ ಮುಂಚಿತವಾಗಿಯೇ ತಿಳಿಸಿತ್ತು. 'ತಿಳಿಸಿತ್ತು' ಎನ್ನುವುದಕ್ಕಿಂತ ಸುಮಾರಾಗಿ ಮುನ್ನೆಚ್ಚರಿಕೆ ನೀಡಿತ್ತು ಎನ್ನುವುದೇ ಸರಿಯಾದದ್ದು. ಕಳೆದೆರಡು ವರುಷಗಳಿಂದ ಜರ್ಮನಿ ವಿಪರೀತ ಮಳೆಗಳನ್ನು ಕಾಣುತ್ತಿದೆ. ಸಾಟಿಯಿಲ್ಲದ ನೆರೆಗಳ ಹೊಡೆತಕ್ಕೆ ಸಿಲುಕುತ್ತಿದೆ. ಈ ಹಿನ್ನೆಲೆಯಲ್ಲೆ 'ಮುನ್ನೆಚ್ಚರಿಕೆ' ಎಂದಿದ್ದು. ಆಗಸ್ಟ್ 19 ಮಾಮೂಲಿಗಿಂತ ಕಾರ್ಮೋಡಗಳು ಒಂದಿಷ್ಟು ಬಿರುಸು ಮಳೆಯನ್ನು ಫ್ರಾಂಕ್‌ಫರ್ಟಿನ ಮೇಲೆ ಹಾಗೆ ಸುಮ್ಮನೆ ಸುರಿದು ಹೋಗುವ ದಿನವಾದೀತು ಎಂದು ನಗರದ ಜನ ಭಾವಿಸಿದ್ದಿರಬೇಕು. ಸೂರ್ಯ ಮುಳುಗುತ್ತಿದ್ದಂತೆ ಮಳೆ ಶುರುವಾಯಿತು.

ಮೊದಮೊದಲು ಮಂದಗತಿಯಲ್ಲಿ ಬಿದ್ದು ಎಂಟು ಗಂಟೆಯ ನಂತರ ತೀವ್ರಗೊಂಡಿತು. ಜನರಿಗೆ ಏನು ಜರುಗುತ್ತಿದೆ ಎಂದು ಅರಿವಾಗುವ ಮುನ್ನವೇ ಫ್ರಾಂಕ್‌ಫರ್ಟ್ನ ಹಲವು ರಸ್ತೆ ಬೀದಿಗಳು ಹಠಾತ್ ನೆರೆಯಲ್ಲಿ ಕಣ್ಮರೆಯಾದವು. ಬೇಸ್‌ಮೆಂಟ್‌ಗಳು, ಅಂಡರ್‌ಗ್ರೌಂಡ್ ಪಾರ್ಕಿಂಗ್ ಗ್ಯಾರೇಜುಗಳು, ಸೆಲ್ಲಾರ್‌ಗಳು, ಅಂಡರ್‌ಪಾಸ್‌ಗಳಿಗೆಲ್ಲ ಕಣ್ಣೆವೆಯಿಕ್ಕುವುದರಲ್ಲಿ ನೀರು ನುಗ್ಗಿತು. ಹೇಗೂ ಸಜ್ಜಾಗಿದ್ದ ಅಗ್ನಿಶಾಮಕ ದಳಗಳು ನೂರಕ್ಕೂ ಹೆಚ್ಚು ರಕ್ಷಣಾ ಕಾರ್ಯಾಚರಣೆಗಳನ್ನು 24 ತಾಸಿನ ಒಳಗಾಗಿ ನಡೆಸುವ ಒತ್ತಡಕ್ಕೆ ಸಿಕ್ಕಿಕೊಂಡವು. ಹೇಳಬೇಕೆಂದರೆ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದ ಮೇಲೆ ಬಿದ್ದ ಮಳೆ ಈವರೆಗಿನ ಮಳೆಗಳಲ್ಲೆ ಅಂಜಿಕೆ ಹುಟ್ಟಿಸುವಷ್ಟು ವಿಶೇಷವಾಗಿತ್ತು, ವಿಪರೀತವಾಗಿತ್ತು.



5,681 ಎಕರೆಯ ಹರಹಿನಲ್ಲಿ ಹರಡಿಹೋಗಿರುವ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದ ಮೇಲೆಯೆ ಕವಿದಿದ್ದ ಕರಿಮೋಡಗಳ ದಟ್ಟಣೆ ಬರಿಯ ಕಣ್ನೋಟಕ್ಕೆ ದಿಗಿಲು ಹುಟ್ಟಿಸುವಂತಿತ್ತು. ಹಿಂದೆಂದೂ ಕಾಣದಂತಹ ಕೋಲ್ಮಿಂಚುಗಳು ಕಣ್ಣು ಕುರುಡಾಗಿಸುವ ಹೊಳಪಿನಿಂದ ಕೊರೈಸಿದವು. ಫ್ರಾಂಕ್‌ಫರ್ಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಆಗಸದಲ್ಲಿ 16ರ ರಾತ್ರಿ 08.40ರಿಂದ 09.40ರ ಒಂದು ತಾಸಿನ ಗಡುವಿನಲ್ಲಿ 25,289 ಕೋಲ್ಮಿಂಚುಗಳು ಹುಚ್ಚುಕೆರಳಿ ನರ್ತಿಸಿದವು. ಮಳೆ ಜೋರಾಗುತ್ತಿದ್ದಂತೆ ಹಾರುವ ಇಳಿಯುವ ವಿಮಾನಗಳಿಗೆ ಓಡುದಾರಿ(Runway)ಗಳೇ ಕಾಣದಾದವು. ಅವೆಲ್ಲ ಈಜುಕೊಳಗಳಾಗಿಬಿಟ್ಟಿದ್ದವು. ವಿಮಾನಗಳು ಓಡಿದವು ಎನ್ನುವುದಕ್ಕಿಂತ ತೇಲಿದವು ಎನ್ನುವುದೇ ಸರಿ. ಅರೆಮುಳುಗಿ ನಿಂತ ವಿಮಾನಗಳಿಂದ ಇಳಿದು ಬರಲು ಪ್ರಯಾಣಿಕರಿಗೆ ಸಾಧ್ಯವಾಗಲಿಲ್ಲ. ಏರಲು ಹೊರಟವರಿಗೆ ಟರ್ಮಿನಲ್‌ನಿಂದ ಹೊರಬರಲಾಗಲಿಲ್ಲ. ಹೊರಹಾರಬೇಕಿದ್ದ 90ಕ್ಕೂ ಹೆಚ್ಚು ವಿಮಾನಗಳ ಹಾರಾಟವನ್ನು ಅತಿ ಕಡಿಮೆ ಸಮಯದಲ್ಲಿ ರದ್ದುಗೊಳಿಸಲಾಯಿತು. ಬರಬೇಕಿದ್ದ 23 ವಿಮಾನಗಳನ್ನು ಜರ್ಮನಿಯಲ್ಲೆ ಬೇರೆ ವಿಮಾನ ನಿಲ್ದಾಣಗಳ ಕಡೆಗೆ ನಿರ್ದೇಶಿಸಲಾಯಿತು. ವಿಮಾನಗಳ ಒಟ್ಟಾರೆ ಹಾರಾಟ ನಿಯಂತ್ರಣವನ್ನು ಎರಡು ತಾಸುಗಳ ಕಾಲ ತಡೆಹಿಡಿಯಬೇಕಾಯಿತು.

ಹವಾಮಾನ ವೈಪರಿತ್ಯದ ಘೋರ ಪರಿಣಾಮಗಳು

ಹುಚ್ಚು ಮಳೆ ಹೆಚ್ಚುತ್ತಲೇ ಹೋಯಿತು. ವಿಮಾನಗಳು ನಿಲ್ಲುವ ಏಪ್ರನ್ ಪ್ರದೇಶದಲ್ಲಿ ತುಂಬಿದ ನೀರು ಏರುತ್ತ ಸಾಗಿ 'ನಾ ಬಂದೆ' ಎಂದು ಟರ್ಮಿನಲ್‌ಗಳಿಗೆ ನುಗ್ಗಿತು. ಅಲ್ಲಿ ನೆರೆದಿದ್ದ ಸಾವಿರಾರು ಪ್ರಯಾಣಿಕರು ಬೆಬ್ಬಳಿಸಿಹೋದರು. ಒಡೆದ ಟೈಟಾನಿಕ್ ಹಡಗಿಗೆ ಕಡಲ ನೀರು ನುಗ್ಗಿದ ಹಾಗೆ ಟರ್ಮಿನಲ್‌ಗಳು ತುಂಬಿಕೊಂಡರೆ ಮುಳುಗುವ ಹೆದರಿಕೆ ಪ್ರಯಾಣಿಕರ ಎದೆಯಲ್ಲಿ ಹೆಪ್ಪುಗಟ್ಟಿತು. ಟರ್ಮಿನಲ್‌ಗಳಿಂದ ನೀರು ಸಬ್‌ವೇಗೆ ಎಲಿವೇಟರ್‌ಗಳ ಮೂಲಕವೇ ಇಳಿಯಿತು! ಎಲಿವೇಟರ್‌ಗಳು ಕೆಲವು ಕಾಲ ತಡಸಲುಗಳಂತೆ ಕಂಗೊಳಿಸಿದವು. ಸಬ್‌ವೇ ರೈಲು ಬೋಗಿಗಳ ಬಾಗಿಲು, ಕಿಟಕಿ ಸಂದುಗಳಿಂದ ನೀರು ಹೊರಕ್ಕೆ ಸುರಿಯಿತು.

ಎಲ್ಲೆಲ್ಲೋ ನೀರು ಪುರುಸೊತ್ತಿಲ್ಲದೆ ಹರಿಯಿತು. ಹೊಟ್ಟೆಗೇನೂ ಸಿಕ್ಕದೆ ಪ್ರಯಾಣಿಕರು ಸಿಕ್ಕಸಿಕ್ಕ ಕಡೆ ಒರಗಿಕೊಂಡರು. ರಕ್ಷಿಸುವವರಂತೆ ನಟಿಸಿ ಮೋಟಾರ್‌ಬೋಟುಗಳಲ್ಲಿ ಯಾರು ಬೇಕಾದರು ಕಾವಲಿನ ಎಲ್ಲ ವ್ಯವಸ್ಥೆಗಳನ್ನು ಮುರಿದು ವಿಮಾನ ನಿಲ್ದಾಣಕ್ಕೆ ನುಗ್ಗಬಹುದಾಗಿತ್ತು. ರಕ್ಷಣಾ ಸಿಬ್ಬಂದಿ ಪ್ರಯಾಣಿಕರಷ್ಟೆ ಗೊಂದಲಕ್ಕೊಳಗಾಗಿದ್ದರು. ಎಲ್ಲಿ ಏನು ಮಾಡಬೇಕು ಎಂಬ ಗಲಿಬಿಲಿಯಲ್ಲಿ ಅತ್ತಿತ್ತ ಎಡತಾಕುತ್ತಿದ್ದರು. ಮಳೆಯ ನೀರು ತರಬಹುದಾದ ಎಲ್ಲ ಬಗೆಯ ಅಂಜಿಕೆಗಳು ನೆರೆಯ ರೂಪದಲ್ಲಿ ಒಗ್ಗೂಡಿಬಂದು ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣವನ್ನು ತಮ್ಮ ಹಿಡಿತಕ್ಕೆ ಪಡೆದಿದ್ದವು. ಜರ್ಮನಿ ಕಂಗಾಲಾಗಿ ಹೋಯಿತು.

ರಾತ್ರಿ 8 ರಿಂದ 10ರವರೆಗಿನ ಎರಡು ತಾಸುಗಳಲ್ಲಿ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದ ಪ್ರತೀ ಚದರ ಮೀಟರ್ ನೆಲದ ಮೇಲೆ 60 ಲೀಟರಿನಷ್ಟು ಮಳೆ ಸುರಿದಿತ್ತು. ಮಳೆ ನಿಲುಗಡೆಗೆ ಬಂದಾಗ ಒಟ್ಟು 58 ಮೀಟರಿನಷ್ಟು ಮಳೆ ಬಿದ್ದಿತ್ತು. ವರುಷಕ್ಕೆ ವಾಡಿಕೆಯ ಸರಾಸರಿ 727 ಮಿ.ಮೀ. ಅಥವಾ 28.6 ಇಂಚು ಮಳೆ ಪಡೆಯುವ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣವೆಲ್ಲಿ, 58 ಮೀಟರ್ ಮಳೆ ಪಡೆದ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣವೆಲ್ಲಿ! 80 ವರುಷಗಳ ಕಾಲ ಬೀಳಬೇಕಿದ್ದ ಮಳೆ ಎರಡು ತಾಸಿನಲ್ಲಿ ಶೇಕಡಾ 7,978 ರಷ್ಟು ಹೆಚ್ಚುವರಿಯಾಗಿ ಬಿದ್ದಿತ್ತು! ಮೋಡಗಳ ಅಣೆಕಟ್ಟು ಒಡೆದು ಧುಮ್ಮಿಕ್ಕಿದ ಮಳೆಯನ್ನು ಫ್ರಾಂಕ್‌ಫರ್ಟಿನಲ್ಲಿ ಹಿಂದೆಂದು ಯಾರೂ ಕಂಡಿರಲಿಲ್ಲ, ಕೇಳಿಯೂ ಇರಲಿಲ್ಲ. ಸುಸಜ್ಜಿತಗೊಂಡಿದ್ದ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣವನ್ನು ಸದ್ಯಕ್ಕೆ ಸರಿಪಡಿಸಲಾಗದಂತೆ ಸಾಧ್ಯವಿರುವ ಎಲ್ಲ ಹಾವಳಿಯನ್ನು ತಂದು ಸುರಿದ ಮಳೆ ಮಾರನೇ ಬೆಳಿಗ್ಗೆ ತಹಬಂದಿಗೆ ಬಂದರೂ ನೀರುಮಯ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡು ಇಡೀ ರಾತ್ರಿಯನ್ನು ಕಳೆದ ಪ್ರಯಾಣಿಕರ ಗುಂಡಿಗೆ ಬಡಿತ ಮಾತ್ರ ಬಹುಕಾಲ ತಹಬಂದಿಗೆ ಬಂದಿರಲಿಲ್ಲ. ತಂತ್ರಜ್ಞಾನ ಮತ್ತು ತಂತ್ರಗಾರಿಕೆಗಳನ್ನು ಅವುಗಳ ತುಟ್ಟತುದಿಯವರೆಗೆ ಬಳಸಿಕೊಂಡು ವಿಮಾನ ನಿಲ್ದಾಣವನ್ನೇನೊ ವೈರಿದೇಶಗಳ ಮಿಲಿಟರಿ ಪಡೆಗಳು ಮತ್ತು ಭಯೋತ್ಪಾದಕರ ದಾಳಿಗಳಿಂದ ಕಾಪಾಡಿಕೊಳ್ಳುವುದು ತೊಡಕಲ್ಲ. ಆದರೆ ಊಹೆಗೂ ನಿಲುಕದ ಮಳೆಯ ಬಿರುಸು, ಹೆಗ್ಗೂಳಿಗಳು ಗುಂಪುಗೂಡಿದಂತೆ ನುಗ್ಗಿ ಬರುವ ನೆರೆಯನ್ನು ತಡೆಯಲು ಯಾರಿಗೆ ಸಾಧ್ಯವಿದೆ? ನೆನಪಿರಲಿ, ಜಗತ್ತಿನಲ್ಲಿ ಈಗ ಸುರಕ್ಷಿತವೆನ್ನಬಹುದಾದ ಯಾವ ತಾಣವೂ ಉಳಿದಿಲ್ಲ.

ವಿಮಾನ ನಿಲ್ದಾಣಗಳಲ್ಲಿ ಸಾವಿರಾರು ಜೀವರಕ್ಷಕ ದೋಣಿಗಳು, ತೆಪ್ಪಗಳು ಮತ್ತು ಲೈಫ್ ಜಾಕೆಟ್ಟುಗಳನ್ನು ಆಪತ್ತಿಗಿರಲಿ ಎಂದು ಕೂಡಿಡುವ ಪರಿಪಾಟ ಇನ್ನುಮುಂದೆ ಶುರುವಾಗಬೇಕೇನೊ.

ಬೆಂಕಿಯೆ, ಕಾರಣ ಹೇಳಿ ಹೋಗು

ನಾವೀಗ ಅಮೆರಿಕಾದ ಆಡಳಿತಕ್ಕೆ ಐವತ್ತನೇ ರಾಜ್ಯವಾಗಿ ಸೇರ್ಪಡೆಗೊಂಡ ಹವಾಯಿಗೆ ತೆರಳೋಣ. ಹವಾಯಿ ಅಮೆರಿಕಾದ ಏಕೈಕ ನಡುಗಡ್ಡೆಗಳ ರಾಜ್ಯ. ಉಷ್ಣವಲಯವನ್ನು ಪ್ರತಿನಿಧಿಸುವ ಏಕೈಕ ರಾಜ್ಯ ಕೂಡಾ. ಉತ್ತರ ಅಮೆರಿಕಾ ಖಂಡದಿಂದ ಹೊರಗಿರುವ ರಾಜ್ಯವೂ ಹೌದು. ಅಮೆರಿಕಾದ ರಾಜಧಾನಿ ವಾಷಿಂಗ್‌ಟನ್ ಡಿ.ಸಿ.ಯಿಂದ ಬಹಳ ದೂರದಲ್ಲಿರುವ ರಾಜ್ಯವೂ ಹೌದು. ವಾಷಿಂಗ್‌ಟನ್ ಡಿ.ಸಿ. ಮತ್ತು ಹವಾಯಿಯ ರಾಜಧಾನಿ ಹೊನಲುಲು ನಡುವಿನ ಅಂತರ



ಪುಟ 14 ಕ್ಕೆ

ಎಂಬತ್ತು ವರುಷಕ್ಕಾಗುವ ಮಳೆ ಎರಡು ತಾಸಿನಲ್ಲಿ ಸುರಿದರೆ!.....

ಪುಟ 13 ರಿಂದ

7,752 ಕಿಲೊಮೀಟರ್‌ಗಳು. ಹವಾಯಿ ಎಂದರೆ ಮಳೆ ಬಿಸಿಲುಗಳ ನಡುವೆ ಕಂಗೊಳಿಸುವ ಹೇರಳ ಕಾಮನಬಿಲ್ಲುಗಳು, ಹಳದಿ ಬಿಳಿ ಪಾಟಲ ಬಣ್ಣಗಳ ಕಣಿಗಿಲೆ ಹೂಗಳ ಹಾರ, ಅನಾನಸ್ ಹಣ್ಣುಗಳು, ಹೆಂಗಳೆಯರ ಹುಲಾ ನಾಟ್ಯ, ಗಂಡಸರ ಅಲೋಹ ಅಂಗಿಗಳು, ಬಗೆಬಗೆ ಬಣ್ಣದ ಮರಳಿನ ಕಡಲ ತೀರಗಳು, ಕಡಲಿಗೆ ಲಾವಾ ಉಗುಳುವ ಬೆಂಕಿಬೆಟ್ಟಗಳು, ಹಿತವಾದ ಹವೆ ಹೀಗೆಲ್ಲ ನೆನಪಿಗೆ ಬರುತ್ತವೆ. ಹವಾಯಿಯ ನಡುಗಡ್ಡೆಗಳು ವರುಷದ



ಮಾವಿಯ ಕಾಡ್ಗಿಚ್ಚು ಆಧುನಿಕ ಅಮೆರಿಕಾದ ಚರಿತ್ರೆಯಲ್ಲೆ ಅತಿ ಭೀಕರ ಎಂಬ ಬಿರುದನ್ನು ಸಂಪಾದಿಸಿತು. ಮಾವಿ ನಡುಗಡ್ಡೆಯ ಅಂದಾಜು 35,000ದಷ್ಟು ಜನರನ್ನು ಅದು ತಟ್ಟಿತ್ತು. ಜನರಿಲ್ಲದ ಕಡೆಗಳಲ್ಲಿ ನಿಸರ್ಗಕ್ಕೆ ಸಾಕಷ್ಟು ಹಾನಿ ಮಾಡಿತ್ತು. 2,170 ಎಕರೆಯಷ್ಟು ನೆಲ ಬೆಂಕಿಯ ದಾಳಿಗೆ ರ್‍ರಗಾಗಿತ್ತು. ಆಗಸ್ಟ್ 27ರ ಸುದ್ದಿಯ ಪ್ರಕಾರ ಮಾವಿಯ ಒಲಿಂಡಾ ಮತ್ತು ಕುಲಾ ಎಂಬ ತಾಣಗಳಲ್ಲಿ ಕಾಡ್ಗಿಚ್ಚು ಇನ್ನೂ ಉರಿಯುತ್ತಿತ್ತಂತೆ.

ಎಲ್ಲ ಕಾಲದಲ್ಲೂ ಪ್ರವಾಸಿಗಳಿಂದ ಕಿಕ್ಕಿರಿದಿರುತ್ತವೆ. ಹಸಿರ ಚೆಲುವು, ನೆಮ್ಮದಿಗಳನ್ನು ಮೊಗೆದುಕೊಂಡು ಮಧುಚಂದ್ರದ ದಂಪತಿಗಳಿಗೆ ಅಚ್ಚುಮೆಚ್ಚು ಎನಿಸಿರುವ ಹವಾಯಿಗೂ ಹವಾಮಾನ ಬದಲಾವಣೆ ಈಗ ಹಲವು ಕಿರಿಕಿರಿಗಳನ್ನು ತಂದಿದೆ. ಈಗೀಗ ಬೇಸಗೆ ಸಹಿಸಲಾಗದಷ್ಟು ತಾಪ ದಾಖಲಿಸುವುದೂ ಅವುಗಳಲ್ಲಿ ಒಂದಾಗಿದೆ. ಮೆಲ್ಲಮೆಲ್ಲನೆ ಹವಾಯಿಯ ನಡುಗಡ್ಡೆಗಳಲ್ಲಿ ಬರಗಾಲ ಇಣುಕತೊಡಗಿದೆ.



ಹವಾಯಿಯ ಎರಡನೇ ದೊಡ್ಡ ನಡುಗಡ್ಡೆಯಾದ ಮಾವಿ ಆಗಸ್ಟ್ 8ನೇ ತಾರೀಕು ಇಡೀ ಜಗತ್ತಿನ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿತು. ಆ ದಿವಸ ಅಲ್ಲಿ ಉಲ್ಬಣಿಸಿದ ಕಾಡ್ಗಿಚ್ಚು ಹವಾಯಿಯ ಚರಿತ್ರೆಗೆ ಹೊಸ ಪಸುಗೆ ಬರೆಯಿತು. ಹಾಗೆ ನೋಡಿದರೆ ಒಮ್ಮೊಮ್ಮೆ ಬೇಸಗೆಯಲ್ಲಿ ಸಣ್ಣಪುಟ್ಟ ಕಾಡ್ಗಿಚ್ಚಿನ ಬೆಂಕಿ ಪ್ರಕರಣಗಳು ಹವಾಯಿಯಲ್ಲಿ ದಾಖಲಾಗುತ್ತವೆ. ಅವೆಲ್ಲವನ್ನು ಅಲ್ಲಿನ ಆಡಳಿತ ವ್ಯವಸ್ಥೆ ತಹಬಂದಿಗೆ ತರುತ್ತದೆ. ಹೆಚ್ಚೆಂದರೆ ಈ ಕಾಡ್ಗಿಚ್ಚುಗಳು ಒಣಹುಲ್ಲು ಮತ್ತು ಒಣಗಿದ ಪೊದೆಗಳನ್ನಷ್ಟೆ ಕಬಳಿಸುತ್ತವೆ. ಆದರೆ ಆಗಸ್ಟ್ 8 ರಂದು ನಿಯಂತ್ರಣದ ಎಲ್ಲ ಮಿತಿಗಳನ್ನು ಮೀರಿ ಶುರುವಾದ ಕಾಡ್ಗಿಚ್ಚು ಇಷ್ಟಕ್ಕೆಲ್ಲ ಸೀಮಿತಗೊಂಡಿರಲಿಲ್ಲ. ಮನುಷ್ಯರನ್ನೂ ಒಳಗೊಂಡು ಅವರು ನಿರ್ಮಿಸಿದ್ದೆಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಮಾವಿ ನಡುಗಡ್ಡೆಯ ಮುಖ್ಯ ನಗರ ಲಹೈನಾವನ್ನು ಶೇಕಡಾ 95ರಷ್ಟು ಸುಟ್ಟುಹಾಕಿತು.

ಲಹೈನಾದ ಕಾಡ್ಗಿಚ್ಚಿಗೆ ಮುನ್ನ 'ಡೋರಾ' ಹೆಸರಿನ ನಾಲ್ಕನೇ ಪಂಗಡ(category 4)ದ ಉಷ್ಣವಲಯದ ಸೈಕ್ಲೋನ್ ಒಂದು ಹವಾಯಿಯ ದಕ್ಷಿಣಕ್ಕೆ 1,100 ಕಿ.ಮೀ. ದೂರದಲ್ಲಿ ಪಶ್ಚಿಮದೆಡೆಗೆ ಹಾದುಹೋಗುತ್ತಿತ್ತು. ಅದರ ಗಾಳಿತೋಳುಗಳು ಹವಾಯಿಯ ನಡುಗಡ್ಡೆಗಳ ಮೇಲೂ ಬೀಸಿ ಹೋದವು. ಆಗಸ್ಟ್ 7ರ ಸಂಜೆ ಹಾಗೆ ಹಾದು ಹೋಗುವಾಗ ಲಹೈನಾ ನಗರದ ಒಂದೆಡೆ ದೊಡ್ಡ ಮರವೊ ಮತ್ತೇನೊ ಪವರ್ ಲೈನ್ ಮೇಲೆ ಕುಸಿದು ಬಿದ್ದು ಕಣ್ಣು ಕುರುಡಾಗುವಂತೆ ಬೆಳಕು ಕೊರೈಸಿ ಬೆಂಕಿ ಹೊತ್ತಿಕೊಂಡಿತು. ಈ ಪ್ರಕರಣವನ್ನು ಸುತ್ತಮುತ್ತಲಿನವರಷ್ಟೆ ಗಮನಿಸಿದ್ದರು. ಇದು ಬರಿಯ ಬಿರುಗಾಳಿಯ ಕುಚೇಷ್ಟೆ ಎಂದು ಸುಮ್ಮನಾದರು. ಆದರೆ ಗಾಳಿ ಬಿರುಸಾದಂತೆ ಅದು ನಡುಗಡ್ಡೆಯ ಹಲವು ಕಡೆ ವಿದ್ಯುತ್ ಕಂಬಗಳನ್ನು ಮತ್ತು ಪವರ್‌ಗ್ರಿಡ್ ತಂತಿಗಳನ್ನು ನೆಲ ಕಚ್ಚಿಸಿತ್ತು.

ಗಾಳಿಯ ಹುಯಿಲಿನ ವೇಳೆ ವಿದ್ಯುತ್ ಸಂಪರ್ಕವನ್ನು ಕಡಿದಿರಲಿಲ್ಲವಾದ್ದರಿಂದ ಷಾರ್ಟ್ ಸರ್ಕ್ಯೂಟ್ ಆಗಿ ಹಲವು ಕಡೆ ಬೆಂಕಿ ಹೊತ್ತಿಕೊಂಡಿತು. ಒಂದು ರಾತ್ರಿ ಕಳೆಯುವುದರೊಳಗಾಗಿ ಸಾಕಷ್ಟು ವ್ಯಾಪಿಸಿ ಕಾಡ್ಗಿಚ್ಚಿನ ಸ್ವರೂಪ ಪಡೆದ ಬೆಂಕಿ ಆಗಸ್ಟ್ 8ರ ಮುಂಜಾನೆ ಲಹೈನಾ ನಗರದ ಮೇಲೆ ಅಗತುಕೊಂಡಿತು. ನಡುಹಗಲಿನ ಹೊತ್ತಿಗೆ ದಟ್ಟ ಹೊಗೆ ಕವಿದು, ಉರಿಯ ಕಾವು ತಟ್ಟಿದಾಗಲಷ್ಟೆ ಜನರಿಗೆ ಪರಿಸ್ಥಿತಿಯ ಗಂಭೀರತೆ ಅರಿವಾದದ್ದು. ಆದರೆ ಸ್ಥಳೀಯ ಆಡಳಿತ ವ್ಯವಸ್ಥೆ ಕಾರ್ಯಾಚರಣೆಗೆ ಇಳಿಯಲು ತಡವಾಗಿ ಹೋಗಿತ್ತು. ಬೆಂಕಿ ಹರಡುವ ವೇಗ ಕಂಡು ಜನ ಬೆಕ್ಕಸಬೆರಗಾದರು.

ಬಿರುಸು ಗಾಳಿಯ ನೆರವು ಪಡೆದು ನಿಮಿಷಕ್ಕೆ ಒಂದೂವರೆ ಕಿ.ಮೀ.ನಷ್ಟು ವೇಗದಲ್ಲಿ ಬೆಂಕಿ ಹಬ್ಬಿಹೋದುದನ್ನು ಲೆಕ್ಕಾಚಾರವೊಂದು ದಾಖಲಿಸಿದೆ. ಬೆಂಕಿಯ ತಾಪ ಸಾವಿರ ಡಿಗ್ರಿ ಸೆಲ್ಸಿಯಸ್ಸಿಗೇರಿತ್ತು! ಕಾಂಕ್ರಿಟ್, ಆಸ್ಬೆಸ್ಟಾಸ್ ಮತ್ತು ಲೋಹದ ವಸ್ತುಗಳ ಹೊರತಾಗಿ ಉಳಿದೆಲ್ಲವೂ ಈ ತಾಪದಲ್ಲಿ ಉರಿದು ಹೋದವು. ಗ್ಯಾಸ್ ಸ್ಟೇಷನ್‌ಗಳು ಮತ್ತು ರಸ್ತೆಗಳಲ್ಲಿ ನಿಲ್ಲಿಸಿದ್ದ ಕಾರುಗಳು ಪುಟ್ಟ ಬಾಂಬ್‌ಗಳು ಸಿಡಿದಂತೆ ಸಿಡಿದವು. ಮುನ್ಸೂಚನೆ ಮತ್ತು ಮುನ್ನೆಚ್ಚರಿಕೆ ಇರಲಿಲ್ಲವಾದ್ದರಿಂದ ಜನರಿಗೆ ಹೊಗೆ ಮತ್ತು ಕಾವಿಲ್ಲದ ತಾವುಗಳಿಗೆ ಓಡಿಹೋಗಿ ಜೀವ ಉಳಿಸಿಕೊಳ್ಳಲು ಸಮಯವೇ ಸಿಗಲಿಲ್ಲ. ನೂರಕ್ಕೂ ಹೆಚ್ಚು ಮಂದಿ ನಿವಾಸಿಗಳು ಮತ್ತು ಪ್ರವಾಸಿಗರು ಸತ್ತರು. ಸಾವಿರಕ್ಕೂ ಹೆಚ್ಚು ಮಂದಿ ನಾಪತ್ತೆಯಾದರು. ಗಳಿಗೆಗಳಿಗೆಗೂ ಏರುತ್ತಿದ್ದ ಕಾವಿನಿಂದ ಮತ್ತು ಗಾಳಿ ಹೊತ್ತು ತರುತ್ತಿದ್ದ ಕಿಡಿ ಹಾಗೂ ಕೆಂಡಗಳ ಹೊನಲಿನಿಂದ ಬಚಾವಾಗಲು ಸಾವಿರಾರು ಮಂದಿ ಕಡಲ ತಡಿಗೆ ಓಡಿ ನೀರಿಗೆ ಜಿಗಿದರು. ನೀರಿನಲ್ಲಿ ಮುಳಗೇಳುತ್ತ ಜೀವ ಉಳಿಸಿಕೊಂಡರು.

ಕಡಲಿಗೂ ಕೆನ್ನಾಲಿಗೆಗಳು ಬೀಸಿಬರತೊಡಗಿದಾಗ ಕರಾವಳಿ ಕಾವಲುಪಡೆಗಳು ಜನರನ್ನು ದೂರ ಒಯ್ಯಬೇಕಾಯಿತು. ಇತ್ತ ಕಾರುಗಳಲ್ಲಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದವರು ತಾಸುಗಟ್ಟಲೆ ಟ್ರಾಫಿಕ್ ಜಾಮ್‌ನಲ್ಲಿ ಸೆರೆಯಾದರು. ಹೊರವಲಯದಲ್ಲಿ ಚೊಕ್ಕಟವಾದ ಗಾಳಿ ಅರಸಿ ಕಾರಿನಿಂದ ಹೊರಗೋಡಿದವರು ಹೇಗೋ ಬದುಕಿದರು. ಕಾರಲ್ಲೇ ಉಳಿದವರು ಉಸಿರುಗಟ್ಟಿ ಅಸುನೀಗಿದರು. ಕಡುಗಪ್ಪು ಹೊಗೆಯಲ್ಲಿ ಮುಖಗಳನ್ನು ಗುರುತಿಸುವುದೇ ತ್ರಾಸವಾಗಿತ್ತು. ಮುಂದಿನ ಹಲವು ದಿನಗಳವರೆಗೂ ಬೆಂಕಿಯ ಆಟಾಟೋಪ ಜರುಗಿಯೇ ಇತ್ತು. 2,200ಕ್ಕೂ ಹೆಚ್ಚು ಕಟ್ಟಡಗಳು ಕರಕಲಾದವು. ಸುಟ್ಟಕಾರುಗಳ ಸಂಖ್ಯೆಯೇನು ಕಮ್ಮಿಯಿರಲಿಲ್ಲ. ಸಾಕುಪ್ರಾಣಿಗಳಿಗೇನಾಯಿತು ಎಂದು ನೋಡುವಷ್ಟು ಪುರುಸೊತ್ತು ಬಹಳಷ್ಟು ಜನಕ್ಕೆ ಸಿಗಲೇ ಇಲ್ಲ. ಅಮೆರಿಕಾ ಮಿಲಿಟರಿಯಲ್ಲಿ ಹಲವು ವರುಷ ಸೇವೆ ಸಲ್ಲಿಸಿ ಜಗತ್ತಿನ ಹಲವೆಡೆ ಯುದ್ಧಗಳಲ್ಲಿ ಪಾಲ್ಗೊಂಡು ನಿವೃತ್ತಿಯ ನಂತರ ಲಹೈನಾದಲ್ಲಿ ನೆಲೆಸಿರುವ ಡೇವಿಡ್ ತಾನು ಯುದ್ಧಭೂಮಿಯಲ್ಲೂ ಈಪಾಟಿ ಭಯಾನಕ ನೋಟಗಳನ್ನು ಕಂಡಿಲ್ಲವೆಂದರು.

ಬೆಂಕಿಯಿಂದ ಬದುಕುಳಿದವರ ಒಂದೇ ದೂರೆಂದರೆ ಬೆಂಕಿ ಹಬ್ಬುವ ಮುನ್ನ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದವರು ಯಾವುದೇ 'ಫೈರ್ ಅಲಾರಂ' ಅಥವಾ ಸೈರೆನ್ ಅನ್ನು ಕೂಗಿಸದೆ ಇದ್ದದ್ದು. ಹವಾಯಿಯಲ್ಲಿ ಜಗತ್ತಿನಲ್ಲೆ ಅತ್ಯುತ್ತಮ ಎನ್ನಬಹುದಾದ ಕಾಡ್ಗಿಚ್ಚೂ ಸೇರಿದಂತೆ ನೈಸರ್ಗಿಕ ವಿಪತ್ತುಗಳ ಬಗ್ಗೆ ಮುನ್ನೆಚ್ಚರಿಕೆ ನೀಡಬಲ್ಲ, ಕೆಲವೇ ವರುಷಗಳ ಹಿಂದೆ ಅಳವಡಿಸಿದ ತಾಂತ್ರಿಕ ವ್ಯವಸ್ಥೆ ಚಾಲ್ತಿಯಲ್ಲಿದೆ. ಹಲವರ ಅಭಿಪ್ರಾಯದಂತೆ ಚುರುಕು ಕ್ರಮ ಕೈಗೊಳ್ಳಬೇಕಿದ್ದ ಆಡಳಿತದ ಮಂದಿಯೆ ಸ್ವತಃ ಬೆಂಕಿಯ ಹಬ್ಬುವ ವೇಗ ಮತ್ತು ತೀವ್ರತೆಯನ್ನು ಕಂಡು ದಂಗುಬಡಿದು ಹೋಗಿದ್ದರು. ಬೆಂಕಿ ಆರಿಸುವ ತಂಡಗಳಲ್ಲಿದ್ದವರಲ್ಲೆ ಹಲವರು ಆಘಾತಕ್ಕೆ ಒಳಗಾಗಿದ್ದರು. ಹವಾಮಾನ ಬದಲಾವಣೆಯ ಈ ದಿನಗಳಲ್ಲಿ ನಿಸರ್ಗದ ಶಕ್ತಿಗಳನ್ನು ನಾವಿನ್ನೂ ಪೂರ್ತಿ ಗ್ರಹಿಸಿಲ್ಲವೆಂಬುದನ್ನು ಈ ಬೆಳವಣಿಗೆಯಿಂದ ತಿಳಿಯಬಹುದಾಗಿದೆ. ಹವಾಯಿಯಲ್ಲಿ ಅಮೆರಿಕಾ ನೌಕಾಪಡೆಯ ಹದಿನಾಲ್ಕು ನೆಲೆಗಳಿವೆ. ಅವುಗಳ ಹೆಲಿಕಾಪ್ಟರ್‌ಗಳು ದೊಡ್ಡ ಪ್ರಮಾಣದಲ್ಲಿ ಬೆಂಕಿ ಆರಿಸುವ ಕಾರ್ಯಾಚರಣೆಗೆ ಇಳಿದರೂ ಕಡೆಗೆ ಅವೂ ಸೋಲೊಪ್ಪಬೇಕಾಯಿತು. ಎಂತಹ ಶಕ್ತಿಶಾಲಿ ಮಿಲಿಟರಿಯೂ ನಿಸರ್ಗದೆದುರು ನಿರುಪಯೋಗಿ ಅನ್ನುವುದನ್ನು ಮತ್ತೆ ಮತ್ತೆ ಹೇಳಲು ಬಯಸುವೆ.

ಆಗಸ್ಟ್ ಬೇಸಗೆಯ ತಿಂಗಳು. ಹಲವು ವರುಷಗಳಿಂದ ಆಗಸ್ಟಿನಲ್ಲಿ ತಾಪ ಹೆಚ್ಚಿ ಹಠಾತ್ ಬರಗಾಲಗಳು ಹವಾಯಿಯಲ್ಲಿ ಕಾಣಿಸಿಕೊಳ್ಳುತ್ತವೆ. ಒಣಗಿದ ದಟ್ಟ ಪೊದೆ ಹುಲ್ಲುಗಳು, ಗಿಡಗಳು ಹೊತ್ತಿ ಉರಿಯಲು ಬೇಕಾದ ಉರುವಲಾಗುತ್ತವೆ. ವಾತಾವರಣದ ಅಸಹಜ ತಾಪ ಮತ್ತು ನೆಲದ ಒಣತನ ಬೆಂಕಿಯ ಆಡುಂಬೊಲಕ್ಕೆ ಈ ಬಾರಿ ಹೇಳಿಮಾಡಿಸಿದಂತಿತ್ತು. ಸಾಲದ್ದಕ್ಕೆ ಹವಾಮಾನ ಬದಲಾವಣೆಯ ಒಂದು ಪರಿಣಾಮವಾದ ಡೋರಾ ಸೈಕ್ಲೋನ್ ಹವಾಯಿಯ ಮೇಲೆ ಬೀಸಿ ಹೋಗುವಾಗ ಗಾಳಿಯ ತೇವಾಂಶವನ್ನು ತನ್ನೊಂದಿಗೆ ಒಯ್ದು ಮಾವಿ ನಡುಗಡ್ಡೆಯ ವಾತಾವರಣವನ್ನು ಮತ್ತಷ್ಟು ಒಣಗಿಸಿತ್ತು. ಬೆಂಕಿಗೆ ಹೀಗೊಂದು ಕಣವನ್ನು ನಿಸರ್ಗ ಸಜ್ಜುಗೊಳಿಸಿಟ್ಟಿತ್ತು. ಈ ಸಜ್ಜಿಕೆಗೆ ಮನುಷ್ಯರ ಮೈಮರೆವಿನ ಅಸಡ್ಡೆಯು ಸೇರಿತು.

'ಡೋರಾ' ಬಿರುಗಾಳಿಗೆ ಸಿಕ್ಕಿ ವಿದ್ಯುತ್ ತಂತಿಗಳು ನೆಲಕ್ಕೆ ಕಂಬದೊಂದಿಗೆ ಬಿದ್ದಾಗ ಇಲ್ಲವೆ ವಿದ್ಯುತ್ ತಂತಿಗಳ ಮೇಲೆ ಮರಗಿಡಗಳು ಬೇರುಕಿತ್ತು ಮಲಗಿದಾಗಲೆ ವಿದ್ಯುತ್ ಸರಬರಾಜು ಮಾಡುವ 'ಹವಾಯಿ ಎಲೆಕ್ಟ್ರಿಕ್ ಕಂಪೆನಿ' ಪವರ್‌ಗ್ರಿಡ್‌ನ ವಿದ್ಯುತ್ ಸಂಪರ್ಕವನ್ನು ಕಡಿದಿದ್ದರೆ ಮಾವಿ ಕಾಡ್ಗಿಚ್ಚನ್ನು ತಪ್ಪಿಸಬಹುದಾಗಿತ್ತು ಎಂಬ ವಾದವೂ ಇದೆ. ಯಾರಿಗೆ ಗೊತ್ತು, ಕಂಪೆನಿಯ ಸಿಬ್ಬಂದಿಯೂ ಬೆಂಕಿಯ 'ದೆಯ್ಯಗುಣಿತ'ವನ್ನು ಕಂಡು ಕೈಕಾಲಾಡದಂತೆ ಕಂಗೆಟ್ಟುಹೋಗಿರಬೇಕು. ಅಂತೂ ಬೆಂಕಿ ತೊಡೆತಟ್ಟಿತು. ಗೆದ್ದು ಗಹಗಹಿಸಿ ತೆರಳಿತು. ಈ ಬರಹ ಕೊನೆಗೊಳ್ಳುವವರೆಗೂ ಹವಾಯಿಯ ಕಾಡ್ಗಿಚ್ಚಿಗೆ ನಿರ್ದಿಷ್ಟ ಕಾರಣವನ್ನು ಅಲ್ಲಿನ ಆಡಳಿತಗಳು ಇನ್ನೂ ಹುಡುಕುತ್ತಲೇ ಇರುವ ಸುದ್ದಿ ಬಂದಿದೆ. ಮರೆಯಬಾರದ್ದು, ಮಾವಿಯ ಕಾಡ್ಗಿಚ್ಚಿನಲ್ಲಿ ಕಳೆದುಕೊಂಡದ್ದನ್ನೆಲ್ಲ ಮತ್ತೆ ನಿರ್ಮಿಸಲು ಅಮೆರಿಕಾ ಸರ್ಕಾರ 55,000 ಕೋಟಿ ಡಾಲರುಗಳನ್ನು ವೆಚ್ಚಮಾಡಬೇಕಿದೆಯಂತೆ.

ಸದ್ಯ ಮಾವಿಯ ಕೌಂಟಿ ಆಡಳಿತ 'ಹವಾಯಿ ಎಲೆಕ್ಟ್ರಿಕ್ ಕಂಪೆನಿ'ಯ ಅಸಡ್ಡೆಯ ವಿರುದ್ಧ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದೆ. ಈ ಮೊಕದ್ದಮೆ ತರ್ಕದ ಒಂದು ತುದಿಯನ್ನು ತಲುಪುವ ಹೊತ್ತಿಗೆ ಹವಾಯಿಯ ಮೇಲೆ ಅದೆಷ್ಟು ಬಿರುಗಾಳಿಗಳು ಬೀಸಿಹೋಗುತ್ತವೆಯೊ, ಅದೆಷ್ಟು ಬರಗಾಲಗಳು ಕವುಚಿಕೊಳ್ಳುತ್ತವೆಯೊ ಗೊತ್ತಿಲ್ಲ. ಅಧಿಕಾರದಲ್ಲಿರುವವರಿಗೆ ಯಾವ ಕಾಲಕ್ಕೆ ಹವಾಮಾನ ಬದಲಾವಣೆ ಅರಿವಾದೀತು ಎಂದು ಯಾವ ಕೋರ್ಟು ಮುಂದೆ ಕೇಳಬೇಕಿದೆಯೊ ಗೊತ್ತಿಲ್ಲ. ಆಗಸ್ಟ್ 21ರಂದು ಅಮೆರಿಕಾದ ಅಧ್ಯಕ್ಷ ಜೋಬಿಡೆನ್ ಅದಾಗಲೆ ತಡವಾಗಿದ್ದರೂ ಮಾವಿಗೆ ಭೇಟಿಕೊಟ್ಟರು. ಕಾಡ್ಗಿಚ್ಚಿನ ಸಂತ್ರಸ್ತರನ್ನು ಸಂತೈಸುವ ಭಾಷಣದಲ್ಲಿ 2004ರಲ್ಲಿ ತಮ್ಮ ಮನೆ kitchen fireನಲ್ಲಿ ಸುಟ್ಟುಹೋದುದನ್ನು ನೆನೆಸಿಕೊಂಡರು. ಬೆಂಕಿ ಅನಾಹುತದ ಅರಿವು ತನಗೂ ಇದೆ ಎಂಬುದನ್ನು ತೋಡಿಕೊಳ್ಳುವ ಭರದಲ್ಲಿ ಮಾವಿಯ ಕಾಡ್ಗಿಚ್ಚಿನ ಸ್ವರೂಪವನ್ನು ತಮ್ಮನುಭವದ ಪುಟ್ಟ ಬೆಂಕಿ ಪ್ರಕರಣವೊಂದಕ್ಕೆ ತಳುಕು ಹಾಕಿದರು. ಅವರ ಈ ಮಾತುಗಳನ್ನು ಕೇಳಿದ ಲಹೈನಾದ ಸಂತ್ರಸ್ತರು 'ಬಿಡೆನ್ ಅವರಿಗೆ ಹಾಸ್ಯಪ್ರಜ್ಞೆ ಕಮ್ಮಿ' ಎಂದರು. ಎಲ್ಲ ದೇಶಗಳ ನಾಯಕರ ಆಲೋಚನಾ ಲಹರಿ ಹೀಗೆಯೆ ಸಾಗುವುದೇನೊ ಎಂಬ ಅನುಮಾನ ನನಗೆ. ಸರ್ಕಾರಗಳಿಗೆ ಹವಾಮಾನ ಬದಲಾವಣೆಯ ಬಿಸಿ ಇನ್ನೂ ತಗುಲಿಲ್ಲವೆಂದರೆ ಏನನ್ನುವುದು? ಇವರೆಲ್ಲ ಎಚ್ಚೆತ್ತು ಜಗತ್ತನ್ನು ಯಾವಾಗ ಕಾಪಾಡುತ್ತಾರೆ?

ಭಾರತದ ಬಿಸಿಗೊಂಡ ತಿಂಗಳು: ಆಗಸ್ಟ್, 2023

ನಮ್ಮ ಒಕ್ಕೂಟ ಸರ್ಕಾರ ಕಳೆದ ಕೆಲವು ದಿನಗಳಲ್ಲಿ ತೆಗೆದುಕೊಂಡ ತೀರ್ಮಾನಗಳ ಕಡೆ ಗಮನ ಹರಿಸೋಣ. ಜಗತ್ತಿನಲ್ಲಿ ಅತಿಹೆಚ್ಚು ಅಕ್ಕಿ ರಫ್ತು ಮಾಡುವ ದೇಶ ನಮ್ಮದಾಗಿದ್ದರೂ ಸರ್ಕಾರ ಈಗ ಅಕ್ಕಿ ರಫ್ತನ್ನು ಕಡಿತಗೊಳಿಸಿದೆ. ಈರುಳ್ಳಿ ರಫ್ತಿನ ಮೇಲೆ ಶೇಕಡಾ 40ರಷ್ಟು ಸುಂಕ ಏರಿಸಿದೆ. ಬೇಳೆಕಾಳುಗಳ ಆಮದಿನ ಮೇಲೆ ಸುಂಕವನ್ನು ತೆರವುಗೊಳಿಸಿದೆ. ಸದ್ಯದಲ್ಲೆ ಸಕ್ಕರೆಯ ರಫ್ತನ್ನೂ ನಿಷೇಧಿಸುವ ಸಾಧ್ಯತೆ ಇದೆ. ಯಾಕೆ ಒಕ್ಕೂಟ ಸರ್ಕಾರ ಹೀಗೆಲ್ಲ ಮಾಡಿದೆ ಅಥವಾ ಮಾಡಹೊರಟಿದೆ. ಉತ್ತರ ಸರಳ, ಮಾನ್ಸೂನ್ ಮಳೆಯ ತೀವ್ರತೆ ತುಟ್ಟತುದಿ ತಲುಪಬೇಕಿದ್ದ ಆಗಸ್ಟ್ ತಿಂಗಳು ಈ ವರುಷ ಬಹಳ ಬಿಸಿಯಾದ ಒಣ ತಿಂಗಳೆಂದು ಸೆಪ್ಟೆಂಬರ್ ಬರುವ ಮುನ್ನವೆ ದಾಖಲಾಗಿದೆ. ಕಳೆದ 123 ವರುಷಗಳಲ್ಲಿ, 1901ರಲ್ಲಿ ದೇಶದಾದ್ಯಂತ ಮಳೆಯ ದಾಖಲಾತಿ (nation-wide recording) ಮೊದಲ ಬಾರಿ ಶುರುವಾದ ನಂತರ ಆಗಸ್ಟ್ ಇಷ್ಟೊಂದು ಒಣಗಿದ ದಿನಗಳನ್ನು ಕಂಡದ್ದು ದಾಖಲೆಯ ಕಡತಕ್ಕೆ ಬಂದಿರಲಿಲ್ಲ.

ಮಾನ್ಸೂನ್ ಆಗಸ್ಟಿನಲ್ಲಿ ಪಲಾಯನ ಮಾಡುತ್ತಿದ್ದಂತೆ ಮುಂಬರುವ ದಿನಗಳಲ್ಲಿ ಫಸಲಿಲ್ಲದೆ ಕೊರತೆ ಎದುರಿಸಬಹುದಾದ ಆಹಾರಧಾನ್ಯ, ಬೇಳೆಕಾಳು, ಅಡುಗೆಎಣ್ಣೆ ಮತ್ತಿತರ ಅತ್ಯಗತ್ಯ ಅಡುಗೆಮನೆ ಪದಾರ್ಥಗಳ ಆಮದು ರಫ್ತುಗಳನ್ನು ಒಕ್ಕೂಟ ಸರ್ಕಾರವು ತನ್ನ ಹಿಡಿತಕ್ಕೆ ತೆಗೆದುಕೊಂಡು ಅವುಗಳ ಸುಲಭ ಲಭ್ಯತೆಗೆ ಮತ್ತು ಖರೀದಿದರ ಮಿತಿಮೀರಿ ಏರದಂತೆ ತಡೆಯುವ ಪೂರಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದೆಲ್ಲ ಸರಿಯೆ. ಆದರೆ ಸಾಗುವಳಿ ಕೆಲಸಗಳು ಹವಾಮಾನದ ಅತಿರೇಕಗಳಿಗೆ ಸಿಲುಕದಂತೆ ತಡೆಯಲು ಅದು ಏನು ಮಾಡಬಹುದು, ಬಹುಶಃ ಏನೂ ➚

ಡಾಲರ್ ಎದುರು 83 ಕ್ಕೆ ಕುಸಿದ ರೂಪಾಯಿ ಮೌಲ್ಯ.... ಪುಟ 11 ರಿಂದ

ಅಮೆರಿಕದ ಡಾಲರ್ ಎದುರು ಪಾಕಿಸ್ತಾನದ ರೂಪಾಯಿ 2014 ರಲ್ಲಿ 101 ಇತ್ತು, 2023ರಲ್ಲಿ 280 ಇದೆ. ಬಾಂಗ್ಲಾದೇಶದ ಕರೆನ್ಸಿ ಟಾಕ 2014 ರಲ್ಲಿ 78 ಇತ್ತು, 2023 ರಲ್ಲಿ 110 ಇದೆ. ನೇಪಾಳದ ರೂಪಾಯಿ 2014 ರಲ್ಲಿ 97 ಇತ್ತು, 2023 ರಲ್ಲಿ 132 ಇದೆ. ಈ ಮೂರು ನೆರೆಯ ದೇಶಗಳೂ ವಿಶ್ವ ವಾಣಿಜ್ಯ ಸಂಸ್ಥೆಯ ಷರತ್ತುಗಳನ್ನು ಅಂದರೆ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ವೇಗವಾಗಿ ಜಾರಿಗೆ ತರುತ್ತಿವೆ. ಇದರ ಪರಿಣಾಮವೇ ಈ ದೇಶಗಳ ಕರೆನ್ಸಿ ಮೌಲ್ಯಗಳ ಕುಸಿತಕ್ಕೆ ಪ್ರಮುಖ ಕಾರಣ.

ಜನರಲ್ಲಿ ಅಚ್ಛೇ ದಿನಗಳ ಭರವಸೆ ಹುಟ್ಟಿಸಿ, ವಿಶ್ವ ನಾಯಕರಾಗಲು ಹೊರಟಿರುವ ಮೋದಿಯವರೂ ಇಂತವೇ ಜನವಿರೋಧಿ, ದೇಶವಿರೋಧಿ ಎಲ್.ಪಿ.ಜಿ. ನೀತಿಗಳನ್ನು ಭಾರತದಲ್ಲಿ ಅಳವಡಿಸಿ ಕೊಂಡಿರುವುದೇ ನಮ್ಮ ರೂಪಾಯಿ ಮೌಲ್ಯ ಈ ಪ್ರಮಾಣದಲ್ಲಿ ಕುಸಿಯಲು ಕಾರಣವಾಗಿದೆ. ಇದರ ನಡುವೆಯೂ ಭಾರತದ ಆರ್ಥಿಕತೆ ಇನ್ನೂ ಈ ಪ್ರಮಾಣದಲ್ಲಿ ಭದ್ರವಾಗಿ ಉಳಿದಿರಲು ಕಾರಣ, ಮತ್ತು 2008ರ ಜಗತ್ತಿನ ಆರ್ಥಿಕತೆ ಕುಸಿತದ ಹೊಡೆತಕ್ಕೆ ಬಗ್ಗದೇ ಇರಲು ಕಾರಣ, ನಮ್ಮ ದೇಶದ ದೊಡ್ಡ ದೊಡ್ಡ ಉತ್ಪಾದನಾ ಉದ್ಯಮಗಳು, ವಿವಿಧ ಬಗೆಯ ಸೇವೆಗಳು, ಹಣಕಾಸು ಈ ಎಲ್ಲಾ ವಲಯಗಳಲ್ಲಿ ಬಹುತೇಕ ಉದ್ಯಮಗಳು ಸಾರ್ವಜನಿಕ ಒಡೆತನದಲ್ಲಿ ಇರುವುದರಿಂದ ಮತ್ತು ರಿಸರ್ವ್ ಬ್ಯಾಂಕಿನಲ್ಲಿ ಮೀಸಲು ನಿಧಿ ಹೆಚ್ಚಾಗಿದ್ದುದರಿಂದ ಮತ್ತು ಸರ್ಕಾರಿ ಗೋದಾಮುಗಳಲ್ಲಿ ಸಾಕಷ್ಟು ಆಹಾರ ಧಾನ್ಯಗಳ ಸಂಗ್ರಹಣೆ ಇದ್ದುದರಿಂದ ಮಾತ್ರ. ಮತ್ತು ಈ ಎಲ್ಲಾ ಸಾರ್ವಜನಿಕ ಕ್ಷೇತ್ರಗಳ ರಕ್ಷಣೆಗೆ ಪಣತೊಟ್ಟು ನಿಂತು, ಎಲ್.ಪಿ.ಜಿ. ನೀತಿಗಳ ವಿರುದ್ಧ ಎಡ ಸಂಘಟನೆಗಳು ಮತ್ತು ಜನತೆಯ ದಿಟ್ಟ, ನಿರಂತರ ಚಳುವಳಿಗಳೂ ಕಾರಣ. ಜನತೆಯ ಚಳುವಳಿಯನ್ನು ಹತ್ತಿಕ್ಕುವ ಮೂಲಕ ಇವೆಲ್ಲವನ್ನೂ ಖಾಸಗಿಯವರಿಗೆ ಒಪ್ಪಿಸುವ ಗುರಿಯೊಂದಿಗೆ ಹೆಜ್ಜೆ ಇಟ್ಟಿರುವ ಮೋದಿ ದೇಶವನ್ನು ನಾಶ ಮಾಡಲು ಹೊರಟಿದ್ದಾರೆ. ಇದನ್ನು ತಪ್ಪಿಸಲು ಜನತೆ ತಮ್ಮ ಚಳುವಳಿಯನ್ನು ಮತ್ತಷ್ಟು ವ್ಯಾಪಕಗೊಳಿಸಬೇಕಾಗಿದೆ.

ಇಲ್ಲ!ಈ ವರುಷದ ಆಗಸ್ಟ್ ಮಾನ್ಸೂನಿನ ಆಗಸ್ಟ್ ಅಂತ ಅನಿಸಲೇ ಇಲ್ಲ. ಇನ್ನೊಂದು ಬಾರಿ ಮೇ ತಿಂಗಳೇ ಬಂತೇನೊ ಎಂದೆನಿಸಿತು. ಭಾರತೀಯ ಹವಾಮಾನ ಇಲಾಖೆ, IMD ಈ ವರುಷದ ಮಾನ್ಸೂನ್ ವಾಡಿಕೆಯ ಮಳೆಯನ್ನೆ ತರುತ್ತದೆ ಎಂದೇ ಮುನ್ಸೂಚಿಸಿತ್ತು. ವಿಷಯ ನವಿರಾದುದಾದ್ದರಿಂದ ಹೆಸರು ಹೊರಗೆಡಹಬಾರದು ಎಂಬ ಕೋರಿಕೆಯ ಮೇರೆಗೆ ಹವಾಮಾನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ನಾವು ನಿರೀಕ್ಷಿಸಿದಂತೆ ಮಾನ್ಸೂನ್ ಚುರುಕಾಗಲಿಲ್ಲ. ದಕ್ಷಿಣ, ಪಶ್ಚಿಮ ಮತ್ತು ಮಧ್ಯ ಭಾರತದಲ್ಲಿ ಮಳೆಯ ಭಾರೀ ಕೊರತೆಯೊಂದಿಗೆ ಈ ವರುಷದ ಆಗಸ್ಟ್ ಕೊನೆಗೊಳ್ಳಲಿದೆ' ಎಂಬ ಕಳವಳವನ್ನು ಹೊರಗೆಡಹಿದ್ದರು. ನಿಜ, ಆಗಸ್ಟ್ ತಿಂಗಳ ಮಾನ್ಸೂನ್ ಮಳೆಯ ಹೆಗ್ಗೊರತೆ ಭಾರತದ '3 ಟ್ರಿಲಿಯನ್ ಎಕಾನಮಿ'ಯ ಮೇಲೆ ಭಾರೀ ಪರಿಣಾಮ ಬೀರಲಿದೆಯೆಂದು ಅಂದಾಜು ಮಾಡಲಾಗಿದೆ. ಹಾಗೆಯೆ ಇನ್ನುಮುಂದೆ ನಿಸರ್ಗದ ಆಗುಹೋಗುಗಳು ಮುನ್ಸೂಚನೆಯ ವಿವರಣೆಗೆ ದಕ್ಕುವುದು ಅನುಮಾನ ಎನ್ನಬಹುದಾಗಿದೆ.

'ಮಾನ್ಸೂನಿನ ಹೆಬ್ಬಾಗಿಲು' ಅಂದರೆ ಮಾನ್ಸೂನಿಗೆ ಮೊದಲು ದಿಡ್ಡಿಬಾಗಿಲು ತೆರೆಯುವ ಕೇರಳ ಒಂದರಲ್ಲೆ ಜೂನ್ 1ರಿಂದ ಆಗಸ್ಟ್ 25ರವರೆಗೆ ಬಿದ್ದ ಮಳೆಯ ಪ್ರಮಾಣವನ್ನು ಅಳೆದರೆ ಆ ಗಡುವಿನಲ್ಲಿ ವಾಡಿಕೆಗಿಂತ ಶೇಕಡಾ 47ರಷ್ಟು ಕೊರತೆ ಕಂಡುಬಂದಿದೆ. ಮುಚ್ಚುಮರೆಯಿಲ್ಲದೆ ಹೇಳಬೇಕೆಂದರೆ ಕೇರಳ ರಾಜ್ಯವೆ ಈ ವರುಷ ಬರಗಾಲಕ್ಕೆ ತುತ್ತಾಗಿದೆ. ಇನ್ನು ದೇಶದ ಕತೆ ಬಿಡಿಸಿ ಹೇಳಬೇಕೆ. ಮಾನ್ಸೂನ್ ಮಳೆ ಸಾಕಷ್ಟಾದರೆ ಬೇಸಗೆಯ ಧಗೆ ತಾನಾಗೆ ತಹಬಂದಿಗೆ ಬರುತ್ತದೆ. ಆದರೆ ಈ ಬಾರಿ ಹಾಗಾಗಿಲ್ಲ. ಈ ಕುರಿತು ಹೆಚ್ಚು ಚರ್ಚಿಸಿದರೆ ಜನರಲ್ಲಿ ಬೆಲೆಏರಿಕೆಯ ತಲ್ಲಣ ಮತ್ತು ಒಕ್ಕೂಟ ಸರ್ಕಾರಕ್ಕೆ ಮುಜುಗರ ಎರಡೂ ಒಟ್ಟಿಗೆ ಆಗುವುದರಿಂದ ಹವಾಮಾನ ಇಲಾಖೆಯ ಹಿರಿಯ ಅಧಿಕಾರಿ ತಮ್ಮ ಹೆಸರನ್ನು ಮುಚ್ಚಿಡಲು ಮಾಧ್ಯಮವನ್ನು ಕೋರಿದ್ದು (ನೋಡಿ, ಆಗಸ್ಟ್ 18ರ NDTV ವರದಿ. ತಲೆಬರಹವನ್ನು India Witnesses Driest August In 100 Years, Threatening Summer Crops ಎಂದು ಮಿಂದಾಣದಲ್ಲಿ ಅಚ್ಚಿಸಿ. ಅಂದಹಾಗೆ ನಿಸರ್ಗದ ಸತ್ಯಗಳನ್ನು ನಾವು ಮುಚ್ಚಿಟ್ಟಷ್ಟೂ ಜನರಲ್ಲಿ ಹವಾಮಾನ ಬದಲಾವಣೆಯ ಕುರಿತ ಅಗತ್ಯದ ಅರಿವನ್ನು ಮೂಡಿಸುವಲ್ಲಿ ಹಿಂದೆಬೀಳುತ್ತೇವೆ. ಇರಲಿ ಇದು ಬೇರೆ ವಿಚಾರ).

ಭಾರತದ ನೀರಿನ ಆಸರೆಗಳು ಭರ್ತಿಯಾಗಲು ಶೇಕಡಾ 70ರಷ್ಟು ಆಗಸ್ಟಿನ ಮಾನ್ಸೂನ್ ಮಳೆಗಳೇ ನೆರವಾಗುವುದು. ಆದರೆ ಈ ಬಾರಿ!? IMD ಈ ವರುಷ ಆಗಸ್ಟ್‌ನಲ್ಲಿ ಕೇವಲ ಶೇಕಡಾ 8ರಷ್ಟು ಮಳೆಯ ಕೊರತೆಯನ್ನು ಲೆಕ್ಕಿಸಿತ್ತು. ಆದರೆ ಆಗಸ್ಟ್ ಅರ್ಧ ಕಳೆಯುವ ಹೊತ್ತಿಗೇ ಶೇಕಡಾ 40ರಷ್ಟು ಕೊರತೆ ದಾಖಲಾಗಿತ್ತು. ಬೇಸಗೆಯ ಬೆಳೆಗಳಾದ ಭತ್ತ, ಜೋಳ, ಹತ್ತಿ, ಸೋಯಾ, ಕಬ್ಬು,



ಕಡಲೆಬೀಜ ಮುಂತಾದವಕ್ಕೆ ಮಾನ್ಸೂನ್ ಮಳೆ ಬಹಳ ನೆರವಾಗುತ್ತಿತ್ತು. ಈ ವರುಷ ಈ ಬೆಳೆಗಳಲ್ಲಿ ಬಿತ್ತನೆಯಾದದ್ದಷ್ಟಾದರೂ ಕೈಗೆ ಹತ್ತುವ ಬಗ್ಗೆ ಅನುಮಾನವಿದೆ. ಹಿಂದೆಲ್ಲ ಆಗಸ್ಟ್ ತಿಂಗಳಲ್ಲಿ ಭಾರತ ಐದರಿಂದ ಏಳು ದಿನಗಳು ಮಾತ್ರ ಮಳೆಯನ್ನು ಪಡೆಯುತ್ತಿರಲಿಲ್ಲ. ಈ ವರುಷ ಈ ಬೆಳವಣಿಗೆ ತಿರುಗುಮುರುಗಾದಂತಿದೆ. ಸದ್ಯ ಭಾರತದ ಶೇಕಡಾ 50ರಷ್ಟು ಬಿತ್ತನೆಗೊಂಡ ಸಾಗುವಳಿಯ ಜಮೀನು ಮಳೆಗೆ ಬಾಯ್ದೆಗೆದುಕೊಂಡು ಮಲಗಿದೆ. ಮಳೆ ಇನ್ನೂ ತಡವಾದರೆ ಒಟ್ಟಾರೆ ಇಳುವರಿ 50ರಷ್ಟು ಕಡಿತಗೊಳ್ಳಲಿದೆ ಎಂದೆ ಅರ್ಥ. ಆಗಸ್ಟ್ 26ನೇ ತಾರೀಕಿನ ಹೊತ್ತಿಗೆ ದೇಶದ ಶೇಕಡಾ 39ರಷ್ಟು ಪ್ರದೇಶ ಸಾಮಾನ್ಯದಿಂದ ಅತಿಯಾದ ಒಣಹವೆಯನ್ನು ಪಡೆದಿತ್ತು. ಈ ಒಣಹವೆಯನ್ನು IMD ಬರ ಎಂದು ಕರೆಯಲು ಹಿಂದೇಟು ಹಾಕಿದರೂ ಅದು ಮಾನ್ಸೂನ್ ಕಾಲದ ಬರ(Monsoon drought)ವೇ ಆಗಿದೆ. ಸೆಪ್ಟೆಂಬರ್ 15ರ ಒಳಗಾಗಿ ಆಗುವ ಮಳೆಗಳು ಭಾರತದ ಆರ್ಥಿಕ ಭವಿಷ್ಯವನ್ನು ತೀರ್ಮಾನಿಸಲಿವೆ. ●

ಬಿಜೆಪಿ ಸರ್ಕಾರದ ಚಿಂತನೆಯ ಅಸಂಬದ್ಧತೆ.... ಪುಟ 8 ರಿಂದ

ರೀತಿಯ ಉತ್ತೇಜಕಗಳನ್ನು ಒದಗಿಸುವುದರ ಸುತ್ತ ಕೇಂದ್ರೀಕರಿಸಿಕೊಂಡಿವೆ ಮತ್ತು ಜಿಡಿಪಿ ಬೆಳವಣಿಗೆಯ ದರವನ್ನು ವೇಗಗೊಳಿಸುವ ಉದ್ದೇಶ ಹೊಂದಿವೆ. ಆದಾಗ್ಯೂ, ಈ ಎಲ್ಲವೂ ಎರಡು ಸ್ಪಷ್ಟ ಕಾರಣಗಳಿಂದಾಗಿ ನಿಷ್ಪ್ರಯೋಜಕವಾಗಿವೆ: ಮೊದಲನೆಯದು, ಕೆಲವೇ ಕೆಲವು ಮಂದಿಯ ಹಿಡಿತದಲ್ಲಿರುವ (ಆಲಿಗೋಪೊಲಿಸ್ಟಿಕ್) ಮಾರುಕಟ್ಟೆಯಲ್ಲಿ, ಬಂಡವಾಳಗಾರರು ಮಾಡುವ ಹೂಡಿಕೆಯು, ಅದರಿಂದ ಎಷ್ಟು ಬೇಡಿಕೆ ಉಂಟಾಗಬಹುದು ಎಂಬ ನಿರೀಕ್ಷೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಬೇಡಿಕೆಯನ್ನು ವೃದ್ಧಿಸುವ ಕ್ರಮಗಳನ್ನು ಕೈಗೊಳ್ಳದಿದ್ದರೆ, ಬಂಡವಾಳಗಾರರಿಗೆ ಹೆಚ್ಚು ಹಣ ನೀಡುವುದರಿಂದಷ್ಟೇ ಹೂಡಿಕೆಯನ್ನು ಹೆಚ್ಚಿಸಲಾಗದು. ಒಂದು ವೇಳೆ ಬೇಡಿಕೆ ಹೆಚ್ಚುವ ಸಂಭವ ಇಲ್ಲದಿದ್ದರೆ ಅವರು ಹೂಡಿಕೆಯನ್ನು ಕೈಗೊಳ್ಳದೇ ತಮಗೆ ನೀಡಿದ ಹಣವನ್ನು ಜೇಬಿಗೆ ಹಾಕಿಕೊಳ್ಳುತ್ತಾರೆ. ಅದಕ್ಕಿಂತಲೂ ಮುಖ್ಯವಾದ ಒಂದು ಅಂಶವೆಂದರೆ, ಈ ಉದ್ದೇಶಕ್ಕಾಗಿ ಬಂಡವಾಳಗಾರರಿಗೆ ಹಣ ಒದಗಿಸಲು ಸರ್ಕಾರವು ತನ್ನ ಕೆಲವು ಖರ್ಚು-ವೆಚ್ಚಗಳನ್ನು ಕಡಿತಗೊಳಿಸುತ್ತದೆ (ವಿತ್ತೀಯ ಕೊರತೆಯನ್ನು ನಿಗದಿತ ಮಿತಿಯೊಳಗೆ ಇಟ್ಟುಕೊಳ್ಳುವ ಸಲುವಾಗಿ). ಆದರೆ, ಬಂಡವಾಳಗಾರರು ತಮಗೆ ಒದಗಿಸಿದ ಹಣವನ್ನು ಪೂರ್ಣವಾಗಿ ಹೂಡಿಕೆಗಾಗಿ ವಿನಿಯೋಗಿಸದ ಕಾರಣ, ಬೇಡಿಕೆಯು ನಿವ್ವಳವಾಗಿ ಕುಗ್ಗುತ್ತದೆ, ಅಂದರೆ, ಅರ್ಥವ್ಯವಸ್ಥೆ ಕುಗ್ಗುತ್ತದೆ. ಹಾಗಾಗಿ, ಇದು ಉದ್ದೇಶಿಸಿದ್ದಕ್ಕೆ ವಿರುದ್ಧವಾದ ಪರಿಣಾಮವನ್ನು ಉಂಟುಮಾಡುತ್ತದೆ. ಎರಡನೆಯದಾಗಿ, ಈ ಹಣ ಒಂದು ವೇಳೆ ಪೂರ್ಣವಾಗಿ ಹೂಡಿಕೆಯಾಗಿ ಆ ಮೂಲಕ ಜಿಡಿಪಿಯ ಬೆಳವಣಿಗೆಯನ್ನು ಹೆಚ್ಚಿಸಿದರೂ ಸಹ, ಯಾವ ವಲಯಗಳಲ್ಲಿ ಇಂಥಹ ಹೂಡಿಕೆಯಾಗಿರುತ್ತದೆಯೊ, ಅವು ಉದ್ಯೋಗ-ಸಾಂದ್ರವಲ್ಲದ ವಲಯಗಳು. ವಿಷಯವನ್ನು ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಸರ್ಕಾರ ಕೈಗೊಳ್ಳುವ ಕ್ರಮಗಳು, ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವ ಸಣ್ಣ ಕೈಗಾರಿಕೆ ಮತ್ತು ಕಿರು ಉತ್ಪಾದನಾ ವಲಯವನ್ನು ಉತ್ತೇಜಿಸುವ ನಿಟ್ಟಿನಲ್ಲಿಲ್ಲ.

ವಿಪರ್ಯಾಸವೆಂದರೆ, ಉದ್ಯೋಗಾವಕಾಶಗಳನ್ನು ಕಲ್ಪಿಸುವ ಹೆಸರಿನಲ್ಲಿ ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿಗಳನ್ನು ಒದಗಿಸುತ್ತಿರುವಾಗ, ಸರ್ಕಾರಿ ವಲಯದಲ್ಲಿ ಖಾಲಿ ಇರುವ ಬಹು ದೊಡ್ಡ ಸಂಖ್ಯೆಯ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯವಾದ ವೆಚ್ಚವನ್ನು ಸರ್ಕಾರವೇ ಕೈಗೊಳ್ಳುವುದಿಲ್ಲ. ಈ ಪರಿಸ್ಥಿತಿಗೆ ಹಣಕಾಸಿನ ಕೊರತೆಯೇ ಕಾರಣವೆಂಬುದು ಮೇಲ್ನೋಟದಲ್ಲಿ ತೋರುತ್ತದೆ. ಆದರೆ, ಹಣಕಾಸಿನ ಈ ಕೊರತೆಯು ಇತರ ವಿಷಯಗಳ ಜೊತೆಗೆ, ಬಂಡವಾಳಗಾರರಿಗೆ ಒದಗಿಸುವ ತೆರಿಗೆ ರಿಯಾಯಿತಿಗಳಿಂದ ಉಂಟಾಗುತ್ತದೆ. ಅಲ್ಲದೆ, ನಿರುದ್ಯೋಗ ದರ, ಅದರಲ್ಲೂ ವಿಶೇಷವಾಗಿ ಅಕ್ಟೋಬರ್ ಅಂಕಿಅಂಶಗಳು ಸೂಚಿಸುವಂತೆ ಗ್ರಾಮೀಣ ನಿರುದ್ಯೋಗ ದರ ಏರುತ್ತಿರುವ ಸಂದರ್ಭದಲ್ಲಿ, ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕಡಿತಗೊಳಿಸುತ್ತಿರುವುದೂ ಸಹ ಒಂದು ವಿಪರ್ಯಾಸವೇ ಸರಿ.

ದೊಡ್ಡ ದೊಡ್ಡ ಬಂಡವಾಳಗಾರರ ಪರವಾಗಿ ಹೊಂದಿರುವ ತನ್ನ ನಿರ್ದಯ ವರ್ಗ ಪಕ್ಷಪಾತದೊಂದಿಗೆ ಬಿಜೆಪಿ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯನ್ನು ವಿರೋಧಿಸುತ್ತಲೇ ಬಂದಿದೆ. ಒಂದಲ್ಲಾ ಒಂದು ನೆಪದಲ್ಲಿ ಅದು ಈ ಯೋಜನೆಯನ್ನು ಕೊನೆಗೊಳಿಸಲು ಹಾತೊರೆಯುತ್ತಿದೆ. ಭ್ರಷ್ಟಾಚಾರದ ಆರೋಪಗಳು ಈ ಯೋಜನೆಯನ್ನು ಮತ್ತಷ್ಟು ಮೊಟಕುಗೊಳಿಸಲು ಈಗ ಹೊಸ ನೆಪವಾಗಿವೆ. ಸಿಎಂಐಇ ದತ್ತಾಂಶವು ಹೆಚ್ಚುತ್ತಿರುವ ನಿರುದ್ಯೋಗ ಬಿಕ್ಕಟ್ಟನ್ನು ಎತ್ತಿ ತೋರಿಸುವುದರ ಜೊತೆಯಲ್ಲೇ, ನಿರುದ್ಯೋಗದ ಬಗ್ಗೆ ಬಿಜೆಪಿ ಸರ್ಕಾರವು ಹೊಂದಿರುವ ಚಿಂತನೆಯ ಅಸಂಬದ್ಧತೆಯನ್ನೂ ಬಹಿರಂಗಪಡಿಸುತ್ತದೆ. ●

ದಲಿತರ ರಾಜ್ಯ ಮಟ್ಟದ ಶೃಂಗ ಸಭೆ.... ಪುಟ 16 ರಿಂದ

ಸಂಘದ ಬಿ. ವೆಂಕಟ್, ಅಖಿಲ ಭಾರತ ದಲಿತ ಮುಖಂಡ ಎ.ಬಿ. ರಾಮಮೂರ್ತಿ, ಸಾಮಾಜಿಕ ಚಿಂತಕ ಸಿದ್ದನಗೌಡ ಪಾಟೀಲ, ದೇವದಾಸಿ ಮಹಿಳಾ ವಿಮೋಚನಾ ಸಂಘದ ಪ್ರಮುಖರಾದ ರೇಣುಕಮ್ಮ, ಬಿ.ಮಾಳಮ್ಮ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಗೋಪಾಲಕೃಷ್ಣ ಹರಳಹಳ್ಳಿ, ರಾಜಶೇಖರ ಮೂರ್ತಿ, ದಲಿತ ಸಂಘಟನೆಯ ಮುಖಂಡರಾದ ಮಾವಳ್ಳಿ ಶಂಕರ್, ಬಾಲ ಸುಂದರಂ ಮುಂತಾದವರು ಉಪಸ್ಥಿತರಿದ್ದರು.

ನಿರ್ಣಯಗಳು

ಭೂರಹಿತ ದಲಿತ ಸಮುದಾಯಕ್ಕೆ ಭೂಮಿ ವಿತರಣೆ, ಎಲ್ಲಾ ವಸತಿರಹಿತ ದಲಿತ ಕುಟುಂಬಗಳಿಗೆ ಸಮಾನ ವಸತಿ, ದಲಿತ ವಸತಿ ಪ್ರದೇಶಗಳಿಗೆ ಗುಣಮಟ್ಟದ ರಸ್ತೆಗಳು, ವಿದ್ಯುತ್ ಸಂಪರ್ಕ ಮತ್ತು ಕುಡಿಯುವ ನೀರಿನಂತಹ ಅಗತ್ಯ ಸೌಕರ್ಯಗಳು, ಶಿಕ್ಷಣ ಮತ್ತು ಅಗತ್ಯ ಜೀವನ ಕೌಶಲ್ಯಗಳನ್ನು ಸಂಯೋಜಿಸುವ ಆಧುನಿಕ ಸೌಲಭ್ಯಗಳೊಂದಿಗೆ ಸುಸಜ್ಜಿತವಾದ ವಸತಿ ಶಾಲೆಗಳು, ಪರಿಶಿಷ್ಟ ಜಾತಿಗಳಿಗೆ ರಾಷ್ಟ್ರವ್ಯಾಪಿ ಶಿಕ್ಷಣ ಮತ್ತು ಅಗತ್ಯ ಜೀವನ ಕೌಶಲ್ಯಗಳನ್ನು ಸಂಯೋಜಿಸುವ ಆಧುನಿಕ ಸೌಲಭ್ಯಗಳೊಂದಿಗೆ ಸುಸಜ್ಜಿತವಾದ ವಸತಿ ಶಾಲೆಗಳು ಮತ್ತು ಕಾಲೇಜುಗಳ ಸ್ಥಾಪನೆ, ಸರ್ಕಾರಿ ಉದ್ಯೋಗಗಳಲ್ಲಿ ಅರ್ಹತೆ ಆಧಾರಿತ ಬಡ್ತಿ, ಖಾಸಗಿ ವಲಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ,

ಕೆಳ ಅಂಚಿನಲ್ಲಿರುವ ಸಮುದಾಯಗಳ ಉನ್ನತಿಗಾಗಿ ಬಜೆಟ್ ಸಂಪನ್ಮೂಲಗಳ ಪರಿಣಾಮಕಾರಿ ಹಂಚಿಕೆ ಮತ್ತು ಅದರ ಬಳಕೆಯನ್ನು ಖಚಿತಪಡಿಸಿಕೊಳ್ಳಲು, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಕಾಯಿದೆಯನ್ನು ಜಾರಿಗೊಳಿಸಬೇಕು.

ತೆಲಂಗಾಣ ರಾಜ್ಯದ ಮಾದರಿಯಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದಲಿತರಿಗೆ ಉಪ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ, ಫಲಾನುಭವಿಗಳಿಗೆ ನೇರ ಪ್ರಯೋಜನಗಳನ್ನು ರಾಷ್ಟ್ರವ್ಯಾಪಿ ಖಾತ್ರಿಪಡಿಸಬೇಕು, ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕಾಯಿದೆಯ ಪರಿಣಾಮಕಾರಿ ಅನುಷ್ಠಾನವನ್ನು ಖಾತರಿಪಡಿಸುವುದು, ಎಂಬಿತ್ಯಾದಿ ನಿರ್ಣಯಗಳನ್ನು ಶೃಂಗಸಭೆಯಲ್ಲಿ ತೆಗೆದುಕೊಳ್ಳಲಾಯಿತು. ●

NEW No. MAG(3)/NPP/205/2021-2022
JANASHAKTHI KANNADA VARA PATRIKE November 20-26, 2023 Price: Rs. 10/- Date of Publication: 17 November 2023 RNI No. KARKAN /2006/17926 Posted on 20-11-2023
Posted at BG PSO, BG - 560026 **Posted at Periodical Rate -** Rs. 2





ದಲಿತರ ರಾಜ್ಯ ಮಟ್ಟದ ಶೃಂಗ ಸಭೆ

ಶೋಷಿತ ಸಮುದಾಯಗಳ ನಡುವೆ ಸೈದ್ಧಾಂತಿಕ ಅನುಸಂಧಾನದ ಅಗತ್ಯವಿದೆ–ಬರಗೂರು ರಾಮಚಂದ್ರಪ್ಪ

'ಎಡಪಂಥೀಯ ಸಂಘಟನೆಗಳೂ ಮತ್ತು ಇತರೆ ಸಂಘಟನೆಗಳೂ ಒಳಗೊಂಡು ನೇತೃತ್ವದಲ್ಲಿ ನಡೆಯುತ್ತಿರುವ ದಲಿತರ ಶೃಂಗ ಸಭೆಯಲ್ಲಿ ಬೇರೆ ಬೇರೆ ಸಂಘಟನೆಗಳೂ ಭಾಗವಹಿಸಿರುವುದು ಸಂತೋಷದ ವಿಷಯ. ನಮಗೆ ಸೈದ್ಧಾಂತಿಕ ಸಂಕುಚಿತತೆ ಬೇಕಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಯ ನಿವಾರಣೆಗಾಗಿ ಶೋಷಿತ ಸಮುದಾಯಗಳ ನಡುವೆ ಸೈದ್ಧಾಂತಿಕ ಅನುಸಂಧಾನದ ಅಗತ್ಯವಿದೆ. ಶೋಷಣೆಗೆ ಮತ್ತು ದಮನಕ್ಕೆ ಒಳಗಾಗಿರುವ ಎಲ್ಲರೂ ಒಂದಾಗಬೇಕಿದೆ' ಎಂದು ಬರಗೂರು ರಾಮಚಂದ್ರಪ್ಪ ಹೇಳಿದರು.

ನವೆಂಬರ್ 16ರಂದು ಬೆಂಗಳೂರಿನಲ್ಲಿ ನಡೆದ 'ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ದಿಕ್ಕು ದೆಸೆ' ಕುರಿತು ನಡೆದ ರಾಜ್ಯ ಮಟ್ಟದ ಶೃಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಜಾತಿ ವಿನಾಶದ ಜಾಗವನ್ನು ಜಾತಿವಾದ, ಸಾಮಾಜಿಕ ವಿವೇಕದ ಜಾಗವನ್ನು ಆರ್ಥಿಕ ಅವಿವೇಕ, ಮಾನವೀಯತೆ ಜಾಗವನ್ನು ಮತೀಯತೆ, ರಾಷ್ಟ್ರೀಕರಣ ಜಾಗವನ್ನು ಖಾಸಗೀಕರಣ ಆಕ್ರಮಿಸಿಕೊಂಡಿವೆ' ಎಂದು ವಿಷಾಧ ವ್ಯಕ್ತಪಡಿಸಿದರು.

ಬುದ್ಧ, ಬಸವ, ಗಾಂಧಿ ಮೊದಲಾದವರು ಸಮಾಜದ ಲೋಪಗಳಿಂದ ಬೇಸತ್ತು ಅನುಭವಿಸಿದ ಪಾಪಪ್ರಜ್ಞೆ, ಹುಟ್ಟಿನಿಂದಲೇ ಶೋಷಣೆಗೆ ಒಳಗಾಗಿ ಅಂಬೇಡ್ಕರ್ ಅಂತವರು ಕಂಡುಕೊಂಡ ಜಾಗೃತ ಪ್ರಜ್ಞೆಗಳು ಮಿಳಿತವಾಗಬೇಕು. ಶೋಷಣೆ, ಅಸಮಾನತೆಯ ವಿರೋಧವು ಚಾರಿತ್ರಿಕ ಮತ್ತು ಸಮಕಾಲೀನ ಪ್ರಜ್ಞೆಯ ಜತೆ ಸಾಗಬೇಕು. ಆಗ ಮಾತ್ರ ಮತೀಯತೆ ಜಾಗದಲ್ಲಿ ಮಾನವೀಯತೆ ನೆಲೆಸಲು ಸಾಧ್ಯ ಎಂದರು.

'ನಾವು ನಮ್ಮ ಮನೆಗೆ ಬರುವವರಲ್ಲಿ ಕೆಲವರನ್ನು ಅಂಗಳದಲ್ಲಿ ನಿಲ್ಲಿಸಿ ಮಾತನಾಡುತ್ತೇವೆ. ಕೆಲವರನ್ನು ಪಡಶಾಲೆಯವರೆಗೂ ಬಿಟ್ಟುಕೊಳ್ಳುತ್ತೇವೆ, ಕೆಲವರನ್ನು ಹಜಾರದಲ್ಲಿ ಕೂರಿಸುತ್ತೇವೆ, ಕೆಲವರನ್ನು ಅಡುಗೆ ಮನೆಗೂ ಪ್ರವೇಶಿಸಲು ಬಿಡುತ್ತೇವೆ. ಇವೆಲ್ಲವೂ ಒಬ್ಬ–ಮತ್ತೊಬ್ಬ ಮನುಷ್ಯರ ನಡುವಿನಅಂತರವು ಎಷ್ಟು ದೂರ ಎನ್ನುವುದರ ಪ್ರತೀಕ. ದೂರ ಎನ್ನುವುದು ದೇಶದ ಇಂದಿನ ಮಾನದಂಡವೂ ಆಗಿರುವುದು ವಿಪರ್ಯಾಸ. ಇಂತಹ ದೂರಗಳನ್ನು ಸಮೀಪ ಮಾಡಲು ಶೋಷಿತರ ಏಕತೆ ಅಗತ್ಯ. ಶೂದ್ರರ ನಡುವೆ, ಶೋಷಿತ ವರ್ಗಗಳ ನಡುವೆಯೂ ಶ್ರೇಣೀಕರಣ ಇದೆ. ಇದನ್ನು ನಾವು ಕಡಿಮೆ ಮಾಡಿಕೊಳ್ಳಬೇಕು. ಜಾತಿ, ವರ್ಗದ ಕಾರಣಕ್ಕಾಗಿ ಸೃಷ್ಟಿಯಾಗಿರುವ ಇಂತಹ ಅಸಮಾನತೆ ಹೋಗಲಾಡಿಸಲು ಸೂಕ್ತವಾದ ಸೈದ್ಧಾಂತಿಕ ದಿಕ್ಕುದಿಸೆ ಕಂಡುಕೊಳ್ಳಬೇಕು. ಮೂಲ ಆಶಯಗಳಿಗೆ ಧಕ್ಕೆಯಾಗದಂತೆ ಸೈದ್ಧಾಂತಿಕ ಸಂಕುಚತೆ ತೊರೆಯಬೇಕು. ಅಲೆಮಾರಿ, ಆದಿವಾಸಿ, ಬುಡಕಟ್ಟು ಸಮುದಾಯ ಸೇರಿದಂತೆ ಎಲ್ಲಾ ಶೋಷಿತರನ್ನೂ ಒಳಗೊಂಡು ಒಗ್ಗಟ್ಟು ಸಾಧಿಸಬೇಕು. ಜಾತಿ, ವರ್ಗದ ಒಳಗಿನ ಸವಾಲುಗಳನ್ನು ಮೆಟ್ಟಿನಿಲ್ಲಬೇಕು. ನವ ಉದಾರವಾದಿ ನೀತಿಗಳ ಕಾರಣದಿಂದಾಗಿ ಇಂದು ಶಿಕ್ಷಣ, ಆರೋಗ್ಯ ದಂತಹ ಸೇವಾ ಕ್ಷೇತ್ರಗಳೂ ಉದ್ಯಮಗಳಾಗಿವೆ. ನಾವು ಖಾಸಗೀಕರಣದ ಅಪಾಯಗಳನ್ನು ಗಮನಿಸಬೇಕು' ಎಂದು ಸಲಹೆ ನೀಡಿದರು.

ಡಿಸೆಂಬರ್ 4 ದೆಹಲಿ ಚಲೋ

2023ರ ಆಗಸ್ಟ್ 26 ಮತ್ತು 27ರಂದು ಹೈದರಾಬಾದ್ ನಲ್ಲಿ ರಾಷ್ಟ್ರೀಯ ದಲಿತರ ಶೃಂಗ ಸಭೆಯನ್ನು ಆಯೋಜಿಸಲಾಗಿತ್ತು. 25 ರಾಜ್ಯಗಳಿಂದ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಾನತೆಗಾಗಿ ಹೋರಾಡುತ್ತಿರುವ ನೂರಕ್ಕೂ ಹೆಚ್ಚು ಸಂಘಟನೆಗಳು ಇದರಲ್ಲಿ ಭಾಗವಹಿಸಿದ್ದರು. ಈ ಸಭೆಯ ನಿರ್ಣಯದಂತೆ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ದಲಿತರ ಶೃಂಗ ಸಭೆಗಳು ನಡೆಯುತ್ತಿವೆ. ದಲಿತರ ಅಭಿವ್ಯಕ್ತಿ, ದೌರ್ಜನ್ಯ ತಡೆ, ಸಂವಿಧಾನದ ರಕ್ಷಣೆಗಾಗಿ ದೇಶಾದ್ಯಂತ ಒಂದು ಕೋಟಿ ಸಹಿ ಸಂಗ್ರಹ ಮಾಡುವ ಅಭಿಯಾನ ನಡೆಯುತ್ತಿದೆ. ಈ ಬೇಡಿಕೆಗೆಳಿಗೆ ಒತ್ತಾಯಿಸಿ 2023ರ ಡಿಸೆಂಬರ್ 4ರಂದು ದೆಹಲಿ ಚಲೋ ನಡೆಸುವ ಮೂಲಕ ಒಂದು ಕೋಟಿ ಸಹಿಯುಳ್ಳ ಮನವಿ ಪತ್ರವನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಲಾಗುವುದು. ಸಮಾನ ಮನಸ್ಕರು ಸಹಸ್ರಾರು ಸಂಖ್ಯೆಯಲ್ಲಿ ದೆಹಲಿ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯದಲ್ಲಿಯೂ ಬರದಿಂದ ಸಿದ್ದತೆಗಳು ನಡೆಯುತ್ತಿವೆ.

ನಮ್ಮ ಮುಂದೆ ಬಹಳಷ್ಟು ಸವಾಲುಗಳಿವೆ: ನ್ಯಾ. ಎಚ್.ಎನ್. ನಾಗಮೋಹನದಾಸ್

ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಮಾತಾನಾಡಿದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು, 'ಭಾರತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ವಿಷೇಶವಾದ ಜನವರ್ಗ. ಜಗತ್ತಿನಲ್ಲಿ ಯಾರೂ ಅನುಭವಿಸದೇ ಇರುವಂತಹ ನೋವು, ಕಷ್ಟ, ಶೋಷಣೆ, ಅವಮಾನ ಇವೆಲ್ಲವನ್ನೂ ಈ ಜನರು ಅನುಭವಿಸುತ್ತಿದ್ದಾರೆ. ಬಹಳ ಹಿಂದಿನಿಂದಲೂ ಇದರ ವಿರುದ್ದದ ಬಂಡಾಯ ಪ್ರಾರಂಭವಾಗಿದೆ. ಅಂತಿಮವಾಗಿ, ಅನುಷ್ಟಾನ ಗೊಳಿಸಬಹುದಾದ ಸಾಮಾಜಿಕನ್ಯಾಯ ರಾಜನೀತಿಯಾಗಬೇಕು ಎಂಬುದನ್ನು ಅಂಬೇಡ್ಕರ್ ಅವರು ಪ್ರತಿಪಾದಿಸಿದರು. ಈ ಸಂಬಂಧ ಅನೇಕ ವಿಚಾರಗಳನ್ನು ಸಂವಿಧಾನದಲ್ಲಿ ಅಳವಡಿಸಿದರು. ಈ ಕಾಲಮಾನದಲ್ಲಿ ಒಂದಷ್ಟು ಸಾಧನೆಯಾಗಿದೆಯಾದರೂ, ಏನನ್ನು ಸಾಧಿಸಬಹುದಾಗಿತ್ತೋ ಅಷ್ಟನ್ನು ಸಾಧಿಸಲಾಗಿಲ್ಲ. ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಮೂಲಭೂತ ಹಕ್ಕುಗಳನ್ನು, ಸಮಾನ ಅವಕಾಶಗಳನ್ನು, ಸಮಾನ ರಕ್ಷಣೆಯನ್ನು ಕೊಡಲಾಗಿದೆ. ಇದರ ಪರಿಣಾಮವಾಗಿ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯದಲ್ಲಿ ಮೀಸಲಾತಿ ದೊರಕಿದೆ. ಇದರ ಪರಿಣಾಮವೇ ದಲಿತ ಸಮುದಾಯ ಈ ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶ ಮಾಡಲು ಸಾಧ್ಯವಾಗಿದೆ. ಇಷ್ಟೆಲ್ಲಾ ಸಾಧನೆಗಳ ನಡುವೆಯೂ ಒಂದಷ್ಟು ಸಮಸ್ಯೆಗಳು ಮುಂದುವರೆದಿವೆ. ಸವಾಲುಗಳು ನಮ್ಮ ಮುಂದಿವೆ' ಎಂದರು.

ಈ ಸಮಸ್ಯೆಗಳಿಗೆ ಮತ್ತು ಇಂತಹ ಪರಿಸ್ಥಿತಿಗೆ ಕಾರಣಗಳೇನು ಎಂಬುದರ ಕುರಿತು ಆಳವಾದ ಆಧ್ಯಯನಗಳನ್ನು ನಡೆಸಬೇಕಿದೆ. ಅಧ್ಯಯನದ ಮೂಲಕ ಈ ಕಾರಣಗಳಿಗೆ ಪರಿಹಾರ ಕಂಡುಕೊಳ್ಳಲು ಸುಲಭವಾಗುತ್ತದೆ. ಇಂದು, ಹೋರಾಟಗಳಿಂದ ಗಳಿಸಿದ ಬಹಳಷ್ಟು ಕಲ್ಯಾಣ ಕಾರ್ಯಕ್ರಮಗಳಿವೆ. ಈ ಯೋಜನೆಗಳು ಅರ್ಹ ದಲಿತರಿಗೆ ದೊರಕುವಂತೆ ಹೋರಾಟ ನಡೆಸಬೇಕಿದೆ. ಬದಲಾದ ಪರಿಸ್ಥಿಯಲ್ಲಿ ನಿಮ್ಮ ಹೋರಾಟದ ಸ್ವರೂಪವೂ ಬದಲಾಗಬೇಕು. ಕಾನೂನಿನ ಮೂಲಕ ಹೋರಾಡುವುದರ ಜೊತೆಗೆ ಸೈದ್ಧಾಂತಿಕ ಹೋರಾಟಗಳೂ ನಡೆಯಬೇಕಿದೆ ಎಂದು ನ್ಯಾ.ನಾಗಮೋಹನದಾಸ್ ಅವರು ಹೇಳಿದರು.

ಅಂಬೇಡ್ಕರ್ ಮತ್ತು ಮಾರ್ಕ್ಸ್

'ಇದೊಂದು ಐತಿಹಾಸಿಕ ಸಭೆ' ಎಂದು ಮಾತು ಆರಂಭಿಸಿದ ಹೈದರಾಬಾದ್ ನ ದಲಿತ ಅದ್ಯಯನ ಕೇಂದ್ರದ ಮುಖ್ಯಸ್ಥರಾದ ಮಲ್ಲಪಲ್ಲಿ ಲಕ್ಷ್ಮಯ್ಯನವರು, 'ಅಂಬೇಡ್ಕರ್ ಮತ್ತು ಮಾರ್ಕ್ಸ್ ಈ ಇಬ್ಬರನ್ನು ಅನುಸರಿಸುತ್ತಿರುವವರು ಈ ಶೃಂಗ ಸಭೆಯಲ್ಲಿ ಒಟ್ಟಾಗಿ ಸೇರಿರುವುದೇ ಒಂದು ಐತಿಹಾಸಿಕ ಸಂದರ್ಭ' ಎಂದರು.

ನವ ಉದಾರವಾದಿ ನೀತಿಗಳ ನಂತರ ದಲಿತರು ಅದುವರೆಗೂ ಇದ್ದ ಅಲ್ಪಸ್ವಲ್ಪ ಭೂಮಿಯನ್ನೂ ಕಳೆದುಕೊಂಡಿದ್ದಾರೆ. ಇಂದು ಬಹುತೇಕ ದಲಿತರ ಬಳಿ ಭೂಮಿ, ಒಡವೆ, ಹಣ ಈ ಯಾವುದೇ ಆಸ್ತಿಯೂ ಇಲ್ಲ ಎನ್ನುತ್ತಾ, ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ದಲಿತರ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯಲ್ಲಿನ ಅಂಕಿ ಅಂಶಗಳನ್ನು ಅವರು ನೀಡಿದರು.

ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಚಂದ್ರಪ್ಪ ಹೊಸ್ಕರೆ ಸ್ವಾಗತಿಸಿದರು.

ಶೃಂಗಸಭೆಯ ಸಂಚಾಲಕರಾದ ಮಹೇಶ್ ಕುಮಾರ್ ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್, ಅಖಿಲ ಭಾರತ ಕೃಷಿ ಕೂಲಿಕಾರರ

ಪುಟ 15 ಕ್ಕೆ



ಕಾಂ.ಬಿ.ವೆಂಕಟ್

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**